
# ಕಲ್ಯಾಣ ಕಿರಣ

ಮಾರ್ಚ್ 2004 ಬೆಲೆ : ರೂ. 5-00





ಶರಣ ಅನಿಮಿಷಯ್ಯನ ಐಕ್ಯಸ್ಥಳದಿಂದ ಹೊರಟ ಅಲ್ಲಮಪ್ರಭು ಜ್ಯೋತಿ ಯಾತ್ರೆ



ಶಿವಮೊಗ್ಗದ ಮುಖ್ಯ ರಸ್ತೆಯಲ್ಲಿ ಸಾಗಿರುವ ಅಲ್ಲಮಪ್ರಭು ಜ್ಯೋತಿ ಯಾತ್ರೆಯ ಪಥ ಸಂಚಲನ

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

866666



ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಮೂರನೆಯ

# ಕಲ್ಯಾಣ ಪರ್ವ

## ಮೇ 1, 2 ಮತ್ತು 3 ರಂದು



ಗಣ ಧ್ವಜ

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಮೇ 1, 2 ಮತ್ತು 3 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 2 ರಂದು ಬೆಳಿಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ (ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ / ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

**★ ಶರಣರ ಬರುವೆಮಗೆ ಪ್ರಾಣ ಜೀವಾಳ ★**

**ಬೆಂಗಳೂರು ವಿಳಾಸ :**
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-23325335/23322790

**ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ**
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 08481-651921/652856

# ★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ
ಸಂಚಿಕೆ -01 ಮಾರ್ಚ್ 2004 ವಾರ್ಷಿಕ ಚಂದಾ 50 ರೂ

## ಕಿರಣಗನ್ನಡಿ



## ಬಸವ ತತ್ತ್ವ ತರಬೇತಿ ಕಮ್ಮಟ ಮುಂದೂಡಿಕೆ

ಶರಣ ಬಂಧುಗಳೇ,

2004ರ ಏಪ್ರಿಲ್ 18 ರಿಂದ ಬಸವ ತತ್ತ್ವ ತರಬೇತಿ ಕಮ್ಮಟ ಇಟ್ಟು, ನಂತರ ಮೇ 1, 2 ಮತ್ತು 3 ರಂದು ಕಲ್ಯಾಣ ಪರ್ವ ಮಾಡುವ ಉದ್ದೇಶವಿದ್ದಿತು. ಕಳೆದ ವರ್ಷ ಅದರಂತೆಯೇ ಮಾಡಲಾಯಿತು. ಆದರೆ ಈ ಬಾರಿ ಪೂಜ್ಯ ಮಾತಾಜಿಯವರು ಧಾರವಾಡ ಉತ್ತರ ಲೋಕ ಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾರಣ, ಈ ಕ್ಷೇತ್ರದ ಚುನಾವಣಾ ದಿನಾಂಕವು ದಿ. 26 ಕ್ಕೆ ಇರುವುದರಿಂದ ಪೂಜ್ಯ ಮಾತಾಜಿಯವರು ಲಭ್ಯವಿರುವುದಿಲ್ಲ ಮತ್ತು ಎಲ್ಲರೂ ಚುನಾವಣಾ ಪ್ರಚಾರದಲ್ಲಿ ತೊಡಗಿರುವುದರಿಂದ ಶಿಬಿರದಲ್ಲಿ ಭಾಗವಹಿಸಲು ಶರಣ ಬಂಧುಗಳಿಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಚುನಾವಣೆ ಮುಗಿಸಿ 27-4-2004 ಕ್ಕೆ ಸ್ವಯಂ ಸೇವಕರು ಬಸವ ಕಲ್ಯಾಣಕ್ಕೆ ಆಗಮಿಸಬೇಕೆಂದು ಕೋರುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 28437234
ತ್ವರಿತ ವ್ಯವಹಾರಕ್ಕೆ / ನಿಮ್ಮ ದೂರುಗಳಿಗಾಗಿ ಈ ದೂ. ಸಂಖ್ಯೆಗೆ ಕರೆ ಮಾಡಿ : 080-23325335

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ 35 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ
ಸಂಚಿಕೆ - 1 ಮಾರ್ಚ್ 2004 ವಾರ್ಷಿಕ ಚಂದಾ 50/- ರೂ

## ನುಡಿ ಕಾಣಿಕೆ

### ಎನ್ನ ಪರಮಗುರು ಬಸವಾತ್ಮಜೆ !

ಮಹಾಗುರು ಬಸವಣ್ಣನ ಕರುಣೆಯ ಕಂದ
ಮಹಾದೇವಿಯಕ್ಕನ ಪರಮಾರ್ಥವನವಗ್ರಹಿಸಿದ ತಪೋನಿಧಿ ತಾಯೆ !
ಗುರುಲಿಂಗಾನಂದರ ಕರಸಂಜಾತೆ ಮಾತೆ ಮಹಾದೇವಿ ತಾಯೆ !
ಎನ್ನ ಪರಮಗುರು ಶ್ರೀ ಬಸವಾತ್ಮಜೆ ತಾಯೆ ಶರಣು ॥1॥

ಈ ಪಾಷಂಡಿಗಳ ನಾಡಿನಲ್ಲಿ ಮತ್ತೆ,
ಲಿಂಗ ಭಕ್ತಿಯನಾರಂಭಿಸಿ ಲಿಂಗ ಮಂತ್ರವ ಬಿತ್ತಿ,
ಲಿಂಗದೇವನೆಂಬ ಮಹಾಬೆಳೆಯ ಬೆಳೆದು,
ಲಿಂಗಾನಂದವೆಂಬ ಸ್ವಾನುಭಾವದ ಪ್ರಸಾದವ ಉಣಿಸಿದ ಗುರುತಾಯೆ ಶರಣು ॥2॥

ಶರಣಮೇಳ ಗಣಮೇಳವ ಸುಫಲವ ಮಾಡಿ
'ಬಸವ ಗುರುವಿನ ತತ್ವ ಲೋಕದಿ ಹಬ್ಬಲಿ' ಎಂಬ
ಸಂಕಲ್ಪದಿಂದ ಬಸವ ಧರ್ಮ ಸಮ್ಮೇಳನ ನಡೆಸುತ
ಬಸವ ಬೆಳಗು ಹೊನಲಾಗಿ ಹರಿಸುತಿಹ ಮಹಾಮಾತೆ ಶರಣು ॥3॥

- ಎಂ. ಸಿ. ದನದಮನಿ
ಧಾರವಾಡ

## ವಿಜಯ ಕರ್ನಾಟಕ ಮತ್ತು Vijaya Times ತಪ್ಪದೇ ಓದಿರಿ

ಕನ್ನಡ ನಾಡು ಪಾರ್ಟಿಗೆ ರಾಷ್ಟ್ರೀಯ ಬಸವ ದಳದ ನೈತಿಕ ಬೆಂಬಲ ಕೊಡಲು ನಿರ್ಧರಿಸಲಾಗಿದೆ. ನಂತರದ ಬೆಳವಣಿಗೆಯಲ್ಲಿ ಧಾರವಾಡ ಉತ್ತರ ಲೋಕ ಸಭಾ ಕ್ಷೇತ್ರದಿಂದ ನಾನು ಸ್ಪರ್ಧಿಸಲಿದ್ದೇನೆ. ಕನ್ನಡ ನಾಡು ಪಕ್ಷದಿಂದ ನಿಲ್ಲುವ ಅಭ್ಯರ್ಥಿಗಳ ಪರವಾಗಿ ಪ್ರಚಾರ ಕಾರ್ಯದಲ್ಲಿ ನಮ್ಮ ರಾಷ್ಟ್ರೀಯ ಬಸವ ದಳದವರು ತೊಡಗಬೇಕಾಗುತ್ತದೆ. ವಿವರಗಳನ್ನು ಪ್ರತಿಕ್ಷಣವೂ ಪಡೆಯುತ್ತಿರಬೇಕಾಗುತ್ತದೆ. ಆದ್ದರಿಂದ ವಿಜಯ ಕರ್ನಾಟಕ ಪತ್ರಿಕೆಯನ್ನು ದಿನ ನಿತ್ಯ ಓದುವ ರೂಢಿ ಇಟ್ಟುಕೊಳ್ಳಬೇಕು. ಅನುಕೂಲತೆ ಇದ್ದವರು ಎರಡೂ ಪತ್ರಿಕೆ ಓದಿರಿ. ಆಂಗ್ಲ ಪತ್ರಿಕೆ Vijaya Times ಓದುವ ರೂಢಿಯಲ್ಲಿದ್ದವರು ಓದುವ ರೂಢಿ ಇಡಬೇಕೆಂದು ಸೂಚಿಸುತ್ತೇವೆ.

- ಮಾತಾಜಿ

ಸಂಪಾದಕೀಯ

# ಬಸವಣ್ಣನವರ ಹೆಸರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೇ ಸೂಕ್ತ ಪಶುವಿಶ್ವವಿದ್ಯಾಲಯಕ್ಕೆ ಸಮಂಜಸವಲ್ಲ

ಶ್ರೇಷ್ಠ ಸಮಾಜ ಸುಧಾರಕ ವಿಶ್ವಗುರು ಬಸವಣ್ಣನವರ ಹೆಸರನ್ನಿಟ್ಟು ಅವರಿಗೆ ಗೌರವ ಸೂಚಿಸಬೇಕೆಂಬ ಹಂಬಲ ಕರ್ನಾಟಕ ಸರ್ಕಾರಕ್ಕೆ ಇರುವುದೇ ಆದರೆ ಹಲವು ದಶಕಗಳ ಜನರ ಬೇಡಿಕೆಯಂತೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಇಡುವುದೇ ಸೂಕ್ತ, ಬೀದರಿನಲ್ಲಿ ಆಗಲಿರುವ ಪಶುವಿಶ್ವವಿದ್ಯಾಲಯಕ್ಕೆ ಇಡುವುದು ಸಮಂಜಸವಲ್ಲ.

ಈ ಅಭಿಪ್ರಾಯ ನೀಡುವ ಹಿನ್ನೆಲೆ ಪಶು ವಿಜ್ಞಾನ ಕೀಳೆಂದು ಅಲ್ಲ. ಪ್ರಸ್ತುತ ಪಶು ವಿಶ್ವವಿದ್ಯಾಲಯದ ವ್ಯಾಪ್ತಿ ಬಹಳ ಚಿಕ್ಕದು. ಬಸವಣ್ಣನವರು ಕೇವಲ ಮಾನವರ ಹಿತವನ್ನಷ್ಟೇ ಬಯಸದೆ ''ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ, ಕುಲಜ'' ಎಂದು ಪ್ರಾಣಿವರ್ಗಗಳ ಹಿತವನ್ನು ಬಯಸಿದರು. ''ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ'' ಎಂದು ಆ ಮೂಕ ಜೀವಿಗಳ ಬದುಕುವ ಹಕ್ಕನ್ನು ಎತ್ತಿಹಿಡಿದು ಶುದ್ಧ ಸಸ್ಯಾಹಾರದ ಜೀವನ ವಿಧಾನವನ್ನು ಅಳವಡಿಸುವ ಮೂಲಕ ಪ್ರಾಣಿಗಳ ಹತ್ಯೆ ತಡೆಗಟ್ಟಿದರು. ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿಬಲಿಯನ್ನು ತಪ್ಪಿಸಿದರು.

ಆದರೆ ಅವರ ಕೊಡುಗೆ ಮಾನವನ ಉದಾತ್ತ ಬದುಕಿನ ದೃಷ್ಟಿಯಿಂದ ಅವರ್ಣನೀಯ. ಆದ್ದರಿಂದ ಪಶುವಿಜ್ಞಾನಕ್ಕೆ ದುಡಿದ ಮಹಾನುಭಾವರ ಹೆಸರನ್ನು ಬೀದರಿನ ಪಶುವಿಶ್ವವಿದ್ಯಾಲಯಕ್ಕೆ ಇಟ್ಟು, ಕ್ರಾಂತಿ ಪುರುಷ ಬಸವಣ್ಣನವರ ಹೆಸರನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಇಡುವುದೇ ಸಮರ್ಥನೀಯ.

## ಬಸವಣ್ಣನವರಿಗೆ ಅವಮಾನ

''ಪಶು ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಇಡುವುದು ಅವರಿಗೆ ಮಾಡುವ ಅವಮಾನ'' ಎಂದು ಆಗಲೇ ಕೆಲವರಿಂದ ಆಕ್ಷೇಪ, ವಿರೋಧ ವ್ಯಕ್ತವಾಗುತ್ತಲಿದೆ. ಇದರರ್ಥ ಪಶುಗಳು ಕೀಳು ಎಂದಲ್ಲ. ಮಾನವನ ಭ್ರಷ್ಟತೆ, ಅವನು ಮಾಡುವ ಅನ್ಯಾಯ. ಅತ್ಯಾಚಾರ ದೃಷ್ಟಿಯಿಂದ ಮನುಷ್ಯನಿಗಿಂತ ಪಶುಗಳೇ ಮೇಲು. ಆದರೆ ಕ್ರಾಂತಿ ಪುರುಷ, ಮಹಾಮಾನವತಾವಾದಿ, ಶ್ರೇಷ್ಠ ಸಮಾಜ ಸುಧಾರಕ ಬಸವಣ್ಣನವರನ್ನು ಈಗಾಗಲೇ ಕೆಲವರು **ನಂದಿಯ** ಅವತಾರವಾಗಿ ಮಾಡಿ ಅವರ ತತ್ತ್ವಗಳನ್ನು ಮರೆಮಾಚುತ್ತಿರುವುದರಿಂದ ಬಸವ ಭಕ್ತರು ಪಶು ವಿಶ್ವವಿದ್ಯಾಲಯಕ್ಕೆ ಸಮಾಜ ಸುಧಾರಕ ಬಸವಣ್ಣನವರ ಹೆಸರು ಇಡಲು ತೀವ್ರ ವಿರೋಧ ವ್ಯಕ್ತಪಡಿಸುವದು ಅಸಹಜವೇನಲ್ಲ. ಸರ್ಕಾರದ ಈ ಪ್ರಯತ್ನದಲ್ಲಿ ಬಸವಣ್ಣನವರನ್ನು ಅವಮಾನ ಮಾಡುವ ಉದ್ದೇಶವಿದೆ ಎಂದು ಊಹಿಸುವುದರಲ್ಲಿ ತಪ್ಪೇನಿಲ್ಲ.

## ಬಸವಣ್ಣನವರ ಗುತ್ತಿಗೆ

ವಿಧಾನ ಸಭೆಯಲ್ಲಿ ಪ್ರಗತಿಪರ ಜನತಾ ದಳದ ಶಾಸಕ ಶ್ರೀ ಎಸ್.ಎಸ್. ಪಾಟೀಲರು ಆಕ್ಷೇಪ ವ್ಯಕ್ತಪಡಿಸಿದಾಗ ಗೃಹ ಸಚಿವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ''ಬಸವೇಶ್ವರರನ್ನು ನೀವೊಬ್ಬರೇ ಗುತ್ತಿಗೆ ತೆಗೆದು ಕೊಂಡಿದ್ದೀರಾ ?'' ಎಂದು ಕೇಳಿದ್ದಾರೆ. ಹಾಗಾದರೆ ''ಬಸವಣ್ಣನವರನ್ನು



ವಿರೋಧಿಸಬೇಕೆಂದು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಗುತ್ತಿಗೆ ತೆಗೆದುಕೊಂಡಿದ್ದಾರಾ ?'' ಎಂದು ನಾವೂ ಕೇಳಬಯಸುತ್ತೇವೆ.

ಭರತ ಖಂಡದ ಇತಿಹಾಸದಲ್ಲಿಯೇ ಮೊಟ್ಟಮೊದಲ ವ್ಯಕ್ತಿಯಾಗಿ ದಲಿತರ ಪರವಾಗಿ ಧ್ವನಿ ಎತ್ತಿದ ಕ್ರಾಂತಿಕಾರಿ ಬಸವಣ್ಣನವರು, ವರ್ಣಾಶ್ರಮ ವ್ಯವಸ್ಥೆಯ ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ಮೇಲಿನ ಮೆಟ್ಟಿಲಲ್ಲಿದ್ದ ಬ್ರಾಹ್ಮಣ ಕುಲದಲ್ಲಿ ಹುಟ್ಟಿಯೂ ತುಳಿತಕ್ಕೊಳಗಾದ ಶೂದ್ರ, ದಲಿತರ ಹಕ್ಕುಗಳನ್ನು ಎತ್ತಿ ಹಿಡಿದ ಬಸವಣ್ಣನವರ ಹೆಸರನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಇಡುವ ಬಗ್ಗೆ ಒಂದು ಚಳುವಳಿ ನಡೆದಾಗ ಬಸವಣ್ಣನವರ ಮಹೋನ್ನತ ಕೊಡುಗೆ ಮತ್ತು ತ್ಯಾಗದ ಅರಿವಿದ್ದ ದಲಿತರು ಈ ಚಳುವಳಿಗೆ ಪೂರ್ಣ ಸಹಕಾರವನ್ನು ನೀಡುತ್ತಿದ್ದಾಗ ಕೆಲವು ದಲಿತರನ್ನು ಎತ್ತಿಕಟ್ಟಿ ವಿರೋಧ ವ್ಯಕ್ತಪಡಿಸಲು ಪ್ರಚೋದನೆ ನೀಡಿದವರು ಮಲ್ಲಿಕಾರ್ಜುನ ಖರ್ಗೆಯವರಲ್ಲದೇ ಬೇರಲ್ಲ ಎಂಬುದು ಇನ್ನೂ ಎಲ್ಲರಲ್ಲಿ ಹಚ್ಚ ಹಸುರಾಗಿರುವ ನೆನಪು.

ಹಿರಿಯ ಸ್ಥಾನದಲ್ಲಿ ಇರುವ ಅವರು ಇಂಥ ದ್ವೇಷಪೂರಿತ ವರ್ತನೆ, ಪರಸ್ಪರರನ್ನು ಎತ್ತಿ ಕಟ್ಟುವ ಸಣ್ಣತನ ಬಿಡಲಿ. ಆಗ ಚಳುವಳಿ ತೀವ್ರವಾಗಿದ್ದಾಗ ಬೆಂಗಳೂರು ಬಸ್ ನಿಲ್ದಾಣಕ್ಕೆ ಶ್ರೀ ಕೆಂಪೇಗೌಡರ ಹೆಸರು, ಬೆಂಗಳೂರು ಅಥವಾ ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ಡಾ|| ಬಿ. ಆರ್. ಅಂಬೇಡ್ಕರ್ ಹೆಸರು, ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರು ಇಡಬೇಕೆಂಬ ಅಪೇಕ್ಷೆ ಅನೇಕರಿಂದ ವ್ಯಕ್ತವಾಗಿತ್ತು. ಬೆಂಗಳೂರು ಬಸ್ ನಿಲ್ದಾಣಕ್ಕೆ ಶ್ರೀ ಕೆಂಪೇಗೌಡರ ಹೆಸರು ಇಟ್ಟಾಗಿದೆ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಡಾ|| ಅಂಬೇಡ್ಕರರ ಹೆಸರು, ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರು ಇಟ್ಟು ಜನರ ಬೇಡಿಕೆ ಪೂರೈಸಲಿ. ಪಶುವಿಶ್ವವಿದ್ಯಾಲಯಕ್ಕೆ ಆ ಕ್ಷೇತ್ರದಲ್ಲಿ ಶ್ರಮಿಸಿದವರ ಹೆಸರು ಇಡಲಿ, ಬಸವಣ್ಣನವರ ಹೆಸರನ್ನಿಟ್ಟು ಅವರನ್ನು ಅವಮಾನಿಸುವುದು ಬೇಡ.

**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**

ಕೂಡಲ ಸಂಗಮ, 13-2-2004

## ಮುಂಬರುವ ದಿನಗಳಲ್ಲಿ ಒದಗುವ ಹಬ್ಬ - ಹುಣ್ಣಿಮೆ - ಉತ್ಸವಗಳು

| | | |
|---|---|---|
| ಮಾರ್ಚ್ 21 | ದೇವವಾರ | ಚಂದ್ರಮಾನ ಯುಗಾದಿ/ ಅಲ್ಲಮಪ್ರಭು ಜಯಂತಿ |
| ಏಪ್ರಿಲ್ 5 | ಶಿವವಾರ | ಜಗನ್ಮಾತಾ ಅಕ್ಕಮಹಾದೇವಿ ಜಯಂತಿ |
| ಏಪ್ರಿಲ್ 23 | ಮಾತೃವಾರ | ಬಸವ ಜಯಂತಿ/ ಲಿಂಗಾಯತರ ಹೊಸ ವರ್ಷ |
| ಮೇ 1 | ಶರಣವಾರ | ಕಾಯಕ ದಿನಾಚರಣೆ/ ಮಡಿವಾಳ ಮಾಚಿದೇವರ ಜಯಂತಿ |
| ಮೇ 1,2,3 | ಶರಣವಾರ | ಕಲ್ಯಾಣ ಪರ್ವ |
| ಜೂನ್ 17 | ಪ್ರಭುವಾರ | ಲಿಂಗಾನಂದ ಪೌರ್ಣಿಮೆ |
| ಜೂನ್ 30 | ಚೆನ್ನವಾರ | ಲಿಂ|| ಲಿಂಗಾನಂದ ಮಹಾಸ್ವಾಮಿಗಳ ಸಂಸ್ಮರಣೆ |

## ಕನ್ನಡ ನಾಡು ಪಾರ್ಟಿ - ಪ್ರಜ್ಞಾವಂತರ ಆಶಾಕಿರಣ

# ವ್ಯವಸ್ಥೆಯ ಬದಲಾವಣೆಗೆ ಬುಲೆಟ್ ಅಲ್ಲ ಬ್ಯಾಲೆಟ್ ಸೂಕ್ತ ಅಸ್ತ್ರ

ದೇಶದ ಪರಿಸ್ಥಿತಿಯನ್ನು ಕಂಡು ತಳಮಳಗೊಳ್ಳುತ್ತಿರುವ ಪ್ರಜ್ಞಾವಂತರು ದಿಕ್ಕು ತೋಚದೆ ಕಾರ್ಗತ್ತಲಲ್ಲಿ ತಡವರಿಸುತ್ತಲಿರುವಾಗ ಉದಯ ರವಿಯಂತೆ ಮೂಡಿ ಬಂದಿದೆ ಕನ್ನಡ ನಾಡು ಪಕ್ಷ. ವಿಧಾಯಕ ಚಿಂತನೆ, ದೇಶದ ಬಗ್ಗೆ ಕಳಕಳಿ, ರಾಜಕೀಯ ಒಳಸುಳಿಗಳ ಅರಿವು ಇರುವ ಪರಿಪಕ್ವ ರಾಜಕಾರಣ ಮುತ್ಸದ್ಧಿ ಶ್ರೀ ವಿಜಯ ಸಂಕೇಶ್ವರರು ಬಹಳ ಜನ ಚಿಂತನಶೀಲರ ಒಳದನಿಗೆ ಸಾಕಾರ ಕೊಡುವಂತೆ ಸಕಾಲದಲ್ಲಿ ಕನ್ನಡ ನಾಡು ಪಕ್ಷವನ್ನು ಕಟ್ಟಿದ್ದಾರೆ. ಇಂಥ ಸುಸಮಯದಲ್ಲಿ ತನು-ಮನ-ಧನಗಳನ್ನು ಸಮರ್ಪಿಸಿ ದುಡಿಯುವ ಜವಾಬ್ದಾರಿ ನಾಡ ಬಲ್ಲಿದರ ಮೇಲಿದೆ.

ವಿವಿಧ ಭಾಷೆ, ವಿವಿಧ ವೇಷ-ಭೂಷಣ-ಸಂಸ್ಕೃತಿಗಳ ಮಧ್ಯೆಯೂ ಏಕತೆ ಮತ್ತು ಸಮಗ್ರತೆ ಕಂಡುಕೊಳ್ಳಬೇಕಾದ ಭಾರತ ದೇಶದಲ್ಲಿ ಪ್ರಾದೇಶಿಕ ವೈಶಿಷ್ಟ್ಯ ಕಾಯ್ದುಕೊಳ್ಳುವುದೂ ಅತ್ಯಗತ್ಯ. ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತಿವೆ. ಅದೇ ರೀತಿ ಕನ್ನಡ ನಾಡಿನ ಸಮಗ್ರ ಹಿತವನ್ನು ಬಯಸುವ ಪ್ರಾದೇಶಿಕ ಪಕ್ಷದ ಆವಶ್ಯಕತೆ ಬಹಳವಿತ್ತು. ಅದನ್ನು ಮನಗಂಡು ಶ್ರೀ ವಿಜಯ ಸಂಕೇಶ್ವರ್ ಅವರು ಕನ್ನಡ ನಾಡು ಪಾರ್ಟಿಯನ್ನು ಸಂಸ್ಥಾಪನೆ ಮಾಡಿದ್ದು ಅಭಿನಂದನಾರ್ಹ.

ಸ್ವಾತಂತ್ರ್ಯ ಚಳುವಳಿಯಲ್ಲಿ ನಾಯಕತ್ವ ವಹಿಸಿದ ಕಾಂಗ್ರೆಸ್ ಪಕ್ಷ ತನ್ನ ಮೂಲ ಆಶಯವನ್ನು, ಮೂಲ ಸ್ಥಾಪಕರ ಆಶಯಗಳನ್ನು ಗಾಳಿಗೆ ತೂರಿ ನಡೆದಿರುವಾಗ, ಜನತಾ ದಳವು ಆಂತರಿಕ ಕಚ್ಚಾಟದಿಂದ ಶಿಥಿಲಗೊಂಡಿರುವಾಗ, ದೇಶದ ಸಮಸ್ಯೆಗಳು ಅಗಾಧವಾಗಿರುವಾಗ ಅವುಗಳ ಬಗ್ಗೆ ಗಂಭೀರವಾಗಿ ಚಿಂತಿಸದೆ ರಾಮಮಂದಿರವನ್ನು ಕಟ್ಟುವ ಘೋಷಣೆಯಲ್ಲಿ ನಿರತವಾಗಿ ವ್ಯರ್ಥ ಕಾಲಹರಣ ಮಾಡುತ್ತ ಬಹುಜನರಿಗೆ ನಿರಾಶೆ ಉಂಟು ಮಾಡಿರುವ ಬಿಜೆಪಿ, ಮುಂತಾದ ಪಕ್ಷಗಳು ಎಲ್ಲ ವರ್ಗದವರ ಮತ್ತು ಜನ ಸಾಮಾನ್ಯರ ಹಿತಕಾಯಲು ವಿಫಲವಾಗಿರುವಾಗ ಉದಾತ್ತ ಉದ್ದೇಶದೊಡನೆ ಸ್ಥಾಪಿತವಾಗಿರುವ ಕನ್ನಡ ನಾಡು ಪಕ್ಷವು ಬಹುಸೂಕ್ತ ಸಮಯದಲ್ಲಿ ರಾಜಕೀಯ ಆಗಸದಲ್ಲಿ ಮೂಡಿರುವುದು ಸಂತೋಷದ ಸಂಗತಿ.

### ಮಟ್ಟೆಣ್ಣನವರ ಆಕ್ರೋಶ

ಆದರ್ಶವಾದಿ ಎಂದು ಅನೇಕರು ಭಾವಿಸಿದ್ದ ಶ್ರೀ ಗಿರೀಶ್ ಮಟ್ಟೆಣ್ಣನವರು ಶಾಸಕರ ಭವನದಲ್ಲಿ ಹುಸಿ ಬಾಂಬ್ ಇಟ್ಟಾಗ, ಆ ವಿಧಾನವನ್ನು ಪ್ರಾಜ್ಞರು ಮೆಚ್ಚಿಕೊಳ್ಳದಿದ್ದರೂ ಅವರ ಅಂತರಂಗದಲ್ಲಿದ್ದ ಅಳಲನ್ನು ಅರಿತುಕೊಂಡು ಸಹಾನುಭೂತಿ, ಮೆಚ್ಚುಗೆ ಸೂಚಿಸಿದರು. ರಾಜಕೀಯ ಪಕ್ಷಗಳು ಇಂದು ನಡೆದುಕೊಳ್ಳುತ್ತಿರುವ ರೀತಿ, ರಾಜಕಾರಣಿಗಳ ಸ್ವಾರ್ಥ-ಅಧಿಕಾರ ದಾಹ, ದಿನದಿನಕ್ಕೂ ಪಾತಾಳಕ್ಕೆ ಇಳಿಯುತ್ತಿರುವ ಜನ ಸಾಮಾನ್ಯರ ದಯನೀಯ ಸ್ಥಿತಿ! ಇವುಗಳಿಂದ ತಪ್ತರಾಗಿರುವ ಅಸಂಖ್ಯಾತರ ಮೂಕ ಆಕ್ರೋಶಕ್ಕೆ ಮಟ್ಟೆಣ್ಣವರು ಸಾಕಾರ ಅಭಿವ್ಯಕ್ತಿ ಕೊಟ್ಟಿದ್ದಾರೆ ಎಂಬುದೇ ಮೆಚ್ಚುಗೆಯ ಹಿಂದಿದ್ದ ಕಾರಣ. ಆದರೆ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ವಿಧಾನ ಇದಲ್ಲ



ಎಂದು ಕಾನೂನು ತಜ್ಞರು ಮಾತ್ರವಲ್ಲದೆ ಎಲ್ಲ ಪ್ರಜ್ಞಾವಂತರೂ ಹೇಳಬೇಕಾಗುತ್ತದೆ. ಆದ್ದರಿಂದ ಒಂದು ಕೆಟ್ಟು ಹೋದ ವ್ಯವಸ್ಥೆಯನ್ನು ಸರಿಪಡಿಸಲು ಪರ್ಯಾಯ ವ್ಯವಸ್ಥೆಗೆ ಮೊರೆ ಹೋಗಬೇಕಾಗುತ್ತದೆ. ಪ್ರಜಾಪ್ರಭುತ್ವದ ಅಸ್ತ್ರ ಚುನಾವಣೆ ; ಸಂವಿಧಾನವು ಮತದಾನದ ಮೂಲಕ ತನ್ನ ಮತ್ತು ದೇಶದ ಭವಿಷ್ಯ ಬದಲಾಯಿಸುವ ಸದವಕಾಶ ನೀಡಿದೆ. ಆದ್ದರಿಂದ ಶ್ರೀ ವಿಜಯ ಸಂಕೇಶ್ವರ ಅವರು ವ್ಯವಸ್ಥೆಯನ್ನು ಬದಲಾಯಿಸಲು ನಕ್ಸಲೀಯರಂತೆ ಬುಲೆಟ್ಟನ್ನಾಗಲೀ, ಶ್ರೀ ಗಿರೀಶ್ ಮಟ್ಟೆಣ್ಣನವರಂತೆ ಹುಸಿಬಾಂಬನ್ನಾಗಲೀ, ಭಯೋತ್ಪಾದಕರಂತೆ ನಿಜ ಬಾಂಬ್ ಅನ್ನಾಗಲಿ ಸ್ಫೋಟಿಸದೆ ಬ್ಯಾಲೆಟ್ ಪೇಪರ್ ಮೂಲಕ ಪ್ರಯತ್ನಿಸುತ್ತಿರುವುದು ಅಭಿನಂದನಾರ್ಹ.

ಇಂಥ ಸುಸಮಯ ಒದಗಿದಾಗ ಕನ್ನಡಿಗರು ತಮ್ಮಲ್ಲಿ ಹುದುಗಿರುವ ನಿರ್ಲಕ್ಷ್ಯ, ನಿರಭಿಮಾನ, ಕ್ಲೈಬ್ಯಗಳನ್ನು ಬದಿಗಿಟ್ಟು ಕನ್ನಡ ನಾಡು ಪಾರ್ಟಿಯನ್ನು ಬ..ುಮತದಿಂದ ಅಧಿಕಾರಕ್ಕೆ ತರಲು ಪ್ರಯತ್ನಿಸಬೇಕು. ಇಂಥ ಅವಕಾಶ ಕಳೆದುಕೊಂಡರೆ ಪುನಃ 5 ವರ್ಷಕಾಲ ಅವಕಾಶಕ್ಕಾಗಿ ಕಾಯಬೇಕು. ರಾಷ್ಟ್ರೀಯ ಬಸವ ದಳದ ನೈತಿಕ ಬೆಂಬಲವು ಕನ್ನಡ ನಾಡು ಪಾರ್ಟಿಯ..ಂದಿಗೆ ಇದೆ ಎಂದು ದೃಢಪಡಿಸುವುದಲ್ಲದೆ ಕರ್ನಾಟಕ ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ ಜಾತಿ ಮತ ಧರ್ಮ ಭೇದವಿಲ್ಲದೆ ಎಲ್ಲರೂ ಕನ್ನಡನಾಡು ಪಾರ್ಟಿಯನ್ನು ಬೆಂಬಲಿಸಬೇಕೆಂದು ನಾನು ವೈಯಕ್ತಿಕವಾಗಿಯೂ ಜ..ನತೆಯಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

### ಧರ್ಮ ಮತ್ತು ರಾಜಕಾರಣ

ನಾಡಿನ ಹಿತಾಸಕ್ತಿಯನ್ನು ಕಾಯುವಲ್ಲಿ ಧರ್ಮ ಮತ್ತು ರಾಜಕಾರಣ ಎರಡೂ ಮಹತ್ವ ಪೂರ್ಣ ಶಕ್ತಿಗಳು. ರಾಜಕೀಯ ವ್ಯವಸ್ಥೆ ಶುದ್ಧೀಕರಣಗೊಳ್ಳದಿದ್ದರೆ ಧರ್ಮ ಮತ್ತು ನೀತಿಯ ಮಾತು..ಗಳು ಗಾಳಿಯಲ್ಲಿ ಕರಗಿ ಹೋಗುತ್ತವೆ. ಆದ್ದರಿಂದ ತಮ್ಮ ಮತ, ಸಂಸ್ಥೆಗಳಿಗೆ ಸಿಗುವ ಅನುಕೂಲತೆಗೆ ಮಾತ್ರ ಸೀಮಿತರಾಗದೆ ನಾಡಿನ ಎಲ್ಲ ಜನಾಂಗದ ಧರ್ಮಗುರುಗಳು, ಮಠಾಧೀಶರು ಈ ದಿಶೆಯಲ್ಲಿ ತಮ್ಮ ಅನುಯಾಯಿಗಳನ್ನು ಜಾಗೃತಗೊಳಿಸಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಾಸ್ತವ್ಯ - ಹುಬ್ಬಳ್ಳಿ / 1.5-2-2004

ಹೀಗೊಂದು ಪತ್ರಿಕಾಗೋಷ್ಠಿ

# ಕನ್ನಡನಾಡು ಪಕ್ಷಕ್ಕೆ ಶುಭಹಾರೈಕೆ

- ಮಾತಾಜಿ

ಪತ್ರಿಕಾ ಕರ್ತರ ಠೀವಿ, ಸ್ವಭಾವ ಅರ್ಥವಾಗಿರದ ದಿವಸಗಳು ಅವು. ಆಧ್ಯಾತ್ಮಿಕ ಪ್ರವೃತಿಯ ನಮಗೆ ಆಗ ಪತ್ರಿಕಾ ಕರ್ತರೆಂದರೆ ಏನೋ ಭಯ. ''ಅವರಿಗೆ ವಿಶೇಷವಾಗಿ ತಿನ್ನಿಸಬೇಕು, ವಿಶೇಷ ಪಾನೀಯ ಕುಡಿಸಬೇಕು. ವಿಶೇಷ ಕೊಡುಗೆ (ಗಿಫ್ಟ್) ಕೊಡಬೇಕು'' ಎಂಬ ಭಯವನ್ನು ಅನೇಕರು ಹುಟ್ಟಿಸಿದ್ದರು. ಹೀಗಾಗಿ ನಮ್ಮ ಯಾವ ಕಾರ್ಯಕ್ರಮಕ್ಕೂ ಅವರನ್ನು ಆಹ್ವಾನಿಸುವ ಧೈರ್ಯ ತೋರಿರಲಿಲ್ಲ, ಎಷ್ಟೋ ಸಮಯದವರೆಗೆ, ಲಿಂ॥ ಪೂಜ್ಯ ಅಪ್ಪಾಜಿಯವರ ಪ್ರವಚನಕ್ಕೆ, ನಮ್ಮ ಪ್ರವಚನಕ್ಕೆ ಅಪಾರ ಸಂಖ್ಯೆಯಲ್ಲಿ ಜನಸ್ತೋಮ ಸೇರುತ್ತಿದ್ದರೂ ಪತ್ರಿಕೆಗಳಲ್ಲಿ ಬರುತ್ತಿಲ್ಲ ಎಂದು ಪೂಜ್ಯ ಅಪ್ಪಾಜಿ ಕೋಪ ಮಾಡಿಕೊಳ್ಳುತ್ತಿದ್ದರು. ಆದರೆ, ನಾವು ಅಧಿಕೃತವಾಗಿ ಆಹ್ವಾನಿಸದೆ ಇದ್ದರೆ ಅವರು ಬರುವುದಿಲ್ಲ, ಪತ್ರಿಕೆಯಲ್ಲಿ ಸುದ್ದಿಯೂ ಬರುವುದಿಲ್ಲ ಎಂಬುದು ನಮಗೆ ಆಗ ತಿಳಿದಿರಲಿಲ್ಲ.

''ಪ್ರೆಸ್ ಕ್ಲಬ್ ಮುಂತಾದಲ್ಲಿ ನಾವು-ಕಾವಿ ಧರಿಸಿದವರು ಹೋಗಬಾರದು, ಅಲ್ಲಿಯ ಪರಿಸರ ಚೆನ್ನಾಗಿರುವುದಿಲ್ಲ'' ಎಂದು ಕೆಲವರು ಭಕ್ತರು ಹೇಳಿದ್ದರು. ಹೀಗಾಗಿ ಎಲ್ಲಿಗೆ ಅವರನ್ನು ಕರೆಯಬೇಕು ? ಬೇರೆ ಹೋಟೆಲ್‌ಗಳಿಗೆ ಹೋಗಿ ಕರೆಯಲೂ ಇಷ್ಟವಿಲ್ಲ. ಒಮ್ಮೆ ಧೈರ್ಯ ಮಾಡಿ ಬೆಂಗಳೂರಿನ ಬಸವ ಮಂಟಪದಲ್ಲಿ ಕರೆದೆವು. ಅದೇ ಮೊದಲನೇ ಗೋಷ್ಠಿ. ನಮ್ಮ ಆಶ್ರಮದವರು ವಿಶೇಷ ಆಸಕ್ತಿಯಿಂದ ಚಿರೋಟಿ-ವಡೆ ಎಲ್ಲ ತಯಾರು ಮಾಡಿದ್ದರು. ವಾಹನವನ್ನು ಕಳಿಸಲು ಕೇಳಿದ್ದರು. ಒಂದು ವಿಶಿಷ್ಟ ಸ್ಥಳದಲ್ಲಿ ಎಲ್ಲರೂ ಸಮಾವೇಶವಾಗಿರುವುದಾಗಿ ತಿಳಿಸಿದ್ದರಿಂದ ಅಲ್ಲಿಗೆ ವಾಹನ ಹೋಗಿದ್ದಿತು. ಕೆಲವರು ರಾಜಾಜಿನಗರಕ್ಕೆ ಹತ್ತಿರದಲ್ಲಿ ಇದ್ದವರಲ್ಲಿ ಇಬ್ಬರು ತಾವೇ ನೇರವಾಗಿ ಬಂದಿದ್ದರು. ಬಂದವರಲ್ಲಿ ಕೆಲವರು ಬುಸ್ ಬುಸ್ ಎನ್ನುತ್ತಲೇ ಬಂದರು. ವಾಹನ ಬರುವುದರಲ್ಲಿ ತಡವಾಯಿತು ಎಂದರು. ಬ್ರಹ್ಮಾಂಡದಷ್ಟು ಕೆಲಸವಿದೆ ಎಂಬಂತೆ ಅವಸರ ಮಾಡಿದರು. ಸಾಮಾನ್ಯವಾಗಿ ನಮ್ಮ ಎದುರಿಗೆ ಅಂದರೆ ಗುರುಗಳ ಎದುರಿಗೆ ಭಕ್ತರು ತಿನ್ನಲು ಸಂಕೋಚ ಪಡುವಂತೆ ಪತ್ರಿಕೆಯವರೂ ಸಂಕೋಚ ಪಡುತ್ತಾರೆ ಎಂದು ನಮ್ಮ ಸಾಧಕರು ಮಾಡಿಟ್ಟ ಚಿರೋಟಿ ಮುಂತಾದುವನ್ನು ತಂದು ಕೊಡಲೂ ಒಲ್ಲರು. ಗೋಷ್ಠಿಯ ನಂತರ ಅಚ್ಚುಕಟ್ಟಾಗಿ ಊಟ ಮಾಡಿಸಬೇಕು ಎಂಬ ಆಶಯ ಇವರದು. ಪತ್ರಿಕಾ ಕರ್ತರು ಫಟಾಫಟ್ ಎಂದು 10 ನಿಮಿಷದಲ್ಲಿ ಗೋಷ್ಠಿ ಮುಗಿಸಿ ಹೊರಟಾಗ ಚಿರೋಟಿಗಾಗಿ ರವೆ ಕುಟ್ಟಿಕುಟ್ಟಿ ರಟ್ಟೆ ನೋವು ಮಾಡಿಕೊಂಡ ಎಲ್ಲರಿಗೂ ಪೆಚ್ಚು. ''ದಯವಿಟ್ಟು ತಿಂದು ಹೋಗಿರಿ'' ಎಂದು ಕಾರ್ಯಕರ್ತರು ವಿನಂತಿ ಮಾಡಿದರೂ ಮುಲಾಜಿಲ್ಲದೆ ಪತ್ರಿಕಾ ಕರ್ತರು ಎದ್ದು ಹೋದಾಗ ಚಿರೋಟಿ ಮಾಡಲು ಕಷ್ಟಪಟ್ಟವರ ಕಣ್ಣಲ್ಲಿ ನೀರೇ ನೀರು !

ಇದು ನಮ್ಮ ಬೆಂಗಳೂರಿಗೆ ಬಂದ ನಂತರದ ಮೊಟ್ಟ ಮೊದಲಿನ ಪತ್ರಿಕಾ ಗೋಷ್ಠಿಯ ಅನುಭವ. ಓರ್ವ ಹಿತೈಷಿ ಪತ್ರಿಕಾ ಪ್ರತಿನಿಧಿ ನಂತರ ಹೇಳಿದರು, '' ನೀವು ಅಷ್ಟೆಲ್ಲ ಕಷ್ಟತೆಗೆದುಕೊಳ್ಳುವ ಅಗತ್ಯವಿಲ್ಲ. ಪ್ರೆಸ್ ಕ್ಲಬ್‌ದಲ್ಲಿ ಕರೆದುಬಿಡಿರಿ. ನಿಮಗೆ ಶ್ರಮದಲ್ಲಿ ಉಳಿತಾಯ. ಅವರಿಗೆ ಸಮಯದಲ್ಲಿ ಉಳಿತಾಯ'' ಎಂದು. ಆಗಿನಿಂದ ಇದೇ ರೀತಿ ಮಾಡುತ್ತಲಿದ್ದೇವೆ.



ಅದೇ ರೀತಿಯ ಅನುಭವ ಇತ್ತೀಚೆಗೆ ಆಯಿತು. ಸಾಮಾನ್ಯವಾಗಿ ಧಾರವಾಡಕ್ಕಿಂತ ಹುಬ್ಬಳ್ಳಿಯಲ್ಲಿ ಹೆಚ್ಚಿನ ಪತ್ರಿಕಾ ಕಾರ್ಯಾಲಯಗಳು ಇರುತ್ತವಾದ್ದರಿಂದ ಹುಬ್ಬಳ್ಳಿಯಲ್ಲೇ ಗೋಷ್ಠಿ ಕರೆಯುತ್ತಿರುತ್ತೇವೆ. ''ಮಾತಾಜಿಯವರು ಧಾರವಾಡದಲ್ಲಿ ಏಕೆ ಕರೆಯುವುದಿಲ್ಲ ?'' ಎಂದು ಕಾರ್ಯಕ್ರಮವೊಂದರ ವರದಿ ಕೊಡಲು ಹೋದ ನಮ್ಮ ಕಾರ್ಯಕರ್ತರನ್ನು ಕೇಳಿದರಂತೆ. ಆದಕ್ಕಾಗಿ ಧಾರವಾಡದ ಆಶ್ರಮದಲ್ಲಿ ಒಂದು ಪತ್ರಿಕಾಗೋಷ್ಠಿ ಕರೆದೆ. ಅವರಿಗೆಲ್ಲ ಬಂದ ತಕ್ಷಣ ಜ್ಯೂಸ್, ಫೇಡೆ ಕೊಡುವುದು; ಗೋಷ್ಠಿಯ ನಂತರ ಹೋಳಿಗೆ ಊಟ ಮಾಡಿಸುವುದು ಎಂದು ಕಾರ್ಯಕರ್ತರು ಯೋಜನೆ ರೂಪಿಸಿದರು.

ಯಥಾ ಪ್ರಕಾರ ಕೆಲವರು ಬುಸುಗುಟ್ಟುತ್ತಲೇ ಬಂದರು. ಅಸಹನೆಯಿಂದಲೇ ಕುಳಿತರು. ಆದರಲ್ಲಿ ಒಬ್ಬಾತ ಬಹಳ ರಫ್ ಆಂಡ್ ಟಫ್. ಅಹಂಕಾರ ತುಂಬಿ ತುಳುಕುವಂಥ ವ್ಯಕ್ತಿ. ಕೆಲವು ಪತ್ರಿಕಾ ಕರ್ತರಿಗೆ, ತಮ್ಮ ಕೈಯಲ್ಲೊಂದು ಶಕ್ತಿಶಾಲಿ ಮಾಧ್ಯಮ ಇರುವುದರಿಂದ ತಾವು ಸರ್ವಶಕ್ತರು ಎಂಬ ಹಮ್ಮು ತುಂಬಿರುವಂತೆ ಕಾಣುತ್ತದೆ. ಪತ್ರಿಕಾಗೋಷ್ಠಿ ಕರೆದವರು ನಾವು. ನಮ್ಮ ವಿಚಾರ ಹೇಳಲಿಕ್ಕೆ ಕರೆದಿರುತ್ತೇವಾದರೂ, ಅದನ್ನು ಕೇಳದೆ ಆತ ತನ್ನದೇ ಮಾತುಗಳನ್ನು, ಬೇರೆಯವರಿಗೆ ಮಾತನಾಡಲು ಬಿಡದಂತೆ ಜೋರು ಧ್ವನಿಯಲ್ಲಿ ಆಡುತ್ತಲೇ ಇದ್ದರು. ಪತ್ರಿಕಾ ಧರ್ಮದ ಕನಿಷ್ಠ ಶಿಷ್ಟಾಚಾರವನ್ನೂ ಅಳವಡಿಸಿಕೊಂಡಂತೆ ಕಾಣಿಸದ ಆತನ ಬಾಯಿಗೆ ಹೆದರಿ ಉಳಿದವರು ತುಟಿಪಿಟಕ್ಕೆನ್ನದೆ ಕುಳಿತಿದ್ದರು.

ಊಟ ಮಾಡಿರಿ ಎಂದರೆ ' ಬೇಕಾಗಿಲ್ಲ ' ಎಂದು ಎಲ್ಲರಿಗೂ ಸೀನಿಯರ್ ವ್ಯಕ್ತಿ ಹೇಳುತ್ತಲೇ, ಆತನಿಗೆ ಅಂಜಿ ಉಳಿದವರೂ ಬೇಡ ಬೇಡ ಎಂದು ಹೋಗಿಬಿಟ್ಟರು. ಮಠದ ಸಾಧಕರಲ್ಲಿ ಒಬ್ಬಳು ಪತ್ರಿಕೆಯವರು ಬರುವುದಕ್ಕೆ ಮೊದಲು ಚಟಪಟಿಸುತ್ತಾ, '' ಯಾರ‍್ಯಾರೋ ಭಕ್ತರು ದರ್ಶನಕ್ಕೆ ಬಂದಿದ್ದಾರೆ. ನಾವು ಪತ್ರಿಕೆಯವರಿಗೆ ಮಾತ್ರ ಹೋಳಿಗೆ ಮಾಡಿದ್ದೇವೆ. ಜನರು ಜಾಸ್ತಿಯಾದರೆ ಏನು ಮಾಡುವುದು ?'' ಎನ್ನುತ್ತಿದ್ದಳು.

ಪತ್ರಿಕೆ ಪ್ರತಿನಿಧಿಗಳು ಎದ್ದು ಹೋದಾಗ, ಇವರಿಗೆಲ್ಲ ಆಘಾತವು ಆಯಿತಾದರೂ ಬಂದ ಭಕ್ತರಿಗೇ ಹೋಳಿಗೆ ಉಣ್ಣಿಸಿ ಸಂತೋಷಪಟ್ಟರು. ನಾನು ಹೇಳಿದೆ, ''ಧಾನೇ ಧಾನೇ ಪರ್ ಖಾನೇವಾಲೇಕಾ ನಾಂ ಲಿಖ್ಖಾಹೈ'' ಎಂಬ ಮಾತು ಸತ್ಯ. '' ಯಾರಿಗೆ ಪ್ರಸಾದದ ಋಣ ಇರುತ್ತದೋ ಅವರಿಗೆ ಅದು ಸಲ್ಲುತ್ತದೆ. ಪ್ರಸಾದ ಸ್ವೀಕರಿಸಲೂ ಪುಣ್ಯ ಬೇಕು !'' ಎಂದು. ಮಠದ ಸಾಧಕರನ್ನು ಸಮಾಧಾನ ಪಡಿಸಿದೆ. ಅವರಿಗೆಲ್ಲ ಆಶ್ಚರ್ಯ ಉಂಟು ಮಾಡಿದ ಸಂಗತಿ ಏನೆಂದರೆ! ಪ್ರಸಾದದ ಬಗ್ಗೆ ಸ್ವಲ್ಪವೂ ಗೌರವ-ಭಕ್ತಿ ಅವರಲ್ಲಿ ಇಲ್ಲವಲ್ಲ ಎಂಬುದು. ಪಾಪ, ಕೆಲವು ಸಂಭಾವಿತರು ಹಾಗೆಯೇ ಹೋಗಿದ್ದಕ್ಕೆ ತುಂಬಾ ಪರಿತಾಪ ಪಟ್ಟು, ''ಸೀನಿಯರ್ ಇರೋರು ಹಾಗೆ ಮಾಡಿದಾಗ ನಾವೆಲ್ಲ ಸಣ್ಣವರು, ಏನೂ ಮಾಡಲು ಸಾಧ್ಯವಿಲ್ಲ ದಯವಿಟ್ಟು ತಪ್ಪು ಭಾವಿಸಬೇಡಿರಿ'' ಎಂದು ಫೋನ್ ಮಾಡಿ ತಿಳಿಸಿದರು.

ನಮಗೆ ಇದೆಲ್ಲ ರೂಢಿಯಾಗಿದೆ. ಅವರು ತಮ್ಮಷ್ಟಕ್ಕೆ ತಾವೇ ಬಹಳ ದೊಡ್ಡವರು, ಉಳಿದೆಲ್ಲ (ವೃತ್ತಿಗಳವ) ರಿಗಿಂತ ಬಹಳ ಶ್ರೇಷ್ಠರು ಎಂದು ಭಾವಿಸುವಂತೆ ಭಾಸವಾಗುತ್ತದೆ. ರಾಜ್ಯಪಾಲರೇ ಇರಲಿ, ಮಂತ್ರಿಗಳೇ ಇರಲಿ, ಅಧಿಕಾರಿಗಳೇ ಇರಲಿ ಅಂತರಂಗದಲ್ಲಿ ಮಹಾತ್ಮರನ್ನು ಕಂಡರೆ ಭಕ್ತಿ-ಗೌರವ

ಇರಲಿ, ಬಿಡಲಿ ಶಿಷ್ಟಾಚಾರಕ್ಕಾದರೂ ನಮಸ್ಕರಿಸಿ ವಿನಯದಿಂದ ವರ್ತಿಸುತ್ತಾರೆ. ಪತ್ರಿಕಾ ಪ್ರತಿನಿಧಿಗಳಲ್ಲಿ ಅನೇಕರು, ' ನಮ್ಮ ಸಮಾನರಾರಿಹರು ?' ಎಂಬಂತೆ ವರ್ತಿಸುತ್ತಾರೆ.

ಒಮ್ಮೆ ಅಕಬರ್ ತನ್ನ ಆಸ್ಥಾನದಲ್ಲಿ ಚಕ್ರವರ್ತಿಯ ತಲೆಯ ಮೇಲೆ ಕೈ ಇಡುವವರು ಯಾರು ? ಎಂದು ಪ್ರಶ್ನಿಸಿದನಂತೆ. ಆಗ ಉಳಿದೆಲ್ಲರು, '' ಯಾರೂ ಇಡಲಾರರು'' ಎಂದು ಹೇಳಿದರಂತೆ. ಚಕ್ರವರ್ತಿಯ ತಲೆಯ ಮೇಲೆ ಕೈ ಇಡಲು ಯಾರಿಗೆ ಸಾಧ್ಯ ಎಂಬುದು ಅವರ ಭಾವ. ಆದರೆ ಬೀರಬಲ್ ಹೇಳಿದನಂತೆ ''ಕ್ಷೌರಿಕ ರಾಜನ ತಲೆಯ ಮೇಲೆ ಕೈ ಇಡಬಲ್ಲ'' ಎಂದು. ಹಾಗೆ ''ಯಾರನ್ನು ಬೇಕಾದರೂ ನಾವು ಪ್ರಶ್ನಿಸಬಲ್ಲೆವು'' ಎಂಬ ಹಮ್ಮು ಪತ್ರಿಕೆಯವರಲ್ಲಿ.

ಆದರೆ ಅವರ ಸ್ವಭಾವ ತಿಳಿಯದ ಸಾಮಾನ್ಯರು, ಭಕ್ತ ಜನರು ಪತ್ರಿಕಾಕರ್ತರ ವರ್ತನೆ ನೋಡಿ ಬೆಪ್ಪಾಗಿ ನಿಲ್ಲುತ್ತಾರೆ. ''ಪ್ರಸಾದ ತೆಗೆದುಕೊಂಡು ಹೋಗಿ'' ಎಂದರೆ ಜನರು ಮಾತು ಮೀರುವುದಿಲ್ಲ. ಪ್ರಸಾದ ಬಿಟ್ಟು ಹೋದರೆ ಏನು ಕೆಡುಕಾಗುವುದೋ ಎಂದು ಆಲೋಚಿಸುವರು. ಗುರುಗಳ ಎದುರಿಗೆ ಉದ್ಧಟತನದಿಂದ ಮಾತನಾಡುವುದಿಲ್ಲ. ಒಂದು ವೇಳೆ ವಿಚಾರಭಿನ್ನಾಭಿಪ್ರಾಯವಿದ್ದರೂ ಅದನ್ನು ಸೌಜನ್ಯದಿಂದಲೇ ಹೇಳುವರು. ಪತ್ರಿಕಾ ಕರ್ತರ ವಿಲಕ್ಷಣ ವರ್ತನೆಯನ್ನು ಕಂಡು ಬೆಪ್ಪಾಗಿ ನಿಂತ ಉಳಿದ ಭಕ್ತರಿಗೆ ಹೇಳಿದೆ, '' ನೀವೇನೂ ಗಾಬರಿಯಾಗಬೇಡಿ. ಅದು ಅವರ ಸಹಜ ವರ್ತನೆ. ನಮಗೆಲ್ಲ ರೂಢಿಯಾಗಿದೆ. ಅದಕ್ಕೇ ಕೋಪವೂ ಬರುವುದಿಲ್ಲ, ಬೇಸರವೂ ಆಗುವುದಿಲ್ಲ'' ಎಂದು ತಿಳಿಸಿದೆ.

ಕನ್ನಡ ನಾಡು ಪಕ್ಷವು ಪ್ರಾದೇಶಿಕ ಪಕ್ಷವಾಗಿದ್ದು ಕರ್ನಾಟಕದ ಹಿತದೃಷ್ಟಿಯಿಂದ ಇಂಥ ಒಂದು ಪಕ್ಷದ ಅಗತ್ಯವಿತ್ತಾದ್ದರಿಂದ ಇದಕ್ಕೆ ರಾಷ್ಟ್ರೀಯ ಬಸವ ದಳವು ನೈತಿಕ ಬೆಂಬಲವನ್ನು ನೀಡುತ್ತದೆಂದು ದಿ. 15-2-2004 ರಂದು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರ ಸಭೆಯೊಂದನ್ನು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದ ಬಸವ ಮಂಟಪದಲ್ಲಿ ಕರೆದು, ನಿರ್ಧರಿಸಲಾಗಿತ್ತು. ಈ ಘೋಷಣೆಯಿಂದ ಕೆಲವರಿಗೆ ತಳಮಳ . ಸಾಮಾನ್ಯವಾಗಿ ಒಂದೊಂದು ಪತ್ರಿಕೆ ಒಂದೊಂದು ಪಕ್ಷದ ಮುಖವಾಣಿಯಾಗಿರುತ್ತದೆ; ಇಲ್ಲವೇ ಬೆಂಬಲಿಸುತ್ತದೆ. ಹೀಗಾಗಿ ಕೆಲವು ಪತ್ರಿಕಾ ಪ್ರತಿನಿಧಿಗಳಿಗೆ ಅಸಹನೆ. ಈ ಗುಟ್ಟು ನಮಗೂ ಗೊತ್ತು. **ರೂಢಿಗೊಂಡ ವ್ಯವಸ್ಥೆಯ ಚಕ್ರವ್ಯೂಹವನ್ನು ಭೇದಿಸಿಯೇ ಎಲ್ಲರೂ ಎಲ್ಲ ರಂಗದಲ್ಲಿ ಮುಂದೆ ಬರಬೇಕಾಗುತ್ತದೆ.** ಅದು ಧಾರ್ಮಿಕ ಜಗತ್ತಿರಬಹುದು, ಸಾಹಿತ್ಯಿಕ ಇರಬಹುದು, ಪತ್ರಿಕೋದ್ಯಮ ಇರಬಹುದು, ರಾಜಕೀಯ ವ್ಯವಸ್ಥೆಯೇ ಇರಬಹುದು. ಅದರಲ್ಲೂ ಕೊಳೆತು ನಾರುತ್ತಿರುವ ರಾಜಕೀಯ ವ್ಯವಸ್ಥೆಯ ಚಕ್ರವ್ಯೂಹ ಭೇದಿಸುವುದೇನೂ ಹುಡುಗಾಟದ ಮಾತಲ್ಲ. ಧೈರ್ಯಮಾಡಿ ಇಂಥ ಚಕ್ರವ್ಯೂಹ ಭೇದನಕ್ಕೆ ಶ್ರೀ ವಿಜಯ ಸಂಕೇಶ್ವರ ಕೈಹಾಕಿದ್ದಾರೆ.

ವಿದೇಶಿ ಮೂಲದ ಶ್ರೀಮತಿ ಸೋನಿಯಾ ಗಾಂಧಿಯನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಇಟ್ಟುಕೊಂಡು ಹೊರಟಿರುವ ಕಾಂಗ್ರೆಸ್ಸಿಗರಲ್ಲಿ ಸ್ವಾಭಿಮಾನವಿಲ್ಲದುದನ್ನು ಕಂಡು ನನಗೆ ನಾಚಿಕೆ ಎನಿಸುತ್ತದೆ ಎಂದು ನಾನು ಹೇಳಿದಾಗ ''ಅವರು ಏಕಾಗಬಾರದು ?'' ಎಂದು ಪ್ರಶ್ನಿಸುತ್ತಿದ್ದ ಓರ್ವ ವ್ಯಕ್ತಿಗೆ ಬೇರೆ ಬೇರೆ ವಾದ ಮಂಡಿಸುತ್ತಲಿದ್ದರು. ''ಅತ್ಯಂತ ಸಂಕೀರ್ಣ ವ್ಯವಸ್ಥೆಯ ಈ ರಾಷ್ಟ್ರವನ್ನು



ಆಳುವ ಸಾಮರ್ಥ್ಯ ಶ್ರೀಮತಿ ಸೋನಿಯಾರಲ್ಲಿ ಇದೆಯೇ ?'' ಎಂದು ನಾನು ಕೇಳಿದೆ. ''ಪ್ರಧಾನಿ ಅಥವಾ ರಾಷ್ಟ್ರಾಧ್ಯಕ್ಷರು ಜಾಣರು, ಬುದ್ಧಿವಂತರೇ ಇರಬೇಕೆಂದೇನೂ ನಮ್ಮ ಸಂವಿಧಾನದಲ್ಲಿ ಇಲ್ಲ. ದಡ್ಡರೂ ಇರಬಹುದು. ಅವರ ಸುತ್ತ ಐ.ಎ.ಎಸ್, ಐ.ಪಿ.ಎಸ್. ಇತ್ಯಾದಿ ಆದ ಬುದ್ಧಿವಂತರ ದಂಡೇ ಇರುತ್ತದೆ. ಅವರೇ ಆಡಳಿತ ನಿರ್ವಹಣೆ ಮಾಡುತ್ತಾರೆ'' ಎಂದ ಆ ಪ್ರತಿನಿಧಿ. ನನಗೆ ಬಲು ಸೋಜಿಗವಾಯಿತು. ಆಗ ನಾನು ಹೇಳಿದೆ, ''ವ್ಯಕ್ತಿಯ ಕೈ, ಕಾಲು ಎಲ್ಲ ಬಹಳ ಗಟ್ಟಿಯಾಗಿ ಇದ್ದರೇನು; ಮೆದುಳು ಇವೆಲ್ಲವನ್ನು ನಿಯಂತ್ರಿಸದಿದ್ದರೆ ?''

ಹಾಗಾದರೆ ಪ್ರಧಾನಿ, ರಾಷ್ಟ್ರಾಧ್ಯಕ್ಷರು ಏಕೆ ಬೇಕು ? ಬರೀ ಐ.ಎ.ಎಸ್., ಐ.ಪಿ.ಎಸ್‌ಗಳೇ ಸಾಕಲ್ಲವೆ ? ಆತ ಹೇಳಿದ, ''ಗುರುಗಳು ಯಾವ ಪಕ್ಷದ ಪರವಾಗಿಯೂ ಮಾತನಾಡಬಾರದು. ಯಾವ ಪಕ್ಷದವರು ಬಂದರೂ ಆಶೀರ್ವದಿಸಿ ಕಳಿಸುವುದಷ್ಟೇ ಅವರ ಕೆಲಸ !'' ನಾನು ಹೇಳಿದೆ, ''ಈ ಧೋರಣೆಯಿಂದಲೇ ರಾಜಕೀಯ ಕ್ಷೇತ್ರ ಯಾವ ಧ್ಯೇಯ - ಆದರ್ಶಗಳಿಲ್ಲದೆ ಹೊಲಸೆದ್ದಿರುವುದು. ಸ್ವಾಮಿಗಳು ಮಠಾಧೀಶರು ಗ್ರ್ಯಾಂಟ್ ಮುಂತಾಗಿ ಸರ್ಕಾರದ ಹಂಗಿನಲ್ಲಿ ಇರುವುದರಿಂದ ತಮ್ಮ ಮಠಕ್ಕಷ್ಟು ಹಿತವಾದರೆ ಸಾಕು'' ಎಂದು ಮೌನವಾಗಿ ಭ್ರಷ್ಟ ವ್ಯವಸ್ಥೆಯನ್ನು ಪೋಷಿಸುತ್ತಾರೆ. ಸ್ಪಷ್ಟ ಅಭಿಪ್ರಾಯ ಹೇಳಿದರೆ, ಯಾರು ವಿರೋಧಿಗಳಾಗಿ ನಮಗೆ ತೊಂದರೆ ಕೊಡುವರೋ ಎಂದು ಅಂಜುತ್ತಾರೆ. ಇದರಿಂದಲೇ ರಾಜಕೀಯ ವ್ಯಕ್ತಿಗಳು ನಿರ್ಭಯವಾಗಿ ಭ್ರಷ್ಟಾಚಾರಿಗಳಾಗುತ್ತಾರೆ ''.

ಆತ ಹೇಳಿದ, ''ಧರ್ಮ ಮತ್ತು ರಾಜಕಾರಣಗಳನ್ನು ಬೆರೆಸಬಾರದು''. ''ಧರ್ಮವು ಒಂದು ಪರುಷಮಣಿ; ಅದರ ಸ್ಪರ್ಶ ಎಲ್ಲ ರಂಗಕ್ಕೂ ಬೇಕು. ಗಾಂಧೀಜಿ ಹೇಳಿದ್ದಾರೆ, "Politics without philosophy is a great sin'' ಎಂದು. ಧರ್ಮವು ತನ್ನ ಪ್ರಭಾವ ಮುದ್ರೆಯನ್ನು ರಾಜಕಾರಣದ ಮೇಲೆ ಒತ್ತಬೇಕು. ಆದರೆ ರಾಜಕಾರಣವು ಧರ್ಮದೊಳಕ್ಕೆ ಪ್ರವೇಶ ಮಾಡಬಾರದು'' ಎಂದು ನಾನು ಹೇಳಿದೆ.

''ಹಾಗಾದರೆ ನೀವು ಚುನಾವಣೆಯಲ್ಲಿ ಸ್ಪರ್ಧಿಸುವಿರಾ ?'' ಆತನ ಪ್ರಶ್ನೆ '' ಇಲ್ಲ; ನಾನು ಇಳಿಯುವುದಿಲ್ಲ. ಆದರೆ ಜನರಲ್ಲಿ ಜಾಗೃತಿ ಉಂಟು ಮಾಡಿ, ಮತದಾನದ ಮಹತ್ವವೇನು ? ಮತದಾನ ಎಂತಹ ಪವಿತ್ರ ಕರ್ತವ್ಯ ಎಂದು ಜಾಗೃತಿಸಿ, ಇಂದಿನ ರಾಜಕೀಯದಲ್ಲಿ ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು ತಿಳಿಸಬಯಸುತ್ತೇನೆ ''. ''ಹಾಗಾದರೆ ತಾವು ಕಾವಿ ತೆಗೆದು ಖಾದಿ ಧರಿಸಿ ನೇರ ರಾಜಕೀಯಕ್ಕೆ ಇಳಿಯುವುದು ಒಳ್ಳೆಯದು'' ಎಂದ. ಆತನ ಧ್ವನಿಯಲ್ಲಿದ್ದ ವ್ಯಂಗ್ಯ ಗುರುತಿಸಿ ಹೇಳಿದೆ, ''ನಮ್ಮ ಧರ್ಮಗುರು ಬಸವಣ್ಣನವರು ಆಧ್ಯಾತ್ಮ ಜೀವಿ, ಯೋಗಿಯಾಗಿ ಇದ್ದುಕೊಂಡೇ ಪ್ರಧಾನಿ ಹುದ್ದೆಯನ್ನು ನಿರ್ವಹಿಸಿದರು. ಅವರ ಸಿದ್ಧಾಂತದ ಪ್ರಕಾರ ಧರ್ಮ ಮತ್ತು ರಾಜಕೀಯ ಪರಸ್ಪರ ವಿರೋಧಾಭಾಸವೇನಲ್ಲ. ಆದ್ದರಿಂದ ಕಾವಿಧರಿಸಿ ಖಾದಿ ಹಾಕಿ ಏಕೆ ರಾಜಕಾರಣ ಮಾಡಬೇಕು, ಪ್ರಸಂಗ ಬಂದರೆ ಕಾವೀ ಧರಿಸಿಯೂ ಲೋಕ ಸೇವೆಯನ್ನು ರಾಜಕಾರಣದ ಮೂಲಕ ಮಾಡಬಹುದಲ್ಲವೆ ?'' ಎಂದೆ. ರಾಜಕಾರಣ ಬಹಳ ಹೊಲಸು ಅದರೊಳಕ್ಕೆ ಒಳ್ಳೆಯವರು ಇಳಿಯಬಾರದು ಎಂದು ಕೆಲವು ಅವ್ಯಾವಹಾರಿಕ ಸಜ್ಜನರು ಮಾತನಾಡಿದರೆ, ಕೆಲವು ರಾಜಕಾರಣಿಗಳು

"ರಾಜಕಾರಣ ಬಹಳ ಹೊಲಸು. ಗುರುಗಳು ಇದರೊಳಗೆ ಪ್ರವೇಶ ಮಾಡಬಾರದು" ಎನ್ನುತ್ತಾರೆ. ಅಂದರೆ ಇವರ ಧೋರಣೆ, ನಾವು ಕೊಳಕು ಮಾಡುತ್ತೇವೆ. ಸಾತ್ವಿಕರು ಹತ್ತಿರವೇ ಬರುವುದು ಬೇಡ. ಈ ಕೊಳಕು ಹೀಗೆಯೇ ಮುಂದುವರಿಯಲಿ ಎಂಬುದಾಗಿರಬಹುದೆ ? ಎಂಬ ಸಂದೇಹ ನನಗೆ ಬರುತ್ತದೆ. ದಿ. 15-2-2004 ರಂದು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರ ಸಭೆ ಕರೆದಾಗ ಕೆಲವರು ಆರಂಭದಲ್ಲಿ ಆಕ್ಷೇಪದ ಮಾತುಗಳನ್ನು ಸಭೆಯ ಮುಂದಿಟ್ಟರು " ಒಬ್ಬರಿಗೆ ಬೆಂಬಲ ನೀಡಿದರೆ ಬೇರೆಯ ಪಕ್ಷದವರು ವಿರೋಧಿಗಳಾಗುವುದಿಲ್ಲವೆ ?".

"ಹಾಗಂತ ಸತ್ಯವನ್ನು ನುಡಿಯುವುದು ಬಿಡಬೇಕೆ ? ಕಾಂಗ್ರೆಸ್ಸಿನವರಿಗೆ ನಾವು ಏನು ಕೆಟ್ಟದ್ದು ಮಾಡಿದ್ದೆವು ? ಕಾಂಗ್ರೆಸ್ಸಿಗರಾದ ಭೀಮಣ್ಣ ಖಂಡ್ರೆ ಮತ್ತು ಡಾ|| ಮಲಕರೆಡ್ಡಿ ಒತ್ತಾಯಿಸಿದರೆಂದು ಶ್ರೀ ಎಸ್.ಎಂ. ಕೃಷ್ಣ ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆ ಕಲ್ಯಾಣ ಪರ್ವಕ್ಕೆ ತೊಂದರೆ ಕೊಟ್ಟು ಬಂದಂತಹ ಸಾತ್ವಿಕ ಶರಣರಿಗೆ ಕಿರುಕುಳ ಕೊಡಲಿಲ್ಲವೆ ?" ನಾನು ಉತ್ತರಿಸಿದೆ. "ಇದಕ್ಕೆ ಕಾರಣ, ತಾವು ಸೋನಿಯಾ ಗಾಂಧಿ ಪ್ರಧಾನಿ ಆಗ ಬಾರದೆಂದು ಧೈರ್ಯವಾಗಿ ಹೇಳಿದ್ದೇ ಕಾರಣ ಎಂದು ಕೆಲವರು ಹೇಳುತ್ತಾರೆ" ಅವರ ಹೇಳಿಕೆ. "ಇದು ಪ್ರಜಾಪ್ರಭುತ್ವವೆ ? ವಾಲ್ಟೇರ್ ಎಂಬಾತ ಹೇಳುತ್ತಾನೆ, ನಿನ್ನ ಅಭಿಪ್ರಾಯವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಆದರೆ ನಿನ್ನ ಅಭಿಪ್ರಾಯ ವ್ಯಕ್ತಪಡಿಸುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇನೆ" ಎಂದು. ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದ ಮಾತ್ರಕ್ಕೆ ಜನರನ್ನು ಮುಖ್ಯಮಂತ್ರಿ ಹಿಂಸಿಸಬಹುದೆ ?

ಬೀದರ್ ಜಿಲ್ಲೆಯಲ್ಲಿ ಬಿ.ಜೆ.ಪಿ.ಗಾಗಿ "ರಾಷ್ಟ್ರೀಯ ಬಸವ ದಳದವರು ಎಷ್ಟು ದುಡಿದರು? ಕಲ್ಯಾಣ ಪರ್ವದಲ್ಲಿ ಮುಖ್ಯಮಂತ್ರಿ, ಗೃಹ ಮಂತ್ರಿ ತೊಂದರೆ ಕೊಟ್ಟಾಗ ಬಿ.ಜೆ.ಪಿ.ಯ ಐದು ಜನ ಎಂ.ಎಲ್.ಎ.ಗಳು ಎಲ್ಲಿದ್ದರು ? ಆ ದೌರ್ಜನ್ಯದ ವಿರುದ್ಧ ಒಂದು ಪ್ರತಿಭಟನೆಯ ಸೊಲ್ಲು ಸಹ ಎತ್ತಲಿಲ್ಲ. ಅಂದಾಗ ಯಾರು ವಿರೋಧ ಮಾಡಿದರೇನು ಬಿಟ್ಟರೇನು ? ಎದುರಿಸುವ ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕು" ಎಂದು ವಿವರಿಸಿದೆ.

" ಕನ್ನಡ ನಾಡು ಪಕ್ಷದ ಬಗ್ಗೆ ಒಲವು ತೋರಲು ಮುಖ್ಯ ಕಾರಣವೇನು ?" ರಾಷ್ಟ್ರೀಯ ಬಸವ ದಳದ ಹಲವರ ಪ್ರಶ್ನೆ. "ಕನ್ನಡ ನಾಡಿನ ನೆಲ-ಜಲ, ಹಿತ ರಕ್ಷಣೆಯ ಧ್ಯೇಯ". ನನ್ನ ಉತ್ತರ. "ಈ ರೀತಿ ಎಲ್ಲರೂ ಭರವಸೆ ಕೊಡುತ್ತಾರೆ...." ಕೆಲವರ ಸಂದೇಹ. "ಈವರೆಗಿನ ಶ್ರೀ ವಿಜಯ ಸಂಕೇಶ್ವರರ ಸಾಧನೆ ನೋಡಿದರೆ (ಮೊದಲೇ) ಆಡದೆ (ಕೃತಿಯಲ್ಲಿ) ಮಾಡುವ ಉತ್ತಮರು, ಕ್ರಿಯಾಶೀಲರು, ದೂರಗಾಮಿ ಚಿಂತನಶೀಲರು ಎನ್ನಿಸುತ್ತದೆ. ಸಹಸ್ರಾರು ಜನರಿಗೆ ಉದ್ಯೋಗ ಕಲ್ಪಿಸಿರುವ ಲಾರಿ, ಬಸ್ಸು, ಪತ್ರಿಕೋದ್ಯಮ- ಇವೆಲ್ಲವನ್ನು ಕಾಯಕವೇ ಕೈಲಾಸ ಎಂಬುವ ಸೂತ್ರದ ಮೇಲೇ ಬೆಳೆಸಿದ್ದಾರೆ. ಇದೇ ಕ್ರಿಯಾಶೀಲತೆ ವಿಸ್ತಾರಗೊಂಡರೆ ರಾಜ್ಯವು ಪ್ರಗತಿಯತ್ತ ಸಾಗಬಹುದೆಂಬ ಆಸೆ ನಮಗೆ ಮೂಡಿದೆ. ಕೆಟ್ಟು ಹೋಗಿರುವ ರಾಜಕೀಯ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ಸೂತ್ರಾನುಸಾರವೇ ಬದಲಿಸಬೇಕಲ್ಲವೆ ? ಆದ್ದರಿಂದ ನಕ್ಸಲೀಯರಂತೆ ಬುಲೆಟ್, ಮಟ್ಟಣ್ಣನವರಂತೆ ಹುಸಿ ಬಾಂಬ್‌ನಿಂದ ಬದಲಿಸಲು ಸಾಧ್ಯವಿಲ್ಲ. ಬುಲೆಟ್‌ನಿಂದ ಸಾಧಿಸಲಾರದ್ದನ್ನು ಬ್ಯಾಲೆಟ್‌ನಿಂದ ಸಾಧಿಸಲು ಹೊರಟಿರುವ ಕನ್ನಡ ನಾಡು ಪಾರ್ಟಿಗೆ ಯಶಸ್ಸನ್ನು ಹಾರೈಸೋಣ".



## ದಿ. 20-2-2004ರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ವಿವರ

## "ಪ್ರಜ್ಞಾವಂತ ನಾಗರಿಕರು ಮತದಾರರ ಜಾಗೃತಿ ಆಂದೋಲನ ಕೈಗೊಳ್ಳಬೇಕು"- ಜಗದ್ಗುರು ಮಾತೆ ಮಹಾದೇವಿ

"ಕೆಲವಾರು ವರ್ಷಗಳಿಂದ ನಮ್ಮ ರಾಜಕೀಯ ವ್ಯವಸ್ಥೆ ಕೆಳಮುಖವಾಗಿ ಜರಿಯುತ್ತಿರುವುದಲ್ಲದೆ ರಾಜಕೀಯ ಮುಂದಾಳುಗಳ ಚಾರಿತ್ರ್ಯ ಅತ್ಯಂತ ಕಳಂಕಿತವಾಗುತ್ತಿರುವುದು ತುಂಬಾ ಕಳವಳಕಾರಿ ಸಂಗತಿಯಾಗಿದೆ. ಹೇಗೆ ಸಿನಿಮಾರಂಗದಲ್ಲಿ ಕೆಲವು ಹೊಡೆದಾಟ, ಕೊಲೆ, ಅತ್ಯಾಚಾರ, ಅಶ್ಲೀಲ ನೃತ್ಯಗಳು ಇದ್ದರೆ ಅದರಲ್ಲಿ ಯಾವ ಕಥೆ, ಧ್ಯೇಯ ಇಲ್ಲದಿದ್ದರೂ ಅದು ಸಿನಿಮಾ ಎನ್ನಿಸಿಕೊಳ್ಳುವ ಮಟ್ಟಕ್ಕೆ ಚಲನಚಿತ್ರ ಜಗತ್ತು ಇಳಿದಿದೆಯೊ ಹಾಗೆ ರಾಜಕೀಯ ಪುಢಾರಿಗಳು ಎಷ್ಟು ಅಕ್ರಮ, ಹಗರಣ, ಗೂಂಡಾಗಿರಿ ಮಾಡಿ ವಿಪುಲ ಹಣ ಗಳಿಸಿದ್ದಾರೋ ಅದರ ಆಧಾರದ ಮೇಲೆ ಅವರ ಅರ್ಹತೆ ನಿರ್ಧಾರವಾಗುವ ಮಟ್ಟಕ್ಕೆ ರಾಜಕೀಯ ಕ್ಷೇತ್ರ ಕೊಳಕಾಗಿದೆ. ಪ್ರಜ್ಞಾವಂತರು ಈ ಕ್ಷೇತ್ರದ ಬಗ್ಗೆ ಜಿಗುಪ್ಸೆ ಹೊಂದಿ ತಮ್ಮ ಪಾಡಿಗೆ ತಾವು ಮತದಾನಕ್ಕೆ ಸಹ ಹೋಗದೆ ಮೂಲೆಯಲ್ಲಿ ಕುಳಿತುಕೊಳ್ಳುತ್ತಾರೆ. ಹೀಗಾದರೆ ಪರಿಸ್ಥಿತಿ ಸುಧಾರಿಸುವುದೆಂತು ? ಅಕ್ರಮ ರೀತಿಯಲ್ಲಿ ಹಣ ವ್ಯಯಿಸಿ ಹೆಂಡ ಹಂಚಿ ಬೇಜವಾಬ್ದಾರಿ ಮತದಾರರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ಅನೈತಿಕ ವ್ಯವಸ್ಥೆಯನ್ನು ಕಾಂಗ್ರೆಸ್ ಪ್ರಾರಂಭ ಮಾಡಿತಾದರೂ "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಎಂಬಂತೆ ಕಾಂಗ್ರೆಸ್ ಒಡಲೊಳಗಿನಿಂದ ಹೊರಬಂದ ಪಕ್ಷಗಳು ಮತ್ತು ಅದನ್ನು ವಿರೋಧಿಸುವ ಪಕ್ಷಗಳೂ ಅದೇ ದಾರಿ ಹಿಡಿಯುತ್ತಿರುವುದು ಗಾಬರಿ ಹುಟ್ಟಿಸುವ ಸಂಗತಿಯಾಗಿದೆ. ಇಂಥ ಕೊಳಕು ಸ್ಥಿತಿ ನೋಡಿ ಬುದ್ಧಿಜೀವಿಗಳು ಮತದಾನ ಮಾಡದೆ ದೂರ ಉಳಿದರೆ ತಮ್ಮ ಓಟಿನ ಬೆಲೆ ತಿಳಿಯದೆ ನೋಟಿಗಾಗಿ, ಸಾರಾಯಿಗಾಗಿ ಓಟು ಹಾಕುವ ಜನರು ಉತ್ಸಾಹದಿಂದ ಮತ ಹಾಕುವರು. ಇದರಿಂದಾಗಿ ವಿಚಾರಶೀಲರು, ಸಾಹಿತಿಗಳು, ಶಿಕ್ಷಣ ತಜ್ಞರು, ರಾಜಕೀಯ ಮುತ್ಸದ್ದಿಗಳು, ಗೌರವಾನ್ವಿತ ನೀತಿವಂತ ಜನರು ರಾಜಕೀಯವೆಂದರೆ ತಿರಸ್ಕಾರದಿಂದ ದೂರ ಉಳಿಯುವ ವಿಲಕ್ಷಣ ಪರಿಸ್ಥಿತಿ ಉಂಟಾಗುತ್ತಿದೆ. ಆದ್ದರಿಂದ ಇಂಥ ವಿಪರೀತ ಪರಿಸ್ಥಿತಿಯಿಂದ ದೇಶವನ್ನು ಹೊರತರುವ ಕೆಲಸವನ್ನು ವಿಚಾರಶೀಲ ಜನರು ಈಗ ಮಾಡಬೇಕಾಗಿದೆ" ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, "ಇಂದು ಕಾರ್ಯಾಂಗ, ನ್ಯಾಯಾಂಗ ಸಹ ಶಾಸಕಾಂಗದ ಬಾಲಂಗೋಸಿಯಾಗಿ ಕೆಲಸ ಮಾಡುವ ಭಯಂಕರ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು ಶ್ರೀಸಾಮಾನ್ಯನಿಗೆ ತನ್ನ ಭವಿಷ್ಯದ ಬಗ್ಗೆ ಯಾವ ಭರವಸೆಯ ಬೆಳಕೂ ಕಾಣುತ್ತಿಲ್ಲ. ಇದನ್ನು ಮೂಕವಾಗಿ ನೋಡುತ್ತ 'ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಯಲ್ಲಿಲ್ಲ' ಎಂಬಂತೆ ಹತಾಶ ಸ್ಥಿತಿಗೆ ಸಮಾಜವು ಬಂದಿದ್ದು ಒಂದು ಕಡೆ ಇನ್ನೊಬ್ಬರ ತಲೆ ಒಡೆದು ದೋಚುವ ದರೋಡೆಗಾರರು ಹೆಚ್ಚುತ್ತಿದ್ದರೆ ಇನ್ನೊಂದು ಕಡೆ ಬದುಕನ್ನು ಎದುರಿಸಲಾರದೆ ತುತ್ತನ್ನ ಸಹ ಪಡೆಯಲಾರದೆ ಆತ್ಮಹತ್ಯೆಗೆ ಮೊರೆ ಹೋಗುವವರ ಸಂಖ್ಯೆ ಹಿರಿದಾಗುತ್ತಿದೆ. ಆದ್ದರಿಂದ ಜನರು ಜಾಗೃತಗೊಂಡು ತಮ್ಮ, ಮಾತ್ರವಲ್ಲ ತಮ್ಮ ರಾಜ್ಯ-ರಾಷ್ಟ್ರಗಳ

ಭವಿಷ್ಯ ರೂಪಿಸುವಲ್ಲಿ ತಮ್ಮ ಕರ್ತವ್ಯವೇನು ಎಂಬುದನ್ನು ಅರಿಯುವಂತಾಗಲು ಸ್ವಯಂ ಸೇವಾಸಂಸ್ಥೆಗಳು ಮತ್ತು ಧಾರ್ಮಿಕ ಮುಂದಾಳುಗಳಾದ ಮಠಾಧೀಶರು ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು'' ಎಂದು ನುಡಿದರು.

ದೇಶಕ್ಕೆ ವಿದೇಶೀಯರಾದ ಬ್ರಿಟಿಷರಿಂದ ಸ್ವಾತಂತ್ರ್ಯ ತಂದು ಕೊಡಲು ಹೋರಾಡಿದ ಮಹಾತ್ಮಾ ಗಾಂಧೀಜಿ, ಜವಾಹರ್‌ಲಾಲ್ ನೆಹರು, ವಲ್ಲಭಭಾಯಿ ಪಟೇಲ್ ಮುಂತಾದ ದಿಗ್ಗಜಗಳಿಂದ ಹುಟ್ಟಿದ ಕಾಂಗ್ರೆಸ್ ತನ್ನ ಸ್ಥಾಪಕರ ಆಶಯಕ್ಕೆ ವಿರುದ್ಧವಾಗಿ ನಂತರ ಇಂದಿರಾ ಕಾಂಗ್ರೆಸ್, ಈಗ ಇಟಾಲಿಯನ್ ಕಾಂಗ್ರೆಸ್ ಆಗಿ ವಿದೇಶಿ ಮೂಲದ ಮಹಿಳೆಗೆ ಪ್ರಧಾನಿ ಗದ್ದುಗೆ ಒಪ್ಪಿಸಲು ಸನ್ನದ್ಧವಾಗಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಯಾವ ಸ್ವಾಭಿಮಾನಿ ಭಾರತೀಯನೂ ಈ ಅವಮಾನ ಸಹಿಸಲಾರ. ಹಲವಾರು ದಶಕಗಳು ಇತಿಹಾಸವಿರುವ ಈ ಕಾಂಗ್ರೆಸ್‌ದಲ್ಲಿ ಭಾರತೀಯ ಮೂಲದ ಓರ್ವ ಪುರುಷ ಅಥವಾ ಮಹಿಳೆ ಪ್ರಧಾನಿಯಾಗುವ ಅರ್ಹತೆ ಹೊಂದಿಲ್ಲ ಎನ್ನುವುದು ಈ ಪಕ್ಷದಲ್ಲಿ ಸಮರ್ಥ ನಾಯಕರಿಲ್ಲ ಎಂಬುದನ್ನು ತೋರಿಸುವುದಲ್ಲವೆ ? ಶ್ರೀಮತಿ ಸೋನಿಯಾರವರು ಅನಿಬೆಸೆಂಟ್, ಮದರ್ ತೆರೇಸಾರವರಂತೆ ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತರಾಗಿ ಅಥವಾ ಇಲ್ಲಿಯ ದೀನರ ಸೇವೆ ಮಾಡಲು ಬಂದವರಲ್ಲ. ಮದುವೆಯಾಗಿ ಬಂದ ನಂತರವೂ ಇಲ್ಲಿಯ ನಾಗರಿಕತ್ವ ಸ್ವೀಕರಿಸಲಿಲ್ಲ. ಶ್ರೀ ರಾಜೀವ ಗಾಂಧಿಗೆ ಪ್ರಧಾನಿ ಪಟ್ಟ ಒದಗಿಬರುವಾಗ ತಮ್ಮ ಇಟಾಲಿಯನ್ನು ನಾಗರಿಕತ್ವ ಆತಂಕವಾಗಬಾರದೆಂದು ಭಾರತೀಯ ನಾಗರಿಕತ್ವಕ್ಕೆ ಅರ್ಜಿ ಸಲ್ಲಿಸಿದರು. ಅತ್ಯಂತ ಸಂಕೀರ್ಣ ವ್ಯವಸ್ಥೆಯ ಭಾರತ ದೇಶವನ್ನು ಆಳುವ ಪ್ರೌಢತೆ, ರಾಜಕೀಯ ಮುತ್ಸದ್ದಿತನ ಶ್ರೀಮತಿ ಸೋನಿಯಾ ಅವರಲ್ಲಿಲ್ಲ. ಆದ್ದರಿಂದ, ಜಗತ್ತಿನಲ್ಲೆಲ್ಲ ಬುದ್ಧಿವಂತ ಜನಾಂಗವೆಂದು ಹೆಸರು ಪಡೆದ 105 ಕೋಟಿ ಭಾರತೀಯರಲ್ಲಿ ತನ್ನ ದೇಶದ ಪ್ರಧಾನಿಯಾಗುವ ಓರ್ವ ಭಾರತೀಯ ಮೂಲದವನು ಸಹ ಇಲ್ಲ ಎಂಬುದನ್ನು ಜಗಜ್ಜಾಹೀರು ಮಾಡುವ ಕಾಂಗ್ರೆಸ್ಸನ್ನು ವಿಚಾರಶೀಲರು ಖಂಡಿತಾ ಬೆಂಬಲಿಸಬಾರದು.

ಗೌರವಾನಿತ್ವ ವ್ಯಕ್ತಿ ನಾಗಪ್ಪನವರನ್ನು ವೀರಪ್ಪನ್ ಅಪಹರಿಸಿಕೊಂಡು ಹೋದಾಗ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆಯವರು ತೋರಿಸಿದ ನಿರ್ಲಕ್ಷ್ಯ, ಆಡಿದ ಮಾತುಗಳು ಕರ್ನಾಟಕದ ಜನರ ಮನಸ್ಸಿನಿಂದ ಎಂದು ಅಳಿಸುವುದಿಲ್ಲ. ಆ ಕರುಣಾಜನಕ ಸಾವಿನ ಕಲಂಕ ಮುಖ್ಯಮಂತ್ರಿ, ಗೃಹಮಂತ್ರಿಗಳ ಕೈಯನ್ನು ರಕ್ತಸಿಕ್ತಗೊಳಿಸಿವೆ. ಅಧಿಕಾರದ ಬಲದಿಂದ ಈ ಪ್ರಸಂಗವನ್ನು ದಮನಗೊಳಿಸಿರಬಹುದು. ಆದರೆ ನ್ಯಾಯನಿರ್ಣಾಯಕನಾದ ದೇವರ ಅವಕೃಪೆಯಿಂದ ಇವರು ತಪ್ಪಿಸಿಕೊಳ್ಳಲಾರರು.

ಎಸ್.ಎಂ.ಕೃಷ್ಣ ಅವರ ಕ್ರೌರ್ಯ ಜನ ಸಾಮಾನ್ಯರ ಮೇಲೆ ಹೇಗಿತ್ತು ಅನ್ನುವುದಕ್ಕೆ ಬಸವ ಕಲ್ಯಾಣದಲ್ಲಿ 2002ರ ಮೇ ತಿಂಗಳಲ್ಲಿ ನಡೆದ ಮೊದಲನೆ ಕಲ್ಯಾಣ ಪರ್ವದಲ್ಲಿ ಮಹಿಳೆಯರು, ಮಕ್ಕಳು, ಮುದುಕರನ್ನು ಪೋಲೀಸರು ಥಳಿಸಿದ್ದೇ ಸಾಕ್ಷಿ. ತಮ್ಮ ಪಕ್ಷದವರಾಗಿದ್ದ ಭೀಮಣ್ಣ ಖಂಡ್ರೆ ಮತ್ತು ಡಾ|| ಮಲಕ ರೆಡ್ಡಿ ಮುಖ್ಯಮಂತ್ರಿ, ಗೃಹಮಂತ್ರಿಗಳನ್ನು ಕಲ್ಯಾಣ ಪರ್ವವನ್ನು ನಡೆಯಗೊಡಬಾರದೆಂದು ಒತ್ತಾಯಿಸಿದರೆಂದು ವಿನಾ ಕಾರಣ ಪೋಲೀಸರ ಮೂಲಕ ಜನರನ್ನು ಥಳಿಸಲು ಏರ್ಪಾಡು



ಮಾಡಿದರು. ಅದೇ ಭೀಮಣ್ಣ ಖಂಡ್ರೆ ತಮ್ಮ ಪಕ್ಷ ವಿರೋಧಿ ಚಟುವಟಿಕೆಗಾಗಿ ಕೆಲವೇ ದಿನಗಳಲ್ಲಿ ಉಚ್ಚಾಟಿಸಲ್ಪಟ್ಟರು. ಅಷ್ಟು ಬೇಗನೆ ಸಜ್ಜನರಾಗಿದ್ದ ಭೀಮಣ್ಣ ಖಂಡ್ರೆ ದುರ್ಜನರಾಗಿ ಬಿಟ್ಟರೆ ? ಆಗಿನ ಕ್ರೌರ್ಯವನ್ನು ಜನರು ಮರೆತಿಲ್ಲ ಎಂದು ಈಗ ಲಿಂಗಾಯತರನ್ನು ಸಮಾಧಾನ ಪಡಿಸಲು ಬಸವ ಕಲ್ಯಾಣದ ಅಭಿವೃದ್ಧಿ ಪ್ರಾಧಿಕಾರದ ಘೋಷಣೆಯ ಮೂಲಕ ರಾಜಕೀಯ ಸ್ಟಂಟ್ ಪ್ರದರ್ಶಿಸುತ್ತಿದ್ದಾರೆ. ಅಧಿಕಾರ ಹಿಡಿಯುವುದಕ್ಕಾಗಿ ಅಪಾರ ಸೌಜನ್ಯ, ಅಧಿಕಾರ ಸಿಕ್ಕ ಮೇಲೆ ದರ್ಪ-ದೌರ್ಜನ್ಯ ಪ್ರದರ್ಶಿಸುವ ಎಸ್.ಎಂ.ಕೃಷ್ಣ ಅವರ ದ್ವಿಮುಖ ನೀತಿಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ ?''

ಭಾಜಪವು ಯಾವುದೋ ಭರವಸೆಯನ್ನು ಹುಟ್ಟಿಸುವಂತೆ ವಿಸ್ತರಿಸಿತು. ಆದರೆ ಇವರಿಗೆ ದೇಶದ ಗಂಭೀರ ಸಮಸ್ಯೆಗಳ ಪರಿಹಾರಕ್ಕಿಂತಲೂ ರಾಮ ಮಂದಿರ ಕಟ್ಟುವುದೇ ಬಹುದೊಡ್ಡ ಧ್ಯೇಯವಾಗಿದೆ. ಮತಾಂತರ ನಿಷೇಧದಂತಹ ಮಾನವೀಯ ಹಕ್ಕುಗಳಿಗೆ ಚ್ಯುತಿ ತರುವಂತಹ ವಿಷಯ ಇವರ ಕಾರ್ಯಕ್ರಮಗಳ ಪಟ್ಟಿಯಲ್ಲಿ ಆದ್ಯತೆ ಪಡೆದುಕೊಂಡಿವೆ. ಶ್ರೀ ವಾಜಪೇಯಿ ಪ್ರೌಢ ಮನಸ್ಸಿನ ರಾಜಕೀಯ ಮುತ್ಸದ್ದಿಯಾಗಿದ್ದರೂ ಅವರ ಸುತ್ತಲೂ ಮತಾಂಧರ ಗುಂಪೇ ಸುತ್ತುವರಿದಿದೆ. ಹೀಗಾಗಿ ಕರ್ನಾಟಕದಲ್ಲಿ ಜನ ಮನ್ನಣೆ ಪಡೆದುಕೊಳ್ಳುತ್ತ ಮುಂದೆ ಸಾಗುತ್ತಿದ್ದ ಭಾಜಪ ಅನವಶ್ಯಕ ವಿಷಯಗಳನ್ನು ಕೆದಕುತ್ತ ತನ್ನ ಅಂತಿಮ ಧ್ಯೇಯ ಏನೆಂಬುದನ್ನು ಬಹಿರಂಗ ಪಡಿಸಿಯೇ ಬಿಟ್ಟಿದೆ. ಆ ಪಕ್ಷದ ಕೆಲವು ನೇತಾರರು ಮಾಡುವ ಭಯಂಕರ ಭಾಷಣಗಳನ್ನು ಕೇಳಿದರೆ ಇವರು ಪೂರ್ಣಾಧಿಕಾರವನ್ನು ಪಡೆದರೆ ಏನೇನು ಮಾಡುವರೋ ಎಂದು ಭಯ ಪಡುವಂತಾಗಿದೆ.

ಇನ್ನು ಜನತಾದಳವಂತೂ ಚೂರುಚೂರಾದ ಹಪ್ಪಳದಂತಾಗಿದ್ದು ಈ ತುಂಡುಗಳು ಬೇರೆ ಬೇರೆ ಪಕ್ಷಗಳ ಹೊಟ್ಟೆ ಸೇರುತ್ತಿವೆ. ಜನತಾದಳದ ಆರಂಭದ ದಿನಗಳಲ್ಲಿ ಸಮಾಜವಾದದ ಸೊಲ್ಲು ಕೇಳಿಬರುತ್ತಿತ್ತು. ಆದರೆ ಬರುಬರುತ್ತ ಸಿದ್ಧಾಂತವು ಮಾಯವಾಗಿ ಕಚ್ಚಾಟವೇ ಇದರ ಸ್ವಭಾವವಾಯಿತು. Politics without philosophy is a great sin ಎಂಬ ಮಹಾತ್ಮಾ ಗಾಂಧೀಜಿಯವರ ವಾಣಿಯಂತೆ ತತ್ತ್ವ-ಸಿದ್ಧಾಂತ ಆಧಾರಿತ ರಾಜಕೀಯ ಮಾಯವಾಗಿ ವ್ಯಕ್ತಿ ಆಧಾರಿತ ರಾಜಕೀಯವಾಗುತ್ತಲೇ ಪತನಗೊಂಡ ಜನತಾ ಪರಿವಾರ ವ್ಯಕ್ತಿಯ ನಿರ್ಗಮನದೊಡನೆ ಗೂಡು ಕಿತ್ತ ಪಕ್ಷಿಗಳಾಗಿ ಹಾರಾಡತೊಡಗಿದ್ದಾರೆ.

ಇಂಥ ವಿಲಕ್ಷಣ ಸನ್ನಿವೇಶದಲ್ಲಿ ಮಾಜಿ ಪ್ರಧಾನಿ ಶ್ರೀ ದೇವೇಗೌಡರು ಬಲಿಷ್ಠರಾಗುವ ಹಂಬಲದಿಂದ ಜಾತ್ಯತೀತ ಜನತಾ ದಳಕ್ಕೆ ಬರುವವರನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯವೆಂದು ಹೆಸರಿಡಬೇಕೆಂದು ಸರ್ಕಾರವನ್ನು ಆಗ್ರಹಿಸಲು ಚಳುವಳಿ ನಡೆಯುತ್ತಿದ್ದಾಗ "ತಾಯಿ ನನ್ನನ್ನು ನಂಬಿ; ಚಳುವಳಿ ನಿಲ್ಲಿಸಿರಿ. ಇನ್ನೆರಡು ದಿವಸಗಳಲ್ಲಿ ನಾನು ದೆಹಲಿಯಿಂದ ಹಿಂತಿರುಗಿ ಬರುತ್ತಲೇ ಮಾಡುವ ಮೊದಲ ಕೆಲಸ ಬಸವೇಶ್ವರರ ಹೆಸರನ್ನಿಡುವುದು. ನಾನು ಈ ಕೆಲಸ ಮಾಡದಿದ್ದರೆ ನನ್ನನ್ನು ವಚನ ಭ್ರಷ್ಟ'' ಎಂದು ಕರೆಯಿರಿ ಎಂದ ಶ್ರೀ ದೇವೇಗೌಡರು ತಮ್ಮ ಮಾತನ್ನು ಪೂರೈಸದ್ದರಿಂದ ಈಗ ವಚನ ಭ್ರಷ್ಟರಾಗಿರುವ ದೇವೇಗೌಡರು ತಮ್ಮನ್ನು ಅನುಸರಿಸುವವರಿಗೆ ಯಾವಾಗ ಅಹಿತವನ್ನುಂಟು ಮಾಡುವರೋ

ತಿಳಿಯದು. ಜನಪ್ರಿಯರು, ಸೌಜನ್ಯ ಶೀಲರು ಆದ ದಿವಂಗತ ರಾಮಕೃಷ್ಣಹೆಗಡೆ ಅವರನ್ನು ಇವರು ನೋಯಿಸಿದ್ದು, ಆಘಾತಗೊಳಿಸಿದ್ದು, ಜನರ ಮನಸ್ಸಿನಲ್ಲಿ ಹಚ್ಚಹಸುರಾಗಿದೆ.

ಇಂಥ ಸಂದರ್ಭದಲ್ಲಿ ನಮ್ಮನ್ನೂ ಸೇರಿ ಅನೇಕ ಜನರು ಚಿಂತನಶೀಲರು ಸಂದಿಗ್ಧತೆಗೆ ಒಳಗಾದಾಗ ಎಲ್ಲರ ಚಿಂತನೆಗೆ ಮತ್ತು ಚಿಂತೆಗೆ ಪರಿಹಾರ ಸೂಚಿಸುವಂತೆ ಕಾರ್ಗತ್ತಲಲ್ಲಿನ ಆಶಾಕಿರಣವಾಗಿ ಒಂದು ಪ್ರಾದೇಶಿಕ ಪಕ್ಷ ಕನ್ನಡ ನಾಡು ಪಾರ್ಟಿ ಶ್ರೀ ವಿಜಯ ಸಂಕೇಶ್ವರರ ಮೂಲಕ ರಾಜಕೀಯ ಆಗಸದಲ್ಲಿ ಮೂಡಿದ್ದು ಎಲ್ಲರಿಗೂ ಉತ್ಸಾಹವನ್ನು ಮೂಡಿಸಿದೆ. ಶ್ರೀ ವಿಜಯ ಸಂಕೇಶ್ವರರಿಗೆ ತೆಲುಗುದೇಶಂ ಸಂಸ್ಥಾಪಕ ಎನ್.ಟಿ.ರಾಮರಾವ್‌ರಂತೆ ಮತ್ತು ಎಂ.ಜಿ.ರಾಮಚಂದ್ರನ್‌ನಂತೆ ತಾರಾ ವರ್ಚಸ್ಸು ಇರಲಿಕ್ಕಿಲ್ಲ, ಆದರೆ ಅವರ ಹಿನ್ನಲೆಯಲ್ಲಿ ಕಾಯಕ-ಉದ್ಯೋಗದ ಮೂಲಕ ಒಂದು ಹೊಸ ಜಗತ್ತನ್ನು ಕಟ್ಟಬಹುದೆಂಬ ಭರವಸೆಯ ಕ್ರಿಯಾರೂಪವಿದೆ. ಹೊಸ ಆಲೋಚನೆಗಳ ಒಂದು ತಂಡವನ್ನು ನಿರ್ಮಾಣ ಮಾಡಿ ಆ ಮೂಲಕ ಸಮೃದ್ಧಕರ್ನಾಟಕ, ಸಮೃದ್ಧ ಭಾರತದ ಕನಸನ್ನು ನನಸು ಮಾಡಬೇಕೆಂಬ ಶ್ರೀ ವಿಜಯ ಸಂಕೇಶ್ವರರ ದೃಢ ಸಂಕಲ್ಪ ಅನೇಕ ಆದರ್ಶವಾದಿಗಳನ್ನು ಹತಾಶ ಸ್ಥಿತಿಯಿಂದ ಹೊರತರುತ್ತಿದೆ ಎಂದರೆ ಉತ್ಪ್ರೇಕ್ಷೆಯಲ್ಲ.

''ಇನ್ನು ಯಾವ ಭರವಸೆಯೂ ಉಳಿದಿಲ್ಲ; ಏನಾಗುತ್ತೋ ಆಗಲಿ, ನಮ್ಮ ರಾಜ್ಯ ರಾಷ್ಟ್ರಗಳ ಹಣೆಯ ಬರಹವೇ ಹೀಗಿರುವಾಗ ಯಾಕೆ ಚಿಂತಿಸಬೇಕು?'' ಎಂದು ವಿಧಿವಾದ(Fatalism)ಕ್ಕೆ ಶರಣಾಗಿ ಮೌನವ್ರತ ಸ್ವೀಕರಿಸಲು ಸಂಕಲ್ಪ ತಳೆದಿದ್ದ ನಾವು ಅವರನ್ನು ಕೇಳಿದ ಮೊದಲ ಪ್ರಶ್ನೆ ''ನಿಮಗೆ ಮತೀಯ ಸಂಘರ್ಷದಲ್ಲಿ ನಂಬಿಕೆ ಇದೆಯೋ? ಇದರಿಂದ ಸಹಬಾಳ್ವೆಗೆ ಚ್ಯುತಿ ಬಂದು ಅಮಾಯಕರ ಶೋಷಣೆಯಾಗುತ್ತದೆ'' ಎಂದಾಗ ಅವರು ''ನನಗೆ ಧಾರ್ಮಿಕ ಮೌಲ್ಯಗಳಲ್ಲಿ ನಂಬಿಕೆ ಇದೆ. ಆದರೆ ಇನ್ನಿತರರ ಧಾರ್ಮಿಕ ಭಾವನೆ ಗೌರವಿಸುವ ಉದಾತ್ತತೆ ಇದೆ'' ಎಂದಾಗ ಸಮಾಧಾನವಾಯಿತು. ''ನಾನು ಈ ವಿಷಯದಲ್ಲಿ ತಲೆ ಹಾಕದೆ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಲ್ಲಿ, ಕರ್ನಾಟಕದ ನೆಲ-ಜಲ ಸಂರಕ್ಷಣೆ, ಸಮೃದ್ಧಿ ಸಾಧಿಸುವಲ್ಲಿ ಹೆಚ್ಚು ಆಸಕ್ತ'' ಎಂದರು. ಶರಣ ಮೇಳದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಅವರು ತಮ್ಮ ಕನಸಿನ ಕರ್ನಾಟಕದ ಸಿದ್ಧಾಂತ ನನಸು ಮಾಡುವಲ್ಲಿ ಇಟ್ಟುಕೊಂಡಿರುವ ಹಂಬಲ ವಿವರಿಸಿದಾಗ ನಮಗೆ ತೀವ್ರ ಕುತೂಹಲ ಮೂಡಿತು; ಅದು ಹೆಚ್ಚಿನ ಆಸಕ್ತಿಯಾಗಿ ಬೆಳೆಯಿತು. ನಮ್ಮೆಲ್ಲರ ಆಸೆ-ಆಕಾಂಕ್ಷೆ, ಪರಿಕಲ್ಪನೆ ಒಂದು ಸ್ಪಷ್ಟ ಕ್ರಿಯಾರೂಪ ತಳೆಯುವ ಸುವರ್ಣಗಳಿಗೆ ಒದಗಿ ಬಂದಿರುವಾಗ ಈಗ ಸುಮ್ಮನೆ ಕುಳಿತುಕೊಂಡರಾಗದು ಎಂದು ಇದೇ ದಿ. 15-2-2004 ರಂದು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರ ಸಭೆ ಕರೆದು ಯಾರಲ್ಲಾದರೂ ಉಳಿದಿರಬಹುದಾದ ಸಂದೇಹ ಪರಿಹರಿಸಿ ಕಡೆಯಲ್ಲಿ ಕನ್ನಡ ನಾಡು ಪಕ್ಷಕ್ಕೆ ಮುಂಬರುವ ಚುನಾವಣೆಯಲ್ಲಿ ರಾಷ್ಟ್ರೀಯ ಬಸವ ದಳವು ಸಂಪೂರ್ಣ ನೈತಿಕ ಬೆಂಬಲ ಕೊಡಬೇಕೆಂದು ನಿರ್ಣಯಿಸಲಾಗಿದೆ.

ಪತ್ರಿಕಾ ಗೋಷ್ಠಿಯಲ್ಲಿ ರಾಷ್ಟ್ರೀಯ ಬಸವ ದಳದ ಪ್ರಧಾನ ಸಂಘಟಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಉಪಸ್ಥಿತರಿದ್ದರು.

ವರದಿ - ಶರಣ. ರಮೇಶ ಕುರುಬಖೇಳಗಿ.



## ಶರಣರು ಮತ್ತು ಸ್ತ್ರೀ ಸಮಾನತೆ

- ಮಾತಾಜಿ

ಸೃಷ್ಟಿಯಲ್ಲಿ ಪುರುಷ ಮತ್ತು ಸ್ತ್ರೀ ಎಂಬ ಎರಡು ನೈಸರ್ಗಿಕ ವಿಭೇದಗಳು ತೋರಿಬರುತ್ತವೆ. ಈ ಜಗತ್ತು ಮುನ್ನಡೆಯಲು ಎರಡೂ ಅಂಶಗಳು ಅಷ್ಟೇ ಅತ್ಯವಶ್ಯಕ. ಗಿಡಮರಬಳ್ಳಿ, ನಂತರದ ಹಂತ ಪ್ರಾಣಿ ವರ್ಗ, ಉನ್ನತ ಹಂತದಲ್ಲಿರುವ ಮಾನವ ಈ ಎಲ್ಲವುಗಳಲ್ಲಿಯೂ ಪುರುಷ ಮತ್ತು ಸ್ತ್ರೀ ಅಂಶಗಳು ಅತ್ಯಗತ್ಯ. ಆದರೂ ಮನುಷ್ಯ ಹಲವಾರು ಭೇದಗಳನ್ನು ಕಲ್ಪಿಸಿಕೊಂಡು ಸಮಾಜದಲ್ಲಿ ಒಡೆದು ಆಳುವ ನೀತಿಯನ್ನು ರೂಢಿಸಿಕೊಂಡಿದ್ದು, ಅದರಲ್ಲಿ ಪುರುಷ ಮತ್ತು ಸ್ತ್ರೀ ಭೇದವೂ ಒಂದು. ಸ್ತ್ರೀಯನ್ನು ಹಲವಾರು ರೀತಿಯಿಂದ ಎರಡನೆಯ ದರ್ಜೆಯ ಪ್ರಜೆಯನ್ನಾಗಿ ಭಾವಿಸಿರುವುದಲ್ಲದೆ ಆ ಭಾವವನ್ನು ಗಟ್ಟಿಗೊಳಿಸಲು ಶಾಸ್ತ್ರಗಳನ್ನು ಸಹ ರಚಿಸಲಾಗಿದೆ.

ಜಗತ್ತಿನ ವಿವಿಧ ಧರ್ಮಗಳನ್ನು ತೆಗೆದುಕೊಂಡರೆ ಒಂದಲ್ಲ ಒಂದು ರೂಪದಲ್ಲಿ ಸ್ತ್ರೀಯರ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ ಅಥವಾ ಕಡೆಗಣಿಸಲಾಗಿದೆ. ಕ್ರೈಸ್ತ ಧರ್ಮದಲ್ಲಿ ಸ್ತ್ರೀಗೆ ಚರ್ಚ್‌ಗೆ ಹೋಗುವ, ಪ್ರಾರ್ಥಿಸುವ ಹಕ್ಕನ್ನು ನೀಡಲಾಗಿದೆಯಾದರೂ ಗುರುವಾಗಿ ದೀಕ್ಷಾನುಗ್ರಹ ನೀಡುವ, ವೇದಿಕೆಯ ಮೇಲೆ ನಿಂತು ಧರ್ಮಶಾಸ್ತ್ರ ಬೋಧಿಸುವ ಅವಕಾಶವನ್ನು ನಿರಾಕರಿಸಲಾಗಿದೆ. ಇದಕ್ಕಾಗಿ ಹಲವಾರು ಕಡೆ ಹೋರಾಟವು ಸಹ ನಡೆಯುತ್ತಿದೆ. ಇಸ್ಲಾಂದಲ್ಲಿ ಸಾರ್ವಜನಿಕವಾಗಿ ಪುರುಷನಿಗೆ ಸರಿ ಸಮಾನವಾಗಿ ನಿಂತು ನಮಾಜ್ ಮಾಡುವ ಅವಕಾಶ ನೀಡಲಾಗಿಲ್ಲ. ವೈದಿಕ ಧರ್ಮದಲ್ಲಿ ಪುರುಷನಂತೆ ಉಪನಯನ ಮಾಡಿಸಿಕೊಂಡು ಜನಿವಾರ ಧರಿಸಿ ಗಾಯತ್ರಿ ಮಂತ್ರ ಪಠಿಸುವ ಅವಕಾಶವೇ ಇಲ್ಲ.

ಈ ಐತಿಹಾಸಿಕ ಹಿನ್ನಲೆಯಲ್ಲಿ ಪುರುಷನಂತೆ ಸ್ತ್ರೀಯು ಎಲ್ಲ ಹಕ್ಕುಗಳನ್ನು ಪಡೆದು ವೈಯಕ್ತಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ ಸಂಪೂರ್ಣ ಸ್ಥಾನಮಾನ ಪಡೆದುದು ಕ್ರಾಂತಿಯೋಗಿ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ವಿಚಾರಧಾರೆಯಿಂದ ಎಂಬುದು ನಮಗೆ ವಿಸ್ಮಯ ಮತ್ತು ಹೆಮ್ಮೆ ಉಂಟು ಮಾಡುವ ಸಂಗತಿ.

ಸಮಾನತೆಯ ಪ್ರತಿಪಾದಕರಾದ ಬಸವಣ್ಣನವರು ಬಾಲ್ಯದಲ್ಲಿಯೇ ಮನೆಯನ್ನು ತೊರೆದುದು ಇದೇ ಉದ್ದೇಶದಿಂದಲೇ. ಬಾಲಕನಾಗಿ ಜನಿಸಿದ ತಮಗೆ ಸಿಕ್ಕ ಸೌಲಭ್ಯ, ಸಮಾನತೆ ತನ್ನ ಅಕ್ಕ ನಾಗಲಾಂಬಿಕೆಗೂ ಸಿಗಬೇಕು, ತನಗೆ ದೊರೆಯಲಿರುವ ಉಪನಯನ ಸಂಸ್ಕಾರ ಅಕ್ಕನಿಗೂ ಲಭ್ಯವಾಗಬೇಕು ಎಂದು ಹಠ ಹಿಡಿದಾಗ, ಸಂಪ್ರದಾಯದಲ್ಲಿ ಹಾಗೆ ಮಹಿಳೆಗೆ ದೀಕ್ಷಾ ಹಕ್ಕು ಇಲ್ಲ ಎಂದು ತಂದೆ ನುಡಿದಾಗ ಅಂಥ ತಾರತಮ್ಯ ಮಾಡುವ ಸಂಪ್ರದಾಯ ತನಗೆ ಬೇಡ ಎಂದು ಬಸವಣ್ಣನವರು ಗೃಹತ್ಯಾಗ ಮಾಡಿದರು. ''ಸ್ತ್ರೀಯು ರಜಸ್ವಲೆಯಾಗುತ್ತಾಳೆ'' ಎಂಬ ಒಂದೇ ಕಾರಣವನ್ನೊಡ್ಡಿ ಸಂಪ್ರದಾಯವು ಮಹಿಳೆಗೆ ಧಾರ್ಮಿಕ ಹಕ್ಕನ್ನು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿದ ಬಸವಣ್ಣನವರು ''ನಿಸರ್ಗದ ಈ ಕ್ರಿಯೆಯಿಂದಲೇ ಸಕಲ ಜೀವರಾಶಿಯ ಉತ್ಪತ್ತಿ. ಅಂದಾಗ ರಜೋಕ್ರಿಯೆಯನ್ನು ಧಾರ್ಮಿಕ ಹಕ್ಕಿಗೆ ಆತಂಕ ಎಂದೇಕೆ ಭಾವಿಸಬೇಕು ?'' ಎಂದು ಆಲೋಚಿಸಿ ತಾವು ಸಂಸ್ಥಾಪಿಸಿ ಕೊಟ್ಟ ಬಸವ ಧರ್ಮದಲ್ಲಿ ಪುರುಷನಂತೆ ಮಹಿಳೆಗೂ ಎಲ್ಲ ಧಾರ್ಮಿಕ ಹಕ್ಕುಗಳನ್ನು ಒದಗಿಸಿಕೊಟ್ಟರು.

**ಸಾಮಾಜಿಕ ಸಮಾನತೆ** – ಸ್ತ್ರೀಯ ಕಾರ್ಯಕ್ಷೇತ್ರ ಕೇವಲ ಅಡಿಗೇ ಮನೆ ಮತ್ತು ಹೆರಿಗೆ ಮನೆ ಎಂದು ಸಂಪ್ರದಾಯ ಭಾವಿಸಿದ್ದಾಗ, ಆಕೆ ಪುರುಷನ ಎದುರು ನಿಂತು ಮಾತನಾಡುವುದೇ ಒಂದು ಅಪರಾಧ ಎಂದು ಸಮಾಜವು ನಂಬಿದ್ದಾಗ, ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಶೂನ್ಯ ಪೀಠಾಧೀಶ ಅಲ್ಲಮಪ್ರಭುವಿನಂತಹ ದಾರ್ಶನಿಕ ದಿಗ್ಗಜದ ಎದುರಿಗೆ ವೀರವಿರಾಗಿಣಿ ಅಕ್ಕಮಹಾದೇವಿ ನಿಂತು ಸಂವಾದ ಮಾಡುವುದೇ ಒಂದು ಅದ್ಭುತ ಪ್ರಸಂಗ! ಒಬ್ಬ ಸಾಮಾನ್ಯ ಗೃಹಿಣಿ ಆಯ್ದಕ್ಕಿ ಮಾರಯ್ಯನ ಹೆಂಡತಿ ಲಕ್ಕಮ್ಮ ಅನುಭವ ಮಂಟಪದಲ್ಲಿ ಅಲ್ಲಮಪ್ರಭು, ಕ್ರಾಂತಿಪುರುಷ ಬಸವಣ್ಣನವರಂಥವರ ಎದುರು ನಿಂತು,

ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ?
ಈಸಕ್ಕಿಯಾಸೆ ನಿಮಗೇಕೆ ಮಾರಯ್ಯ?

ಎಂದು ಗಂಡನಿಗೆ ತಿಳಿ ಹೇಳುವುದು ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ? ಎಂದು ಪತಿಯನ್ನು ಎಚ್ಚರಿಸಿ ಕಾಯಕಕ್ಕೆ ಕಳಿಸುವುದು ಒಂದು ರೋಮಾಂಚಕಾರಿ ಪ್ರಸಂಗ! ಅನುಭವ ಮಂಟಪದಲ್ಲಿ ಪುರುಷನಂತೆ ಸ್ತ್ರೀಯೂ ಆಗಮಿಸಿ ಅನ್ಯರ ವಿಚಾರ ಕೇಳುವ, ತನ್ನ ವಿಚಾರ ಹೇಳುವ ವಿಚಾರ–ವಾಕ್–ಆಚಾರ ಸ್ವಾತಂತ್ರ್ಯ ಬಸವಾದಿ ಪ್ರಮಥರು ಕೊಟ್ಟ ಸಮಾನತೆಗೆ ಸಾಕ್ಷಿ. ಬಸವಣ್ಣನವರ ಧರ್ಮಪತ್ನಿ ಶರಣೆ ನೀಲಾಂಬಿಕಾತಾಯಿ ತಾನು ''ಬಸವಣ್ಣನವರಿಗೆ ವಿಚಾರ ಪತ್ನಿ''–ಅರ್ಥಾತ್ ಬೌದ್ಧಿಕ ಸಂಗಾತಿ (Intellectual companion) ಎಂದು ಹೇಳುವ ಮಾತು ಬಸವ ತತ್ತ್ವಜ್ಞಾನಕ್ಕೆ ಹಿಡಿಯುವ ಕೈಗನ್ನಡಿ.

ಸ್ತ್ರೀಯನ್ನು ಮಾಯೆ ಎಂದು ಜರಿದು ಆಕೆಯು ಪುರುಷನ ಆಧ್ಯಾತ್ಮಿಕ ಸಾಧನೆಗೆ ಅಡ್ಡಿ ಎಂಬ ರೂಢಿಗೊಂಡ ಮನೋಭಾವವನ್ನು ತೊಡೆದು ಹಾಕುವಂತೆ ಕರೆ ನೀಡುವ ಅಕ್ಕಮಹಾದೇವಿ, ''ಸ್ತ್ರೀಯಷ್ಟೇ ಮಾಯೆಯಲ್ಲ, ದುರ್ಬಲ ಮನಸ್ಸಿನ ಪುರುಷನಿಗೆ ಸ್ತ್ರೀಯು ಮಾಯೆಯಾದರೆ ದುರ್ಬಲ ಮನಸ್ಸಿಗೆ ಸ್ತ್ರೀಗೆ ಪುರುಷನೂ ಮಾಯೆಯೆ!'' ಎಂದು ನುಡಿದಳು. ಸ್ತ್ರೀಯ ಶರೀರವು ಯಾವುದೇ ರೀತಿ ಸಾಧನೆಗೆ ಆತಂಕಕಾರಿಯಲ್ಲ; ಮುಕ್ತಿಯನ್ನು ಪಡೆಯಬೇಕಾದರೆ ಸ್ತ್ರೀಜನ್ಮದಿಂದ ಅಸಾಧ್ಯ, ಪುರುಷ ಜನ್ಮದಿಂದ ಮಾತ್ರ ಸಾಧ್ಯ ಎಂಬ ಸಂಪ್ರದಾಯಿಕ ಶಾಸ್ತ್ರಗಳ ಎಲ್ಲೆ ದಾಟಿದ ಶರಣರು ಹೀಗೆ ಹೇಳಿದರು:

ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮನು ಹೆಣ್ಣು ಅಲ್ಲ
ಗಂಡು ಅಲ್ಲ ಕಾಣಾ ರಾಮನಾಥ.

ಜೇಡರ ದಾಸಿಮಯ್ಯನವರ ಈ ಅಮೃತ ನುಡಿಗಳು, ''ಆತ್ಮಂಗೆ ಯಾವ ಕುರುಹೂ ಇಲ್ಲ. ಅದು ನಿರಾಕಾರ. ಭೇದವನ್ನು ತೋರುವ ಲಕ್ಷಣಗಳಿರುವುದು ದೇಹಕ್ಕೆ ಮಾತ್ರ'' ಎನ್ನುತ್ತವೆ. ''ಹೆಣ್ಣು ಗಂಡಾದರೆ ಶಿವನೊಲಿವನು ತಾಯೆ'' ಎಂದು ಹೇಳುವ ಮಾತಿನಲ್ಲಿ 'ಶರಣನು ಪುರುಷತ್ವದ ಅಹಂ ಕಳೆದುಕೊಂಡರೆ ಶರಣೆಯು ಸ್ತ್ರೀತ್ವದ ಕೀಳರಿಮೆಯನ್ನು ತೊಡೆದುಕೊಳ್ಳಬೇಕು' ಎಂಬ ಭಾವವಿದೆ.



ಅಲ್ಲಮಪ್ರಭುದೇವರ ಒಂದು ವಚನವು 'ಮಾಯೆ'ಯ ಪರಿಕಲ್ಪನೆಗೆ ಬೇರೊಂದು ಆಯಾಮ ನೀಡುತ್ತದೆ.

ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ
ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ!

''ಮಾಯೆ ಎಂಬ ದೋಷವು ಬಹಿರಂಗದ ವಸ್ತುವಿನಲ್ಲಿ ಅಸ್ತಿತ್ವ ಹೊಂದಿಲ್ಲ; ತನ್ನ ಅಂತರಂಗದಲ್ಲೇ ಇರುವ ದೋಷ'' ಎನ್ನುವ ಘೋಷಣೆಯೊಡನೆ ಶರಣರು ಮಹಿಳಾ ವರ್ಗಕ್ಕೇ ಅಂಟಿದ್ದ ಕಲಂಕವನ್ನು ತೊಡೆದರು.

ಮಹಿಳೆಯನ್ನು ಎರಡನೆ ದರ್ಜೆಯ ಪ್ರಜೆಯನ್ನಾಗಿ ಕಂಡುದಲ್ಲದೆ, ಆಕೆಗೆ ಧರ್ಮ ಸಂಸ್ಕಾರ ಕೊಡಲು ಹಿಂಜರಿದ ಶಾಸ್ತ್ರಗಳನ್ನು, ಸಂಪ್ರದಾಯವನ್ನು ಕಂಡು 12ನೆಯ ಶತಮಾನದ ಶರಣರಿಗೆ ಆಶ್ಚರ್ಯ ಮತ್ತು ವಿಷಾದ. ಬ್ರಹ್ಮ–ಸರಸ್ವತಿ, ವಿಷ್ಣು–ಲಕ್ಷ್ಮಿ, ಶಿವ–ಪಾರ್ವತಿ ಮುಂತಾದ ದೇವ–ದೇವತೆಗಳ ಸಂಗತಿ ತೆಗೆದುಕೊಂಡರೆ ಈ ಮೂವರೂ ಸ್ತ್ರೀ ಶಕ್ತಿಗಳೇ; ಇವರು ಪೌರಾಣಿಕ ದೃಷ್ಟಿಯಲ್ಲಿ ಜ್ಞಾನ–ಸಂಪತ್ತು–ಶಕ್ತಿಯ ಸಂಕೇತಗಳು ಮತ್ತು ಈ ದೇವತಾ ಶಕ್ತಿಗಳು ಕುಳಿತ ಸ್ಥಳಗಳೆಂದರೆ ತೊಡೆ, ಎದೆ, ತಲೆ.

ಆದರೆ ಮಹಿಳೆಗೆ ಮಾತ್ರ ಧಾರ್ಮಿಕ ಜಗತ್ತಿನಲ್ಲಿ ಸ್ಥಾನವಿಲ್ಲದ ಪರಿಸ್ಥಿತಿ! ಎಂಥಾ ವಿಪರ್ಯಾಸ!! ಅದಕ್ಕೇ ಶ್ರೀ ಸಿದ್ಧರಾಮೇಶ್ವರರು ಹೇಳುತ್ತಾರೆ : ''ಇದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ; ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ''. ಸೃಷ್ಟಿಯ ಅರ್ಧ ಅಂಗವಾದ ಸ್ತ್ರೀಯು ಪರಮಾತ್ಮನ ಒಂದು ಅಂಶ ಎಂಬ ಮನೋಭಾವ ಶರಣರದು.

ಸಮಾನ ಅವಕಾಶಗಳನ್ನು ಮಹಿಳೆಯರಿಗೆ ನೀಡಿದ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು, ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು ಉನ್ನತ ಸಾಧನೆ ಮಾಡಿ ಅಕ್ಕಮಹಾದೇವಿ ಬಂದು ನಿಂತಾಗ ಆಕೆಯ ವ್ಯಕ್ತಿತ್ವ ಕಂಡು ತುಂಬು ಹೃದಯದಿಂದ ಗುರುತಿಸಿದ್ದಲ್ಲದೆ 'ಅಕ್ಕಾ' ಎಂಬ ಬಿರುದು ನೀಡಿ ಗೌರವಿಸಿದರು.

ಅಜಕಲ್ಪ ಕೋಟಿ ವರುಷದವರೆಲ್ಲರೂ ಹಿರಿಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುರಿದು ಗುಡುಗೂರಿ ತಲೆ ನಡುಗಿ
ನರೆ ತೆರೆ ಹೆಚ್ಚಿ ಮತಿಗೆಟ್ಟು ಒಂದನಾಡ ಹೋಗಿ
ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವನರಿದು ಘನವ ಬೆರಸಿ ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ, ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು.

ಉನ್ನತ ಮನ್ನಣೆಯನ್ನಿತ್ತು ಆಚಾರ್ಯಪುರುಷಳ ಸ್ಥಾನವನ್ನು ನೀಡಿ ಶರಣರು ಅಕ್ಕ ಮಹಾದೇವಿಯನ್ನು ಗೌರವಿಸಿದರು.

ಸಮಾಜ ಸುಧಾರಕರಾದ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ವಿಶಾಲ ದೃಷ್ಟಿಕೋನದಿಂದಾಗಿ ಅಪೂರ್ವ ಮಹಿಳಾ ರತ್ನಗಳು ಅನುಭವ ಮಂಟಪದ ಕೊಡುಗೆಯಾಗಿ ಕಂಗೊಳಿಸಿದರಲ್ಲದೆ ನಂತರವೂ ಶರಣ ಪರಂಪರೆ ಧೀರ ಚೇತನಗಳನ್ನು ನೀಡಿತು. ವೀರ ವಿರಾಗಿಣಿ ಅಕ್ಕಮಹಾದೇವಿ ವೈರಾಗ್ಯದ ಮೇರು ಪರ್ವತವನ್ನೇರಿದರೆ, ನೀಲಾಂಬಿಕಾ ತಾಯಿ - ಲಿಂಗಮ್ಮ ಮುಂತಾದವರು ಸಂಸಾರದಲ್ಲಿದ್ದೂ ಪರಮೋನ್ನತ ಯೋಗ ಸಿದ್ಧಿ ಪಡೆದರು. ಬಸವಣ್ಣನವರ ಹಿರಿಯ ಸೋದರಿ ಅಕ್ಕನಾಗಲಾಂಬಿಕೆ ವೀರ ಮಹಿಳೆಯಾಗಿ, ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಪಡಿಸಲು ಯತ್ನಿಸಿದಾಗ, ಖಡ್ಗ ಹಿಡಿದು ಹೋರಾಟ ಮಾಡಿ ರಕ್ಷಿಸಿದಳು. ಇನ್ನು ಕೆಲವು ಶರಣೆಯರು ಕದಿರೆ ರೆಮ್ಮವ್ವೆ, ಸತ್ಯಕ್ಕ, ಮುಕ್ತಾಯಕ್ಕ ಮುಂತಾದವರು ವಚನಗಳನ್ನು ರಚನೆ ಮಾಡಿದ್ದಾರೆ. ಶರಣ ಪರಂಪರೆಯಲ್ಲಿ ಬಂದ ಆಂಧ್ರದ ಕಾಕತೀಯ ರುದ್ರಮಾಂಬೆ, ಕೆಳದಿಯ ಚೆನ್ನಮ್ಮ ಕಿತ್ತೂರು ಚನ್ನಮ್ಮ, ಬೆಳವಡಿ ಮಲ್ಲಮ್ಮ ಮುಂತಾದವರು ವೀರ ರಾಣಿಯರಾದರೆ ಹೇಮರೆಡ್ಡಿ ಮಲ್ಲಮ್ಮ ಆದರ್ಶ ಗೃಹಿಣಿ ಎನಿಸಿಕೊಂಡಿದ್ದಾಳೆ.

ಶರಣರ ವಿಚಾರಧಾರೆ ಮಹಿಳೆಯರ ಸರ್ವಾಂಗ ಪರಿಪೂರ್ಣ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಸತಿಯು ಕೇವಲ ಪತಿಯ ಭೋಗದ ಗೊಂಬೆ, ದಾಸಿ ಮಾತ್ರವಲ್ಲ; ಉತ್ತಮ ಸಂಗಾತಿ, ಮಾರ್ಗದರ್ಶಕಳೂ ಆಗಬೇಕು. ಕೇವಲ ವಸ್ತ್ರ ಒಡವೆ, ಧನ-ಕನಕಗಳಲ್ಲಿ ಮಾತ್ರ ಆಸಕ್ತಿ ತೋರದೆ ಹೆಚ್ಚಿನದನ್ನು ಮಹಿಳೆಯರು ಸಾಧಿಸಲು ಪ್ರಯತ್ನ ಮಾಡಬೇಕು. ಸಾಮಾನ್ಯವಾಗಿ ಭಾವ ಜೀವಿಗಳಾದ ಮಹಿಳೆಯರು ಮೂಢನಂಬಿಕೆಗಳ ಆಗರವಾಗಿರುವರು. ಆದರೆ ಅನುಭವ ಮಂಟಪದ ಶರಣೆಯರು ಇಟ್ಟ ವೈಚಾರಿಕ ಹೆಜ್ಜೆಗಳನ್ನು ನೋಡಿದರೆ ಇಂದಿನ ಶತಮಾನದ ಮಹಿಳೆಯರು ಬೆರಗಾಗುವಂತೆ, ಬೆಪ್ಪಾಗುವಂತೆ ಆಗುತ್ತದೆ. ವಚನ ಸಾಹಿತ್ಯವನ್ನು ಜಾತಿವರ್ಣವರ್ಗರಹಿತ ಸಮಾಜ ರಚನೆಯ ಸಂವಿಧಾನ ಎಂದು ಭಾವಿಸಿದರೆ ವಚನಕಾರರಾದ ಶರಣ-ಶರಣೆಯರು ಸಂವಿಧಾನ ಕರ್ತೃಗಳಾಗುತ್ತಾರೆ. ''ವ್ರತ ತಪ್ಪಲು ಸೈರಿಸಬಹುದು, ಕಾಯಕ ತಪ್ಪಲು ಸೈರಿಸಲಾಗದು'' ಎನ್ನುವ ಕಾಳವ್ವೆ ಎಂಬ ಶರಣೆ ದುಡಿಮೆಯ ಬಗ್ಗೆ ಇದ್ದ ಸಮಷ್ಟಿ ಪ್ರಜ್ಞೆಯನ್ನು ಪ್ರದರ್ಶಿಸಿದರೆ, ಭಕ್ತರು ಕಾಯಕವೆಂದು ಅಡ್ಡದಾರಿಯಿಂದ ಹಣ ಸಂಪಾದಿಸಿ ದಾಸೋಹ ಮಾಡಿ ಪುಣ್ಯಗಳಿಸುತ್ತೇನೆ ಎಂದರೆ ''ಹಾಗೆ ಮಾಡಿದ್ದು ಕಾಯಕವಲ್ಲ ನೀಡಿದ್ದು ದಾಸೋಹಕ್ಕೆ ಸಲ್ಲದು'' ಎಂದು ಆಯ್ದಕ್ಕಿ ಲಕ್ಕಮ್ಮ ಶಾಸನ ಬರೆಯುತ್ತಾಳೆ.

ಹೀಗೆ ಕನ್ನಡ ನಾಡಿನ ಇತಿಹಾಸದಲ್ಲಿ ಸಮಾನತೆಯ ಕಹಳೆಯನ್ನು ಊದಿದ ಬಸವಾದಿ ಪ್ರಮಥರ ಚಳುವಳಿ ಒಂದು ಚೈತನ್ಯಶಾಲಿ ಜೀವಂತ ಸಮಾಜವನ್ನು ಕಟ್ಟಿತಷ್ಟೇ ಅಲ್ಲ ಅನುಭವ ಮಂಟಪವೆಂಬ ಆಗಸದಲ್ಲಿ ಅನೇಕ ಶರಣ-ಶರಣೆಯರ ತಾರಾ ಸಮೂಹವನ್ನು ಪ್ರದರ್ಶಿಸಿತಷ್ಟೇ ಅಲ್ಲ ವಚನ ಸಾಹಿತ್ಯವೆಂಬ ಜೀವಂತ ಸಾಹಿತ್ಯ ನೀಡಿ ಜನ ಜೀವನವನ್ನು ಉದಾತ್ತೀಕರಿಸಿತು.



# ಆತ್ಮೀಯರಲ್ಲಿ ಕಳಕಳಿಯ ಕೋರಿಕೆ

ಶರಣ ಬಂಧುಗಳಿಗೆ

ಬಸವ ಸ್ಮರಣಪೂರ್ವಕ ಶುಭಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮವನ್ನು ಹಾರೈಸುತ್ತೇನೆ. ವಿಜಯ ಕರ್ನಾಟಕ ಪತ್ರಿಕೆಯನ್ನು ತಾವೆಲ್ಲರೂ ಓದಿರಬಹುದು. (ಮುಂದಿನ ದಿನಗಳಲ್ಲಿ ತಪ್ಪದೆ ಓದಬೇಕೆಂದು ಆತ್ಮೀಯ ಸೂಚನೆ) ಧಾರವಾಡ ಉತ್ತರ ಲೋಕ ಸಭಾ ಕ್ಷೇತ್ರದಿಂದ ಇದೀಗ ಒದಗಿ ಬಂದಿರುವ ಚುನಾವಣೆಯಲ್ಲಿ ನಾನು ಸ್ಪರ್ಧಿಸುತ್ತಿದ್ದೇನೆ ಎಂಬ ವಿಷಯ ತಿಳಿದು ಕೆಲವರಿಗೆ ಹರ್ಷಾತಿರೇಕ, ಕೆಲವರಿಗೆ ಆತಂಕ ಮತ್ತೆ ಕೆಲವರಿಗೆ ಅಸಹನೆ, ತಳಮಳ. ರಾಜಕೀಯ ಎಂದರೆ ನೀರಿನ ಕೊಳವಲ್ಲ, ಕೆಸರಿನ ಗುಂಡಿ ಎಂಬ ಭಾವನೆ ಇರುವವರಿಗಂತೂ ತುಂಬಾ ಭಯ, ಗಾಬರಿ. ''ಮಾತಾಜಿ ಹೀಗೇಕೆ ಮಾಡಿದರು ?!'' ಎಂದು ಅವರೆಲ್ಲ ಕಳವಳ ಪಡುತ್ತಿರಲೂ ಸಾಕು. ''ಸಾಮಾನ್ಯವಾಗಿ ಯಾವ ನಿರ್ಧಾರವನ್ನೇ ಕೈಗೊಂಡರೂ ಸೂಕ್ತ ನಿರ್ಧಾರವೇ ಆಗಿರುವುದು'' ಎಂಬ ಪೂರ್ಣ ವಿಶ್ವಾಸ ನಮ್ಮ ಬಗ್ಗೆ ಹೊಂದಿರುವ ಶರಣರು ಆತಂಕಗೊಂಡಿರುವವರನ್ನು ಸಮಾಧಾನ ಪಡಿಸುತ್ತಿರಬಹುದು; ಮನವರಿಕೆ ಮಾಡುತ್ತಿರಬಹುದು. ನಾನೇಕೆ ಈ ನಿರ್ಧಾರ ಕೈಗೊಂಡೆ ಎಂಬ ಬಗ್ಗೆ ಪ್ರತ್ಯೇಕ ಲೇಖನವನ್ನು ಕಲ್ಯಾಣ ಕಿರಣದ ಇದೇ ಮಾರ್ಚ್ ಸಂಚಿಕೆಯಲ್ಲಿ ಬರೆದಿದ್ದೇನೆ, ಓದಿರಿ.

ಕೆಲವೊಂದು ಸಂಗತಿಗಳನ್ನು ಮೊದಲೇ ಬಹಿರಂಗ ಪಡಿಸುವುದು ಸಾಧ್ಯವಿಲ್ಲ ಮತ್ತು ಸೂಕ್ತವೂ ಅಲ್ಲ. ತಾನಾಗಿಯೇ ಒದಗಿ ಬಂದಿರುವ ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ಇದು ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಇಚ್ಛೆ ಎಂದೇ ನಾನು ಮತ್ತು ನಮ್ಮ ಸಂಸ್ಥೆಯ ಜಂಗಮ ಮೂರ್ತಿಗಳು ನಂಬಿದ್ದೇವೆ. ನನ್ನ ಉದ್ದೇಶ ಅತ್ಯಂತ ಉದಾತ್ತವಾಗಿದ್ದು ''ಆಡದೆ ಮಾಡುವನು ರೂಢಿಯೊಳಗೆ ಉತ್ತಮನು'' ಎಂಬ ಸರ್ವಜ್ಞ ವಾಣಿಯಂತೆ ಕೆಲವೊಂದು ಯೋಜನೆಗಳನ್ನು ಮೊದಲು ಕಾರ್ಯರೂಪಕ್ಕಿಳಿಸಿ ನಂತರ ಅದರ ಬಗ್ಗೆ ಹೇಳಬೇಕೆಂದು ಆಲೋಚಿಸಿದ್ದೇನೆ. ಈ ದಿಸೆಯಲ್ಲಿ ನಮ್ಮ ಆತ್ಮೀಯರೊಡನೆ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ಬಯಸಿದ್ದೇನೆ :

1. ಪ್ರಚಾರ ಸಾಮಗ್ರಿ ಮುಂತಾದುವನ್ನು ಪಕ್ಷದಿಂದ ಕೊಡುವುದೇ ಅಲ್ಲದೆ ಹೆಚ್ಚಿನ ಜವಾಬ್ದಾರಿಯನ್ನು ಶಾಸಕ ಸ್ಥಾನಕ್ಕೆ ನಿಂತ ಅಭ್ಯರ್ಥಿಗಳೇ ನಿರ್ವಹಿಸುತ್ತಾರೆ. ಚುನಾವಣಾ ಪ್ರಚಾರಕ್ಕೆ ಬಂದಿರುವ ಕಾರ್ಯಕರ್ತರ ಊಟ-ವಸತಿಯ ಜವಾಬ್ದಾರಿ, ಗಾಡಿಗಳ ವೆಚ್ಚ ಭರಿಸಲು ತಿಳಿಸಿದ್ದಾರೆ. ಈ ದಾಸೋಹ ವೆಚ್ಚಕ್ಕೆ ಜೋಳಿಗೆ ಹಾಕಲು ಪಕ್ಷದ ಮುಖಂಡರು ತಿಳಿಸಿದ್ದಾರೆ. ಆದ್ದರಿಂದ ಸಹೃದಯರಾದ ಆತ್ಮೀಯರು ಉದಾರ ಮನಸ್ಸಿನಿಂದ ದೇಣಿಗೆ ಕೊಡಬೇಕೆಂದು ಮನವಿ ಮಾಡುತ್ತಲಿದ್ದೇನೆ. ಕೆಲವರು ಹೇಳಿದರು, ''ಹೊಸದಾಗಿ ಹುಟ್ಟಿರುವ ಕನ್ನಡ ನಾಡು ಪಕ್ಷ ಆರ್ಥಿಕವಾಗಿ ಸಬಲವಾಗಿಲ್ಲ, ನಿಮಗೆ ಇಷ್ಟವಿದ್ದಿದ್ದರೆ ಬಲಿಷ್ಠ ಪಕ್ಷಗಳಿಂದಲೇ ಚುನಾವಣೆಗೆ ನಿಲ್ಲಿಸಬಹುದಿತ್ತು. ಅವರು

ಪಾರ್ಟಿ ಫಂಡ್ ಬೇಕಾದಷ್ಟು ಕೊಡುತ್ತಿದ್ದರು''. ಮಾತ್ರವಲ್ಲ ಒಂದೆರಡು ಪಕ್ಷಗಳ ನೇತಾರರು ನಮ್ಮನ್ನು ಭೇಟಿಯಾಗಲು ಆಸಕ್ತಿ ಸಹ ತೋರಿಸಿದ್ದರು. ಆದರೆ ಧರ್ಮಪಿತ ಬಸವಣ್ಣನವರು ಸದಾ ವಚನಗಳ ಸನ್ನೆ ಕೋಲು ಹಿಡಿದು ಕಾಯುತ್ತಾರೆ:

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ
ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ
ಪ್ರಮಾದ ವಶಾತ್ ಬಂದರೆ ಹುಸಿಯೆನೆಂಬವರಿಲ್ಲ
ನಿರಾಶೆ-ನಿರ್ಭಯ ಲಿಂಗದೇವ ನಿಮ್ಮ ಶರಣಂಗಲ್ಲದಿಲ್ಲ

ಕನ್ನಡ ನಾಡು ಪಕ್ಷದ ಸಿದ್ಧಾಂತ, ಪಕ್ಷದ ಸಂಸ್ಥಾಪಕರ ಕಾಯಕ ಪ್ರಧಾನ ವೃತ್ತಿ ಜೀವನ, ಕಾರ್ಯಕರ್ತರ ಸಭ್ಯ ನಡೆ-ನುಡಿ ಚುನಾವಣೆಗೆ ನಿಲ್ಲಲು ಧೈರ್ಯ ನೀಡಿದವು.

ಈ ಹಿನ್ನೆಲೆಯಲ್ಲಿ ನಮ್ಮ ಮೇಲೆ ಸ್ವಲ್ಪ ಭಾರವನ್ನು ಮಾತ್ರ ವಹಿಸಿ ನಮ್ಮದೇ ಕಾರ್ಯಕರ್ತರ ಊಟೋಪಚಾರ ನಿರ್ವಹಿಸಲು ಕೇಳಿಕೊಂಡಿದ್ದಾರೆ. ತಾತ್ಕಾಲಿಕ ವಸತಿ ವ್ಯವಸ್ಥೆ ದಾಸೋಹದ ವ್ಯವಸ್ಥೆಗೆ ಅಗತ್ಯ ಬೀಳುವ ಹಣವನ್ನು ದಾನಿಗಳು ತಮ್ಮ ಕೈಲಾದಷ್ಟು ದೇಣಿಗೆ ಮೂಲಕ ಕೊಡುವುದು ನಿಜಕ್ಕೂ ಸ್ತುತ್ಯಾರ್ಹ. ಅಂತಹವರು ನಮ್ಮ ಟ್ರಸ್ಟ್ ಹೆಸರಿಗೆ ಬ್ಯಾಂಕ್ ಡ್ರಾಫ್ಟ್ ಕಳಿಸದೆ ನನ್ನ ವೈಯಕ್ತಿಕ ಹೆಸರಿಗೆ, ಧಾರವಾಡ ಶಾಖೆಯ ಡಿ.ಡಿ. ತೆಗೆಸಲು ಕೋರಿಕೆ.

2. ಕಲ್ಯಾಣ ಪರ್ವವು ಮೇ 1,2 ಮತ್ತು 3 ರಂದು ನಡೆಯುತ್ತದೆ. ಚುನಾವಣಾ ದಿನಾಂಕಗಳಿಂದ ಎಲ್ಲಿ ಅನಾನುಕೂಲತೆ ಉಂಟಾಗುವುದೋ ಎಂಬ ಶಂಕೆ ಇತ್ತು. ಧಾರವಾಡ ಉತ್ತರ ಲೋಕ ಸಭೆಯ ಚುನಾವಣೆ ಏಪ್ರಿಲ್ 26ಕ್ಕೆ ನಿಗದಿಯಾಗಿದೆ. ಮುಂದೆ 4 ದಿವಸಗಳ ಅವಧಿ ಇದೆ. ಬಾಕಿ ಸಿದ್ಧತೆ ಮೊದಲೇ ಆಗಿರುತ್ತದೆ. ಆದ್ದರಿಂದ ಕಲ್ಯಾಣ ಪರ್ವವು ನಿರಾತಂಕವಾಗಿ ನಡೆಯಲು ಚುನಾವಣಾ ದಿನಾಂಕಗಳು ಅನುಕೂಲಕರವಾಗಿವೆ.

ಕಲ್ಯಾಣ ಪರ್ವದ ನಿರ್ವಹಣೆಗೆ ಪೆಂಡಾಲ್, ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಇತ್ಯಾದಿಗೆ ಅಪಾರ ಹಣ ಬೇಕಾಗುತ್ತದೆ. ಹೀಗಾಗಿ ನಿಮಗೆ ದೇಣಿಗೆ ಸಂಗ್ರಹಕ್ಕೆ ರಸೀತಿ ಪುಸ್ತಕ ಕಳಿಸಲಾಗಿದೆ. ಯಾರಿಗೆ ಕಳಿಸಲು ಮರೆಯಲಾಗಿದೆಯೋ ಅಥವಾ ಸ್ವಯಂ ಪ್ರೇರಣೆಯಿಂದ ದೇಣಿಗೆ ಸಂಗ್ರಹ ಮಾಡುವ ಅಭಿಲಾಷೆ ಇದೆಯೋ ಅವರು ಪತ್ರ ಬರೆದು ರಸೀತಿ ಪುಸ್ತಕ ತರಿಸಿಕೊಳ್ಳಬಹುದು. ಮೊನ್ನೆ ಮೊನ್ನೆ ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲಾಗಿದೆ ಎಂದು ಕೇಳಲು ನಿಮಗೆ ಸಂಕೋಚ-ಮುಜುಗರ ಆಗಬಹುದು. ನೀವೇನು ನಿಮ್ಮ ಮನೆತನಕ್ಕಾಗಿ ಕೇಳುವುದಿಲ್ಲ; ನಾವು ನಮ್ಮ ಸ್ವಾರ್ಥಕ್ಕೆ ಕೇಳುವುದಿಲ್ಲ; ಕೊಡುವ ಮನಸ್ಸಿದ್ದವರು ಕೊಡುತ್ತಾರೆ. ಆದ್ದರಿಂದ ಪ್ರಯತ್ನ ಮಾಡಬೇಕೆಂದು ಕೋರುತ್ತೇವೆ.

3. ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು, ಶರಣ-ಶರಣೆಯರು ಸಾಧ್ಯವಾದಷ್ಟೂ



ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣಾ ಪ್ರಚಾರ ಕಾರ್ಯಕ್ಕೆ ಆದಷ್ಟು ಬೇಗನೆ ಧಾರವಾಡಕ್ಕೆ ಆಗಮಿಸಬೇಕು. ಉಳಿದೆಲ್ಲ ರಾಜಕೀಯ ಪಕ್ಷಗಳವರಂತೆ ಹಣವನ್ನು ಸೂರೆ ಮಾಡಲು ನಮ್ಮ ಬಳಿ ಹಣವೂ ಇಲ್ಲ, ಮನಸ್ಸೂ ಇಲ್ಲ. ಆದ್ದರಿಂದ ಹೆಚ್ಚಿನ ಜನರು ಮತಕ್ಷೇತ್ರದ ವಿವಿಧ ಗ್ರಾಮ, ಊರುಗಳಿಗೆ ತೆರಳಿ ಜನರನ್ನು ಮುಖತಃ ಭೇಟಿಯಾಗಿ ಕನ್ನಡ ನಾಡು ಪಕ್ಷದ ಧ್ಯೇಯೋದ್ದೇಶ, ನಮ್ಮ ಪರಿಚಯ, ನಮ್ಮ ಉದ್ದೇಶ - ಇವುಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು. ನಾವು ಚುನಾವಣೆಗೆ ನಿಂತಿರುವುದು ಅಧಿಕಾರ ಪಡೆದು, ಅದರ ಮೂಲಕ ಹಣ ಮಾಡಲು ಅಲ್ಲ; ಪ್ರಾಂಜಲ ಮನಸ್ಸಿನಿಂದ ನಾಡ ಸೇವೆ ಮಾಡಲು, ಜನತೆಯ ಹಿತಚಿಂತನೆ ಮಾಡಲು. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಬರಬೇಕೆಂದು ಆಹ್ವಾನಿಸುತ್ತೇವೆ.

### ವಿಶೇಷ ಸೂಚನೆ

ಶರಣ ಬಂಧುಗಳೇ,

ಕನ್ನಡ ನಾಡು ಪಾರ್ಟಿಯ ಪ್ರಮುಖರಿಂದ ಚುನಾವಣೆಯಲ್ಲಿ ಲೋಕಸಭೆಗೆ ಸ್ಪರ್ಧಿಸಲು ಆಹ್ವಾನ ಬಂದುದು ನನಗೆ ಅತೀವ ಆಶ್ಚರ್ಯ ಉಂಟು ಮಾಡಿತು. ನೇರವಾಗಿ ನಾನೇ ಸ್ಪರ್ಧಿಸುವ ಬಗ್ಗೆ ಕನಸು-ಮನಸಿನಲ್ಲೂ ಆಲೋಚನೆ ಮಾಡಿರಲಿಲ್ಲ. ನಮ್ಮ ಮೇಲೆ ಹೆಚ್ಚಿನ ಭಾರ ಹಾಕದೆ ತಾವೇ ನಿರ್ವಹಿಸುವ ಭರವಸೆಯೊಡನೆ ಪಕ್ಷದ ಪ್ರಮುಖರು ಆಹ್ವಾನಿಸಿದಾಗ ಆಶ್ಚರ್ಯವಾದರೂ ಆಂತರಂಗಿಕವಾಗಿ ಚಿಂತಿಸಿ, ''ಇದು ಅಪ್ಪ ಬಸವಣ್ಣನವರ ಅಪೇಕ್ಷೆ ಇರಬಹುದೆ ? ದೇವರ ಸಂಕಲ್ಪ ಇರಬಹುದೆ ? ಬಯಸದೇ ಈ ಆಹ್ವಾನ ಬಂದಿದೆ. ಒಪ್ಪಿಕೊಳ್ಳುವುದೇ ಒಳ್ಳೆಯದು'' ಎಂದು ನಮ್ಮ ಸಂಸ್ಥೆಯ ಜಂಗಮ ಮೂರ್ತಿಗಳೊಡನೆ ಚಿಂತನೆ ಮಾಡಿ ಒಪ್ಪಿಗೆ ನೀಡಿದ್ದೇನೆ. ತಾವೆಲ್ಲರೂ ಸತ್ಸಂಕಲ್ಪ ಮಾಡಿ ಪೂಜೆಯನ್ನು ಮಾಡುವಾಗ ಚುನಾವಣೆಯಲ್ಲಿ ಯಶಸ್ಸಿಗಾಗಿ ಪ್ರಾರ್ಥಿಸಿರಿ. ಒಂದು ದಿವಸ ವಿಶೇಷವಾಗಿ ಬಸವೇಶ್ವರ ಪೂಜಾವ್ರತವನ್ನು ಸತ್ಸಂಕಲ್ಪದೊಡನೆ ಮಾಡಿರಿ.

**ಶುಭಹಾರೈಕೆಗಳೊಡನೆ,**
**ಮಾತಾಜಿ**

### ಸ್ವಯಂ ಸೇವಕರಿಗೆ ಕರೆ

ಪೂಜ್ಯ ಮಾತಾಜಿಯವರು ಚುನಾವಣೆಯಲ್ಲಿ ಲೋಕಸಭಾ ಅಭ್ಯರ್ಥಿಯಾಗಿರುವ ಕಾರಣ ಪ್ರಚಾರದಲ್ಲಿ ಆಸಕ್ತಿ ಇರುವ ಶರಣ-ಶರಣೆಯರು ಧಾರವಾಡಕ್ಕೆ ಹೋಗಬಹುದು. ಬಸವ ಕಲ್ಯಾಣದ ಸಮೀಪವಿರುವ ಸ್ವಯಂ ಸೇವಕರು ಕನಿಷ್ಠಪಕ್ಷ 15 ದಿವಸಗಳ ಮುಂಚೆ ಅಥವಾ ತಮಗೆ ಸಾಧ್ಯವಾದಷ್ಟು ದಿವಸ ಮೊದಲು ಸೇವಾ ಕಾರ್ಯಕ್ಕೆ ಬಸವ ಕಲ್ಯಾಣಕ್ಕೆ ಬಂದು ಕಾಯ ದಾಸೋಹದಲ್ಲಿ ನಿರತರಾಗಬೇಕೆಂದು ಕೋರುತ್ತೇವೆ.

- ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು



## ನಾನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು ಏಕೆ?

- ಮಾತಾಜಿ

"ಧರ್ಮ ಪ್ರಚಾರಕ್ಕೆಂದು ಇಡೀ ಜೀವಿತವನ್ನೇ ಮುಡುಪಿಟ್ಟ ಮಾತಾಜಿ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟುದೇಕೆ ?" ಎಂಬ ಸಂದೇಹ, ಚಿಂತೆ ಅನೇಕರನ್ನು ಕಾಡುತ್ತಿರಲೂ ಸಾಕು. ಲಿಂಗದೇವನ "ಲೀಲಾಜಾಲದಲ್ಲಿ ಸಿಕ್ಕಿ ವಿರೋಧಿಗಳು ಒಡ್ಡಿದ ವಿಪತ್ತುಗಳ ಬಲೆಯಿಂದ ಪಾರಾಗಿ ಸ್ವಲ್ಪ ದಣಿವು ಆರಿಸಿಕೊಳ್ಳುತ್ತ ನಿಶ್ಚಿಂತವಾಗುವ ಸಮಯದಲ್ಲೇ ಮಾತಾಜಿ ಮತ್ತೊಂದು ಏನಾದರೂ (?) ಮಾಡಿ ಮತ್ಸರಿಗರ ಬಾಯಿಗೆ ಆಹಾರ ನೀಡುತ್ತಾರೆ" ಎಂದು ಕೆಲವು ಮೆತ್ತನೆಯ ಸ್ವಭಾವದ ನಮ್ಮ ಆತ್ಮೀಯರು ಆಲೋಚನೆ ಮಾಡುವುದುಂಟು. ಕೆಲವು ಸಂದರ್ಭಗಳು ಅತ್ಯಂತ ಆಕಸ್ಮಿಕವಾಗಿ ಒದಗಿ ಬರುವುದೂ ಅಷ್ಟೇ ಸತ್ಯ !

17ನೆಯ ಶರಣ ಮೇಳಕ್ಕೆ ಕಾಂಗ್ರೆಸ್, ಬಿ.ಜೆ.ಪಿ, ಜನತಾ ಪಕ್ಷ, ಕನ್ನಡ ನಾಡು ಮುಂತಾದ ಎಲ್ಲ ಪಕ್ಷಗಳ ಧುರೀಣರನ್ನು ಆಹ್ವಾನಿಸಿದ್ದೆವು. ಕೆಲವರು ಬಂದರು, ಮತ್ತೆ ಕೆಲವರು ಮಾತು ಕೊಟ್ಟೂ ಬರಲಿಲ್ಲ. ಶರಣ ಮೇಳಕ್ಕೆ ಹೋಗಬಾರದು ಎಂದು ಅನೇಕರು ಶ್ರೀ ವಿಜಯ ಸಂಕೇಶ್ವರರ ಮೇಲೂ ಒತ್ತಡ ತಂದರಂತೆ. ಆದರೂ ಅವರು ತಮ್ಮ ಧರ್ಮಪತ್ನಿ ಶ್ರೀಮತಿ ಲಲಿತಾ ಅವರ ಸಂಗಡ, ಜೊತೆಗೆ ಶ್ರೀ ಅಡಿವೆಪ್ಪ ಮಾಸೂರು ಅವರನ್ನೂ ಕರೆದುಕೊಂಡು ಬಂದರು. ಶ್ರೀಮತಿ ಲಲಿತಾ ಬಾಗಲಕೋಟೆಯಲ್ಲಿ ಪ್ರವಚನವಾದಾಗ ಕೇಳಿದುದೇ ಅಲ್ಲದೆ ಅವರ ತಂದೆಯವರು ಮನೆಗೆ ಪೂಜೆಗಾಗಿ ಆಹ್ವಾನಿಸಿದ್ದರಂತೆ. ಹಳೆಯ ನೆನಪು ಮೆಲುಕು ಹಾಕಿದರು.

ದಿ. 13-1-2004 ಶ್ರೀ ವಿಜಯ ಸಂಕೇಶ್ವರರು ರಾಷ್ಟ್ರೀಯ ಬಸವ ದಳಗಳ ಅಧಿವೇಶನ ಉದ್ಘಾಟಿಸಿದ್ದಲ್ಲದೆ ತಾವು ಬಿ.ಜೆ.ಪಿ ಬಿಟ್ಟ ಕಾರಣ ತಿಳಿಸಿ, ಕನ್ನಡ ನಾಡು ಪಾರ್ಟಿ ಎಂಬ ಪ್ರಾದೇಶಿಕ ಪಕ್ಷ ಸ್ಥಾಪಿಸಿದ ವಿಷಯ ಹೇಳಿ, ಅದರ ಧ್ಯೇಯೋದ್ದೇಶ ವಿವರಿಸಿದರು. ನಂತರ ಅಡಿವೆಪ್ಪ ಮಾಸೂರ ಮಾತನಾಡಿ, "ಇದು ಧಾರ್ಮಿಕ ಸಭೆ. ಇಲ್ಲಿ ಪಕ್ಷ ರಾಜಕೀಯದ ಬಗ್ಗೆ ಮಾತನಾಡಬೇಕೋ ಬೇಡವೋ ಎಂಬ ಸಂದೇಹದಲ್ಲಿದ್ದೆ. ಪೂಜ್ಯ ಮಾತಾಜಿ ಪ್ರಾಸ್ತಾವಿಕವಾಗಿ ಮಾತನಾಡಿದ ರಾಷ್ಟ್ರ ನಿರ್ಮಾಣದ ಪರಿಕಲ್ಪನೆ ಕೇಳುತ್ತಲೇ ನಾನೂ ನಮ್ಮ ಪಕ್ಷದ ಧ್ಯೇಯೋದ್ದೇಶ ಕುರಿತು ಮನಬಿಚ್ಚಿ ಹೇಳಬೇಕೆನಿಸಿದೆ" ಎಂದು ನುಡಿದರು. ಮೊದಲು ಪ್ರಾಸ್ತಾವಿಕವಾಗಿ ನಾನು ಮಾತನಾಡಿದ "ಇಂದಿನ ಪರಿಸ್ಥಿತಿ, ಮುಂದೆ ಆಗಬೇಕಾದ ಕೆಲಸ", ಶ್ರೀ ವಿಜಯ ಸಂಕೇಶ್ವರರ ಪಕ್ಷ ಸ್ಥಾಪನೆಯ ಆಗತ್ಯ, ಅಡಿವೆಪ್ಪ ಮಾಸೂರ ಮಾತನಾಡಿದ ಕನ್ನಡ ನಾಡು ಪ್ರಾದೇಶಿಕ ಪಕ್ಷದ ಧ್ಯೇಯೋದ್ದೇಶ - ಎಲ್ಲವೂ ಜನರ ಮೇಲೆ ಬಹಳ ಪ್ರಭಾವ ಬೀರಿದವು. ನಂತರ ನಾನು ಕೂಡಲ ಸಂಗಮಕ್ಕೆ ಹೋಗುವ ಮಧ್ಯೆ ಧಾರವಾಡದಲ್ಲಿಳಿದಾಗ ನಮ್ಮ ಪ್ರಾರ್ಥನಾ ಸಭೆ - ಶರಣ ಸಂಗಮಕ್ಕೆ ಶ್ರೀ ಮಾಸೂರ ಅವರನ್ನು ಆಹ್ವಾನಿಸಿದಾಗ ಬಂದು ಭಾಗವಹಿಸಿದರು ; ರಾಷ್ಟ್ರೀಯ ಬಸವ ದಳದವರ ಸಹಕಾರ ಕೋರಿದರು.



ಈ ಸದ್ಯ ಬೇರಾವುದೂ ದೊಡ್ಡ ಕಾರ್ಯಕ್ರಮ ಇರದಿದ್ದುದರಿಂದ ಕೆಲವು ರಾಷ್ಟ್ರೀಯ ಬಸವ ದಳದವರನ್ನು ಧಾರವಾಡಕ್ಕೆ ಕರೆದು, ಚರ್ಚಿಸಿ, ನಿರ್ಣಯ ತೆಗೆದುಕೊಂಡರಾಯಿತು ಎಂದು ದಿ. 15-2-2004 ರಂದು ಸಭೆ ಕರೆದು ನಿರ್ಣಯ ಕೈಗೊಂಡು, ಅಂದು ಸಂಜೆ ಹುಬ್ಬಳ್ಳಿಯಲ್ಲಿ ಕನ್ನಡ ನಾಡು ಪಾರ್ಟಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಘೋಷಿಸಲಾಯಿತು. ರಾಷ್ಟ್ರೀಯ ಬಸವ ದಳದ ನೈತಿಕ ಬೆಂಬಲವು ಕನ್ನಡ ನಾಡು ಪಾರ್ಟಿಗೆ ಇದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಯಿತು.

ದಿ. 24-2-2004 ರಂದು ಒಂದು ಕಾರ್ಯಕ್ರಮವು ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೋಕಿನ ಸಾತನೂರು ಬಳಿಯ ದಾಳಿಂಬ ಎಂಬಲ್ಲಿತ್ತು. ಅದಕ್ಕೆಂದು ಧಾರವಾಡದಿಂದ ಟ್ರೇನಿನಲ್ಲಿ ಬೆಂಗಳೂರಿಗೆ ಬಂದೆ. ಆಗ ಇದ್ದಕ್ಕಿದ್ದಂತೆಯೇ ದಿ. 23-2-2004 ರಂದು ಫೋನ್ ಬಂದಿತು ಶ್ರೀ ಅಡಿವೆಪ್ಪ ಮಾಸೂರ ಅವರಿಂದ. ಅದರಲ್ಲಿ ಧಾರವಾಡ ಉತ್ತರ ಲೋಕ ಸಭಾ ಕ್ಷೇತ್ರಕ್ಕೆ ಕನ್ನಡ ನಾಡು ಪಾರ್ಟಿಯಿಂದ ಅಭ್ಯರ್ಥಿಯನ್ನಾಗಿ ಮಾಡಲು ಇಚ್ಛೆ ಹೊಂದಿರುವುದಾಗಿಯೂ ನಮ್ಮ ಅಭಿಪ್ರಾಯ ಏನೆಂದು ಕೇಳಿದರು. ನನಗೆ ಆಶ್ಚರ್ಯ ಉಂಟಾಯಿತು. ನಾನು ಕನಸು ಮನಸಿನಲ್ಲೂ ಇದನ್ನು ನಿರೀಕ್ಷಿಸಿರಲಿಲ್ಲ. ಇತರರೊಡನೆ ಸಮಾಲೋಚಿಸಲು ಮತ್ತು ಸ್ವತಃ ನಾನೇ ಆಲೋಚಿಸಲು ಸಮಯಬೇಕು ಎಂದೆ. ನಮ್ಮ ಧರ್ಮ ಪೀಠದ ಜಂಗಮ ಮೂರ್ತಿಗಳೊಡನೆ, ಅಮೆರಿಕಾದಿಂದ ಬಂದಿದ್ದ ಯೋಗೀಶ್ವರಿ ಅವರೊಡನೆ ಚರ್ಚಿಸಿದೆ. ಎಲ್ಲರಿಗೂ ಆಶ್ಚರ್ಯವೇ ಆದರೂ ನಾವು ಬಯಸದೇ ತಾನಾಗಿಯೇ ಬಂದ ಈ ಆಹ್ವಾನ ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಗುರು ಬಸವಣ್ಣನವರ ಪ್ರೇರಣೆಯೇ ಇರಬಹುದು ಎಂದು ಅಭಿಪ್ರಾಯಪಟ್ಟರು. ಇನ್ನೂ ಕೆಲವು ಆತ್ಮೀಯರೊಡನೆ ಚರ್ಚಿಸಿ, ಒಪ್ಪಿಗೆಯನ್ನು ನೀಡಿದೆ. ಭಾನುವಾರ ದಿ. 29-2-2004 ರಂದು ತಮ್ಮ ದಿನಪತ್ರಿಕೆಗಳಾದ ವಿಜಯ ಕರ್ನಾಟಕ ಮತ್ತು ವಿಜಯ ಟೈಮ್ಸ್‌ದಲ್ಲಿ ಶ್ರೀ ವಿಜಯ ಸಂಕೇಶ್ವರರು ಘೋಷಿಸಿದರು. ಈ ವಾರ್ತೆಯನ್ನೋದಿ ಕೆಲವರು ಹರ್ಷ ಪುಳಕಿತರಾದರೆ ಮತ್ತೆ ಕೆಲವರು ಕಳವಳಗೊಂಡರು. ಅವರ ಕಳವಳಕ್ಕೆ ಕಾರಣಗಳು ಕೆಳಗಿನಂತಿವೆ :

1. "ರಾಜಕೀಯವು ತುಂಬಾ ಕೊಳಕು ಕ್ಷೇತ್ರ. ಧಾರ್ಮಿಕ ಜನರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಬಾರದು"

ಈ ಜಗತ್ತಿನಲ್ಲಿ ಎಲ್ಲೆಲ್ಲಿ ಒಳ್ಳಿತಿಲ್ಲ, ಎಲ್ಲೆಲ್ಲಿ ಕೊಳಕಿಲ್ಲ ಎಂಬ ಪ್ರಶ್ನೆ ಬಲು ಸಂದಿಗ್ಧ. ನಾನು ಅಧ್ಯಾತ್ಮಿಕ, ಸನ್ಯಾಸ ಜೀವನ ಸ್ವೀಕರಿಸಬೇಕು ಎಂದಾಗ ನಮ್ಮ ತಾತಂದಿರು ಹೇಳುತ್ತಿದ್ದರು "ನಿನಗೆ ಗೊತ್ತಿಲ್ಲಮ್ಮ. ಮಠಗಳು, ಸ್ವಾಮಿಗಳು ಎಷ್ಟು ಹಾಳಾಗಿದ್ದಾರೆ. ಮಠಗಳಲ್ಲಿ ಎಂಥಾ ವ್ಯವಹಾರ ನಡೆಯುತ್ತವೆ ಎಂಬುದು ನೀನರಿತಿಲ್ಲ". ನಾನು ಹೇಳಿದೆ, "ಇರಬಹುದು; ಆದರೆ ನಾವು ಆದರ್ಶ ಸನ್ಯಾಸಿಗಳಾಗಿ ಬದುಕಲು ಏಕೆ ಪ್ರಯತ್ನಿಸಬಾರದು?" ಇಂದು ನಮ್ಮ ಪ್ರವಚನ ಕೇಳಿದವರು, ನಮ್ಮ ಪ್ರಭಾವವಲಯದೊಳಕ್ಕೆ ಬಂದವರಲ್ಲಿ ಹೆಚ್ಚಿನ ಜನರು ಮಠಗಳಲ್ಲಿ, ಸ್ವಾಮಿಗಳಲ್ಲಿ ನಂಬಿಕೆ ಕಳೆದುಕೊಂಡಿದ್ದವರು. ಮತ್ತೆ ಕೆಲವರು ದೇವರು-ಧರ್ಮದಲ್ಲೇ ಶ್ರದ್ಧೆ ಇಲ್ಲದವರಾಗಿದ್ದರು. ಇಂದು ಅವರೆಲ್ಲ ಪಕ್ಕಾ ಧರ್ಮವಂತರು, ಗುರುಭಕ್ತರು ಆಗಿರುವುದಲ್ಲದೆ ನಮ್ಮನ್ನು ಗೌರವದಿಂದ ಭಕ್ತಿಯಿಂದ

ಕಾಣುವುದು ಮಾತ್ರವಲ್ಲ ನಾವು ಅವರ ಜೀವನದ ಅವಿಭಾಜ್ಯ ಅಂಗ ಎಂಬ ಆತ್ಮೀಯತೆಯಿಂದ ಕಾಣುತ್ತಾರೆ.

ನಾವು ಬಸವಣ್ಣನವರ ಕ್ರಾಂತಿಕಾರಿ ಜೀವನ, ಸಾಧನೆ, ಸಂದೇಶ ಕರಿತು ಚಲನಚಿತ್ರ ತೆಗೆಯಬೇಕು ಅಂದಾಗ ಪುನಃ ಅದೇ ಮಾತು. "ಚಲನಚಿತ್ರರಂಗದಲ್ಲಿ ಬಹಳ ಕೊಳಕಿದೆ. ಕುಡುಕರು, ಅನೀತಿವಂತರೇ ತುಂಬಿರುತ್ತಾರೆ. ಧಾರ್ಮಿಕ ಜನರಿಗೆ ಅದು ಸಲ್ಲದ ಕ್ಷೇತ್ರ". ಅಲ್ಲಿಯೂ ನಮ್ಮ ಅನುಭವ ತೀರಾ ಕಟುವಾಗಿ ಏನೂ ಇರಲಿಲ್ಲ. ಯಾರೂ ನಮ್ಮ ಎದುರಿಗೆ ಒಮ್ಮೆಯಾದರೂ ಕುಡಿದು ಬರಲಿಲ್ಲ, ಸಿಗರೇಟ್ ಸಹ ಸೇದುತ್ತಿರಲಿಲ್ಲ. ಅಷ್ಟೇ ಗೌರವಯುತವಾಗಿ ನಡೆಸಿಕೊಳ್ಳುತ್ತಿದ್ದರಷ್ಟೇ ಅಲ್ಲ ಬಹಳ ಬೇಗನೆ ಒಂದು ಮನೆಯವರಂತೆ ವರ್ತಿಸುತ್ತಿದ್ದರು. ಮಧ್ಯೆ ಮಧ್ಯೆ ತತ್ತ್ವಜ್ಞಾನದ ಚರ್ಚೆ ನಡೆಯುತ್ತಿತ್ತು. ಸಿನಿಮಾ ಷೂಟಿಂಗ್ ಮುಗಿದಾಗ ಬಸವ ತತ್ತ್ವದ ಬಗ್ಗೆ ತಾವು ಬಹಳಷ್ಟು ತಿಳಿದುಕೊಂಡೆವು ಎಂದರು. ನಂತರ ಒಮ್ಮೆ ಅಶೋಕ್, ಆ ಮೊದಲು ಅವರ ಚಿಂತನೆ ಸೀಮಿತವಾಗಿದ್ದು ನಂತರ ಅದು ಸಮಾಜ ಮುಖಿಯಾಯಿತು ಎಂದು ಹೇಳಿದರು.

ಯಾವುದೇ ಜಗತ್ತು ಇದ್ದರೂ ಅವರು ಧಾರ್ಮಿಕ ಜನಕ್ಕೆ ಗೌರವ ಕೊಡುತ್ತಾರೆ. ಈ ಸಂದರ್ಭದಲ್ಲಿ ಒಂದು ಪ್ರಸಂಗ ತಟ್ಟನೆ ನೆನಪಾಗುತ್ತದೆ. ದೆಹಲಿಯಲ್ಲಿ ಸಮ್ಮೇಳನ ಮಾಡಲು ನಿರ್ಧರಿಸಿ, ಪೂರ್ವ ಸಿದ್ಧತೆಗಾಗಿ ಬಾಡಿಗೆ ಮನೆ ನೋಡುತ್ತಿದ್ದೆವು. ಒಂದು ಮನೆ ಸಿಕ್ಕಿತು. ಅಲ್ಲಿ ಇರುತ್ತ ಅಕ್ಕಪಕ್ಕ ಎದುರಿನ ಮನೆಯಲ್ಲಿ ಪೂಜೆ-ಸತ್ಸಂಗ ಶುರು ಮಾಡಿದೆವು. ಪರಿಚಯದ ಜನರನ್ನು ವಾರದ ಪ್ರಾರ್ಥನೆಗೆ ಆಹ್ವಾನಿಸಿದೆವು. ಕೆಲವರೇ ಬಂದರು, ಮತ್ತೆ ಕೆಲವರು ಹಿಂಜರಿದರು. ಕಾರಣವೇನೆಂದು ವಿಚಾರಿಸಿದಾಗ ಆ ಮನೆ ಮಾಲಿಕ ಭಾರೀ ಗೂಂಡಾ, ಸುತ್ತಲಿನ ಜನಕ್ಕೆ ಸಿಂಹಸ್ವಪ್ನವಾಗಿದ್ದಾನೆಂದು ತಿಳಿಯಿತು. ಆತ ಬಹುದೊಡ್ಡ ಪ್ರಮಾದ ಮಾಡಿದ್ದ. ತನ್ನ ಜಮೀನುಗಳನ್ನು ಡಿ.ಡಿ.ಎ. (ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿ)ಗೆ ಕೊಟ್ಟು ಪರಿಹಾರ ಪಡೆದು ಪುನಃ ಅದನ್ನು ಸೈಟ್ ಮಾಡಿ ಮಾರಿದ್ದ. ಮನೆ ಕಟ್ಟಿಕೊಂಡ ಜನರು ತಮ್ಮ ಮನೆಗಳು ಇನ್ನು ನಿರ್ನಾಮವಾಗುತ್ತವೆ ಎಂದು ಗೋಳಾಡುತ್ತಲಿದ್ದರು. ಅಧಿಕಾರಿಗಳನ್ನು ಗೂಂಡಾಗಿರಿಯಿಂದ ಎದುರಿಸುತ್ತಿದ್ದನಂತೆ. ಇಷ್ಟೆಲ್ಲ ಗೊತ್ತಾಗುವ ವೇಳೆಗೆ ಆ ವ್ಯಕ್ತಿಯಲ್ಲಿ ಸ್ವಲ್ಪ ಸಾತ್ವಿಕ ಬದಲಾವಣೆ ಗೋಚರವಾಗುತ್ತಲಿತ್ತು. ಆತನ ಚರಿತ್ರೆ ಕೇಳಿ ನಾವು ಬೇರೆ ಮನೆ, ಹುಡುಕಿದೆವು. ಅಲ್ಲಿಗೆ ಹೋಗಿ ನಂತರ ಮನೆ ಖಾಲಿ ಮಾಡುವ ವಿಷಯ ತಿಳಿಸಿದಾಗ ಅವನು ದಿಗ್ಭ್ರಾಂತನಾದ; ಕಣ್ಣಲ್ಲಿ ನೀರಾಡಿತು. ಸಂತರ ಸೇವೆ ಮಾಡಿ ಪುಣ್ಯ ಪಡೆದುಕೊಳ್ಳುವ ಭಾಗ್ಯ ಇಲ್ಲವಾಯಿತು ಎಂದು ಆತ ಹಲುಬಿದಾಗ "ಇಂಥಾ ಕ್ರೂರಿಯ ಹೃದಯದಲ್ಲೂ ಅಂತಃಕರಣವಿದೆ" ಎನ್ನಿಸಿತು. "ಆ ಮನೆ ನಮಗೆ ಸಾಕಾಗುತ್ತಿರಲಿಲ್ಲ. ಇನ್ನು ಬಹಳ ಜನ ಸಿಬ್ಬಂದಿ ಬರುವರು. ಈ ಮನೆಗೆ ಪೂಜೆ-ಪ್ರಾರ್ಥನೆಗೆ ಬನ್ನಿರಿ" ಎಂದು ಸಮಾಧಾನ ಪಡಿಸಬೇಕಾಯಿತು.

ಎಲ್ಲ ರಂಗದಲ್ಲೂ ಒಳ್ಳೆಯವರು ಕೆಟ್ಟವರು ಇದ್ದೇ ಇರುವರು. ನಮ್ಮ ನಮ್ಮ ವ್ಯಕ್ತಿತ್ವ ಕಾಯ್ದುಕೊಂಡು ನಾವಿದ್ದರೆ ಆಯಿತಲ್ಲವೆ? ರಾಜಕೀಯ ಕೊಳಕು ಎಂದು ಸಾತ್ವಿಕರು ಒಳ್ಳೆಯವರು ದೂರ ಸರಿಯುತ್ತಲೇ ಇದ್ದರೆ, ಆ ರಂಗವು ಇನ್ನಷ್ಟು ಹೊಲಸೇ ಆಗುವುದಲ್ಲವೆ ? ಧರ್ಮಪಿತ



ಬಸವಣ್ಣನವರು ಈ ದಿಶೆಯಲ್ಲಿ ಒಂದು ಅದ್ಭುತವಾದ ಮಾದರಿ (Model). ತಾಯಿ ನೀಲಗಂಗಾಂಬಿಕೆ ಹೇಳುತ್ತಾಳೆ:

ಸಾಂದ್ರವಾಗಿ ಹರಗಣ ಭಕ್ತಿಯ ಮಾಳನೆಂತೊ
ಮಾದಲಾಂಬಿಕಾನಂದನು ?
ಸಾಂದ್ರವಾಗಿ ಬಿಜ್ಜಳನರಮನೆಯ ನಾ(ನ್ಯಾ)ಯ ನೋಳ್ಪನೆಂತೊ
ಮಾದರಸ(ನ) ಮೋಹದ ಮಗನು ?
ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೊ
ಗಂಗಾಪ್ರಿಯ ಕೂಡಲಸಂಗನ ಶರಣ ಚನ್ನಾ? ಬಸವ ದರ್ಶನ - 200

ರಾಜಕೀಯದಲ್ಲಿ ಉನ್ನತ ಹುದ್ದೆಗೇರಿದ ಬಸವಣ್ಣನವರು ಶರಣಗಣಪ್ರೇಮಿ, ದೇವ ಭಕ್ತ ದೇವಯೋಗಿಯಾಗಿ ಸಹ ವಿಜೃಂಭಿಸಿದರು. ಅವರ ಈ ಭವ್ಯ ಮತ್ತು ದಿವ್ಯ ವ್ಯಕ್ತಿತ್ವ ಕಂಡು ವಿಸ್ಮಿತರಾದ ಪ್ರಭುದೇವರು ಹೀಗೆ ಬಣ್ಣಿಸುತ್ತಾರೆ :

ಕುಂಡಲಿಗನ ಕೀಟದಂತೆ
ಮೈ ಮಣ್ಣಾಗದಂತಿರ್ದೆಯಲ್ಲಾ ಬಸವಣ್ಣಾ
ಜಲದೊಳಗಣ ತಾವರೆಯಂತೆ
ಹೊದ್ದಿಯೂ ಹೊದ್ದದಂತಿರ್ದೆಯಲ್ಲಾ ಬಸವಣ್ಣಾ
ಜಲದಿಂದಲಾದ ಮೌಕ್ತಿಕದಂತೆ.
ಜಲವು ತಾನಾಗದಂತಿರ್ದೆಯಲ್ಲಾ ಬಸವಣ್ಣಾ
ಗುಹೇಶ್ವರಲಿಂಗದ ಆಣತಿವಿಡಿದು
ತನುಗುಣಮತ್ತರಾಗಿದ್ದ ಐಶ್ವರ್ಯಾಂಧಕರ
ಮತವನೇನ ಮಾಡಬಂದೆಯಯ್ಯಾ ಸಂಗನ ಬಸವಣ್ಣಾ? ಬ. ದ. 302

ಕುಂಡಲಿಗನ ಕೀಟ ಮಣ್ಣಿನೊಡನಾಡಿದರೂ ಮೈಯನ್ನು ಮಣ್ಣುಮಯವಾಗಿ ಮಾಡಿಕೊಳ್ಳದೆ, ಕೆಸರಿನಲ್ಲಿದ್ದರೂ ಕಮಲವು ಕೆಸರನ್ನು ಅಂಟಿಸಿಕೊಳ್ಳದಂತೆ ನೀರಿನ ಗರ್ಭದಲ್ಲೇ ಗಟ್ಟಿಗೊಂಡ ಮುತ್ತು ನೀರಿನಲ್ಲಿ ಕರಗದಂತೆ ರಾಜಕೀಯ ಜಗತ್ತಿನಲ್ಲಿದ್ದರೂ ಅದರಿಂದ ಧರ್ಮಪಿತರು ಕಲಂಕಿತರಾಗಲಿಲ್ಲ. ನನ್ನ ಈ ನಿರ್ಧಾರಕ್ಕೆ ಧರ್ಮಪಿತರ ಒಂದು ವಚನ ಪ್ರೇರಣೆ ನೀಡಿತು.

ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ-ಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!
"ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ !
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ॥
ಎಂಬ ಶ್ರುತಿಯ ಬಸವಣ್ಣನೋದುವನು" ಎಂಬರು,

ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ ? ಕೂಡಲಮ್ಮ !
ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ,
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ
ಕುದಿದೆನಾದಡೆ ತಲೆದಂಡ! ಲಿಂಗದೇವಾ. ಬ.ವ.ದೀ – 707

ಧರ್ಮಪಿತರು ಅತ್ಯುನ್ನತ ಹುದ್ದೆಯಲ್ಲಿ – ಪ್ರಧಾನ ದಂಡನಾಯಕರಾಗಿ ಇದ್ದೂ ಧಾರ್ಮಿಕವಾಗಿ ಅತ್ಯುನ್ನತ ಸಾಧನೆ ಮಾಡಿದ್ದಲ್ಲದೆ, ಭಕ್ತರ ಪ್ರಾಣವಾಗಿ ಇದ್ದರು. ಆಗ ವಿರೋಧಿಗಳು ವ್ಯಂಗ್ಯವಾಡುತ್ತಿರಬಹುದು, ''ಏನಪ್ಪಾ ನಿಮ್ಮ ಬಸವಣ್ಣನವರನ್ನು ಗುರು ಎನ್ನುವಿರಿ. ಅವರಿಗೇಕೆ ಬೇಕು ಅಧಿಕಾರದ ಆಸೆ. ಬಿಜ್ಜಳನು ಸ್ವಧರ್ಮಿ ಸಹ ಅಲ್ಲ ಭವಿ. ರಾಜನ ಗದ್ದುಗೆಯ ಕೆಳಗೆ ಪ್ರಧಾನಿಯ ಕುರ್ಚಿ. ಹೀಗೆ ರಾಜನ ಗದ್ದುಗೆಯ ಕೆಳಗೆ ಕುಳಿತು ಊಳಿಗ ಮಾಡಬಹುದೆ?'' ಈ ಪ್ರಶ್ನೆಗೆ, ಸಂದೇಹಕ್ಕೆ ಹೀಗೆ ಬಸವಣ್ಣನವರು ಉತ್ತರಿಸುತ್ತಾರೆ:

''ಬೇಗನೆ ಎದ್ದು ಕಣ್ಣು ತಿಕ್ಕುತ್ತ ನನ್ನ ಒಡಲಿನ ಚಿಂತೆ, ಮಡದಿಯ ಚಿಂತೆ, ಮಕ್ಕಳ ಚಿಂತೆ ಮಾಡುವುದಿಲ್ಲ. ಭವಿ ಅರ್ಥಾತ್ ಲಿಂಗಧಾರಿ ಅಲ್ಲದವನ ಸಂಗವನ್ನು ಮಾಡುವುದಿಲ್ಲ. ಜೊತೆಗೆ ಕೂಡ್ರುವುದಿಲ್ಲ ಮಲಗುವುದಿಲ್ಲ ಒಡನಾಟ ಮಾಡುವುದಿಲ್ಲ ಒಟ್ಟಿಗೆ ಕುಳಿತು ಊಟ ಮಾಡುವುದಿಲ್ಲ'' ಎಂದು ಶಾಸ್ತ್ರಗಳು ಹೇಳುತ್ತವೆ. ''ಆದರೆ ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿತು ಕಾಯಕ ಮಾಡುತ್ತಾರೆ'' ಎಂದು ನನ್ನನ್ನು ಕೆಲವರು ಟೀಕಿಸುತ್ತಾರೆ. ಇವರಿಗೆ ಉತ್ತರವನ್ನು ಕೊಡಲೇ ? ಇಲ್ಲ ಕೊಡುವುದಿಲ್ಲ. ವಿರೋಧಿಗಳಿಗೆ ಉತ್ತರ ಕೊಡುವುದೇಕೆ ? ನಮ್ಮ ಶರಣರಿಗೆ ಮನವರಿಕೆ ಮಾಡಿಕೊಡುತ್ತೇನೆ, ''ರಾಜ ಬಿಜ್ಜಳನ ಅಧೀನದಲ್ಲಿ ದಂಡನಾಯಕರಾಗಿ ಕೆಲಸ ಮಾಡುವುದತ್ತಲಿರಲಿ; ಇಡೀ ಸಮಾಜ ವ್ಯವಸ್ಥೆಯಲ್ಲಿ ಕೆಳಗೆ ಇಡಲಾಗಿರುವ ಹೊಲೆಯರ ಮನೆಯಲ್ಲಿ ಕೈಕೂಲಿ ಮಾಡಲೂ ನಾನು ಹಿಂಜರಿಯುವುದಿಲ್ಲ; ಯಾವ ಕಾಯಕ ಮಾಡಿದರೇನು ನನ್ನ ಧ್ಯೇಯವಾವುದು ; ನಾನು ಗಳಿಸುವ ಹಣ ಹೇಗೆ ಬಳಕೆಯಾಗುತ್ತದೆ ಎಂಬುದು ಮುಖ್ಯ. ನನ್ನ ಗಳಿಕೆಯ ಹಣವು ನನ್ನ ಒಡಲ ಅವಸರಕ್ಕೆ ಸ್ವಂತ ಭೋಗಕ್ಕೆ, ಸ್ವಾರ್ಥಕ್ಕೆ ಬಳಕೆಯಾಗುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತೇನೆ''. ಈ ವಚನ ಬಹುದೊಡ್ಡ ಸಂದೇಶ:

1. ಧಾರ್ಮಿಕ ವ್ಯಕ್ತಿಯಾದ ಮಾತ್ರಕ್ಕೆ ಉದ್ಯೋಗಕ್ಕಾಗಿ ತನ್ನ ಜಾತಿ ಮತ್ತು ಧರ್ಮಗಳವರನ್ನೇ ಹುಡುಕಬೇಕು, ಆಶ್ರಯಿಸಬೇಕು ಎಂದೇನಿಲ್ಲ. ಉದ್ಯೋಗವು ಅನೈತಿಕವೂ, ಹಿಂಸಾತ್ಮಕವೂ ಆಗಿರಬಾರದು.

2. Intention – ಉದ್ದೇಶವೇ ಅತ್ಯಂತ ಮುಖ್ಯವಾದುದು. ಗರ್ಭಿಣಿ ತಾಯಿಯು ತೊಂದರೆಯಲ್ಲಿದ್ದರೆ ವೈದ್ಯರು ತಾಯಿಯ ಜೀವಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಅಥವಾ ಗರ್ಭಿಣಿ



ತಾಯಿ ಅಪಘಾತಕ್ಕೆ ಒಳಗಾಗಿ ಸಾಯುವ ಸ್ಥಿತಿಯಲ್ಲಿದ್ದರೆ ಮಗು ಒಳಗೆ ಜೀವಂತವಿದ್ದರೆ ಅದನ್ನು ಬದುಕಿಸಲು ಯತ್ನಿಸುತ್ತಾರೆ. ಇಬ್ಬರನ್ನು ಉಳಿಸಲು ಯತ್ನಿಸುತ್ತಾರೆ; ಅದು ಸಾಧ್ಯವಿಲ್ಲದಿದ್ದರೆ ಒಬ್ಬರನ್ನಾದರೂ ಉಳಿಸುವ ಪ್ರಯತ್ನ ಮಾಡುತ್ತಾರೆ.

3. ಅಧಿಕಾರವು ಸಹ ಒಂದು ಸಾಧನ. ಒಂದು ಚಾಕು-ವೈದ್ಯನ ಕೈಯಲ್ಲಿ ಇದ್ದರೆ ಅದು ಜೀವವನ್ನುಳಿಸುವ ಶಸ್ತ್ರ ಚಿಕಿತ್ಸೆ ಮಾಡುತ್ತದೆ, ಕಟುಕನ ಕೈಲಿದ್ದರೆ ಜೀವ ಹರಣ ಮಾಡುತ್ತದೆ. ಚಾಕುವಿನಲ್ಲಿ ದೋಷವಿಲ್ಲ, ಹಿಡಿದವನ ಚಟುವಟಿಕೆ ಮೇಲೆ ಅದು ಒಳ್ಳಿತಿಗೆ, ಕೆಡುಕಿಗೆ ಪುಣ್ಯ-ಪಾಪಕ್ಕೆ ಕಾರಣವಾಗುತ್ತದೆ. ಅಧಿಕಾರವು ಒಳ್ಳೆಯ ಜನರ ಕೈಗೆ ಸಿಕ್ಕಾಗ ಅದರಿಂದ ಲೋಕ ಕಲ್ಯಾಣ ಸಾಧ್ಯವಾಗುತ್ತದೆ.

4. ನಿರ್ಲಿಪ್ತತೆಯಿಂದ ನಿಜ ಜ್ಞಾನಿಯಾದವನು ಅಧಿಕಾರವನ್ನು ಹಿಡಿಯಲು ಬರುತ್ತದೆ. ಜನ ಸೇವೆ ಮಾಡಲು ಒಂದು ಒಳ್ಳೆಯ ಅವಕಾಶವನ್ನು ಅಧಿಕಾರವು ಒದಗಿಸುತ್ತದೆ. ಕೆಸರಿನಲ್ಲಿದ್ದೂ ಅಂಟದ ತಾವರೆಯಂತೆ ಬಸವಣ್ಣನವರು ಬದುಕಿ ತೋರಿಸಿದ್ದಾರೆ.

ಇದನ್ನೆಲ್ಲ ಚಿಂತನೆ ಮಾಡಿ ನಾನು ಆಲೋಚಿಸದೆ, ''ನಾನಂತೂ ಕನಸು ಮನಸಿನಲ್ಲೂ ಬಯಸಿರಲಿಲ್ಲ; ನನ್ನ ಯೋಜನೆ, ಯೋಚನೆ ಬೇರೆ ಇತ್ತು. ಇದು ತಾನಾಗಿಯೇ ಬರುತ್ತಿದೆ. ಸೃಷ್ಟಿಕರ್ತ ಲಿಂಗದೇವ, ಧರ್ಮಪಿತ ಬಸವಣ್ಣನವರ ಇಚ್ಛೆಯೇ ಇದ್ದೀತು ನೋಡೋಣ, ಆ ಎರಡು ಶಕ್ತಿಗಳು ಹೇಗೆ ಮುನ್ನಡೆಸುತ್ತವೋ ?!'' ಈ ನಿರ್ಧಾರವನ್ನು ಒಪ್ಪದೆ ಇರುವ ಕೆಲವರು ರಾಜಕಾರಣಿಗಳು, ಅವರ ಜನರು ಹೇಳುವುದುಂಟು:

★ ''ಮಾತಾಜಿ ಬರಬಾರದಿತ್ತು''

ಅಂದರೆ ವಿಚಾರಶೀಲರು, ಪ್ರಜ್ಞಾವಂತರೂ, ರಾಜಕೀಯ ಕ್ಷೇತ್ರಕ್ಕೆ ಬರಬಾರದು ಸ್ವಾರ್ಥಿಗಳು, ಭಂಡರು, ಭ್ರಷ್ಟರೂ ಬಂದು ಇನ್ನಷ್ಟು ಮತ್ತಷ್ಟು ರಾಜಕೀಯ ಕ್ಷೇತ್ರ ಕೊಳಕಾಗುತ್ತಲೇ ಹೋಗಬೇಕೆಂಬ ಅಭಿಪ್ರಾಯ ಅವರದೆ?

★ ''ಗುರುಗಳು ಎಲ್ಲ ಪಕ್ಷದವರಿಗೂ ಗುರುಗಳು; ಅವರು ಒಂದು ಪಕ್ಷವನ್ನು ಬೆಂಬಲಿಸಬಾರದು'' ಎಂದು ಕೆಲವು ಜನರು ಅಭಿಪ್ರಾಯ.

ನೀವು ಇಂದಿನ ರಾಜಕಾರಣವನ್ನು ಗಮನಿಸಿದರೆ ಎಲ್ಲ ಮಠಾಧೀಶರೂ ರಾಜಕೀಯ ಧುರೀಣರ ನಿಕಟ ಸಾಂಗತ್ಯದಲ್ಲಿರುತ್ತಾರೆ. ಕೆಲವು ಸ್ವಾಮಿಗಳ ಕಾರ್ಯಕ್ರಮ ಪಟ್ಟಿ ನೋಡಿದರೆ ಸಚಿವ ಸಂಪುಟ ಸಭೆ ಇಲ್ಲೇ ಇರುವಂತೆ ತೋರುವುದಲ್ಲದೆ ಒಳ್ಳೆಯದು – ಕೆಟ್ಟದ್ದಕ್ಕೆ ಮೂಕ ಸಾಕ್ಷಿಯಾಗಿ ಇರುತ್ತಾರೆ. ಎಂಥಾ ತಪ್ಪನ್ನು ಎಸಗಿದರೂ ರಾಜಕಾರಣಿಗಳಿಗೆ ಬುದ್ಧಿ ಹೇಳುವ ಅಥವಾ ಅನ್ಯಾಯವನ್ನು ಪ್ರತಿಭಟಿಸುವ ಆತ್ಮಬಲವನ್ನೇ ಕಳೆದುಕೊಂಡಿರುತ್ತಾರೆ. ದಿ || ಶರಣ. ನಾಗಪ್ಪನವರ ಅಪಹರಣ ಪ್ರಸಂಗ ತೆಗೆದುಕೊಂಡರೆ ಜನರಿಗೆ ಅರ್ಥವಾಗುವುದು. ಒಬ್ಬ ಮಠಾಧಿಕಾರಿಯಾದರೂ ಸರಕಾರದ ನಿರ್ಲಕ್ಷ್ಯ ಹಾಗೂ ಕ್ರೂರ ವರ್ತನೆಯನ್ನು ಖಂಡಿಸಲಿಲ್ಲ. ಕಡೆಯಲ್ಲಿ ಒಂದು ಸಭೆ ಕರೆದರೂ ಸಮಾಜದ ದೃಷ್ಟಿಯಲ್ಲಿ ಮುಖ ಉಳಿಸಿಕೊಳ್ಳುವುದಕ್ಕಾಗಿ ಕರೆದ ಸಭೆಯಾಗಿ ಬೆಟ್ಟ ಅಗೆದು ಇಲಿಯನ್ನು, ಅದೂ

ಸತ್ತ ಇಲಿಯನ್ನು ತೆಗೆದಂತೆ ವರ್ತಿಸಿದರು. ಇಂಥ ರಣಹೇಡಿತನಕ್ಕಿಂತಲೂ ಯಾವುದಾದರೊಂದು ತತ್ತ್ವ-ಸಿದ್ಧಾಂತ (Ism) ಆಧರಿಸಿ ಬೆಂಬಲಿಸುವುದು, ತೆರೆ ಮರೆಯ ರಾಜಕಾರಣ ಮಾಡುವುದಕ್ಕಿಂತಲೂ "ಇದು ನನ್ನ ನಿಲುವು" ಎಂದು ಹೇಳುವುದೇ ಬಸವ ತತ್ತ್ವ ಎಂದು ನಾನು ಭಾವಿಸುತ್ತೇನೆ.

★ "ಗೆದ್ದರೇನೋ ಸರಿ, ಸೋತರೆ ಧರ್ಮಪೀಠಕ್ಕೆ ಅವಮಾನ" ಎಂದು ಕೆಲವರ ಅನಿಸಿಕೆ.

ಜೀವನದಲ್ಲಿ ಗೆಲುವು-ಸೋಲು ಸ್ವಾಭಾವಿಕ. ಕ್ರೀಡಾಂಗಣಕ್ಕೆ ಇಳಿದ ಆಟಗಾರ ಗೆದ್ದರೆ ಹರ್ಷಿಸಬೇಕು, ಸೋತರೆ ಕುಗ್ಗಬೇಕಾಗಿಲ್ಲ. ಅಕಸ್ಮಾತ್ ಸೋತರೆ ಅವಮಾನ ಎಂದು ಭಾವಿಸುವ ಅಗತ್ಯವಿಲ್ಲ. ಯಾವುದೇ ಆರೋಗ್ಯಕರ ಸ್ಪರ್ಧೆಗೂ ಇಳಿಯದೆ, ಖೋಟಾ ನೋಟು, ಕಳ್ಳ ಸಾಗಾಣಿಕೆ, ಗೂಂಡಾಗಿರಿ, ಆಕ್ರಮಣ ಶೀಲತೆ, ದೌರ್ಜನ್ಯ ಮುಂತಾಗಿ ಮಾಡಲು ವ್ಯಕ್ತಿ ಅವಮಾನ ಎಂದು ಭಾವಿಸಬೇಕೇ ವಿನಾ ಚುನಾವಣೆಯ ಗೆಲುವು ಸೋಲುಗಳಲ್ಲ. ಒಬ್ಬರು ನಮ್ಮ ಅಭಿಮಾನಿಗಳು ಫೋನ್ ಮಾಡಿದ್ದರು. ಅಕಸ್ಮಾತ್ ಸೋತರೆ ನೀವೆಲ್ಲ ಹತಾಶರಾಗಿ ಮಾನಸಿಕವಾಗಿ ಕುಗ್ಗುತ್ತೀರೋ ಎಂಬ ಭಯ ನಮಗೆ ಎಂದರು. ನಾನು ನಕ್ಕೆ: "ನಾನು ಅಷ್ಟು ಅಪರಿಪಕ್ವ ವ್ಯಕ್ತಿಯಲ್ಲ. ಸ್ಥಿತ ಪ್ರಜ್ಞತ್ವ ಅಳವಟ್ಟು ಎಷ್ಟೋ ಕಾಲವಾಯಿತು. ನೀವೇನೂ ಚಿಂತಿಸಬೇಡಿರಿ" ಎಂದೆ.

★ ನೀವು ಕಿಂಗ್ ಮೇಕರ್ ಆಗಬೇಕಿತ್ತು. ಯಾರನ್ನಾದರೂ ಸ್ಪರ್ಧೆಗೆ ನಿಲ್ಲಿಸಿ ಪ್ರಚಾರ ಮಾಡಬಹುದಿತ್ತು. ನೀವೇ ನಿಲ್ಲುವುದು ಬೇಕಿರಲಿಲ್ಲ ಎಂದರು.

ಕನ್ನಡದಲ್ಲಿ ಒಂದು ಗಾದೆ ಇದೆ. "ತಾನು ಮಾಡಿದ್ದು ಉತ್ತಮ, ಮಗ ಮಾಡಿದ್ದು ಮಧ್ಯಮ, ಆಳು ಮಾಡಿದ್ದು ಹಾಳು" ಎಂದು. ಈ ಸದವಕಾಶ ಸಿಕ್ಕರೆ ಕೆಲವೊಂದು ಉತ್ತಮ ಕಾರ್ಯಗಳನ್ನು ಮಾಡಬೇಕೆಂದಿದ್ದೇನೆ. ಮೊದಲೇ ಹೇಳುವುದಿಲ್ಲ. ಆ ಆದರ್ಶಗಳನ್ನು ಬೇರೆಯವರಿಗೆ ಕಲಿಸಿ ಕಳಿಸಲು ಬರುವುದಿಲ್ಲ. ಹಾಗೆ ಕಳಿಸಿದವರು ಇತರರ ಆಸೆ-ಆಮಿಷಗಳಿಗೆ ಬಲಿಯಾದರೆ ಏನು ಮಾಡುವುದು ?

★ ರಾಜಕಾರಣಕ್ಕೆ ಇಳಿದರೆ ಧರ್ಮ ಪ್ರಚಾರಕ್ಕೆ ನಿಮ್ಮ ಲಕ್ಷ್ಯ ಕಡಿಮೆಯಾಗುತ್ತದೆ ಎಂಬ ಭಯ ನಮಗೆ ಎಂದು ಕೆಲವರ ಅನಿಸಿಕೆ.

ಪಾರ್ಲಿಮೆಂಟ್ ಇದ್ದಾಗ ನಾನು ಅದರಲ್ಲಿ (ಉಳಿದ ಅನೇಕರಂತೆ ಗೈರು ಹಾಜರಾಗದೆ) ಭಾಗಿಯಾಗುತ್ತೇನೆ. ಉಳಿದಂತೆ ಅವರುಗಳು ತಮ್ಮ ಇತರ ಉದ್ಯೋಗಗಳಲ್ಲಿ ತೊಡಗುತ್ತಾರೆ. ನಾನು ಆ ಸಮಯವನ್ನು ಧಾರ್ಮಿಕ ಮೌಲ್ಯಗಳ ಪ್ರಸಾರಕ್ಕೆ ವಿನಿಯೋಗಿಸುತ್ತೇನೆ. ನಮ್ಮ ಮಠದ ಜಂಗಮ ಮೂರ್ತಿಗಳಂತೂ ಸದಾ ಧರ್ಮ ಪ್ರಚಾರದಲ್ಲೇ ನಿರತರಾಗಿರುವುದು ಎಲ್ಲರಿಗೂ ತಿಳಿದ ಸಂಗತಿ.

ಮೊದಲಿನಿಂದಲೂ ನನಗೆ ಏನಾದರೂ ವ್ಯಾಪಕವಾಗಿ ಜನತೆಯ ಸೇವೆ ಮಾಡುವ ಹಂಬಲವಿತ್ತು. ಎಲ್ಲರಿಗೂ ತಿಳಿದಿರುವಂತೆ ಬಡಬಗ್ಗರು, ದೀನರು ಇವರಿಗೆ ಕೈಲಾದ ಸಹಾಯ ಮಾಡುತ್ತಿದ್ದೇವೆ. ಬಡವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತೇವೆ. ಆದರೆ ಎಲ್ಲವೂ ನಮ್ಮ ಆರ್ಥಿಕ ಮಿತಿ ಅವಲಂಬಿಸಿ, ಅತ್ಯಂತ ಸೀಮಿತವಾಗಿ ಹೆಚ್ಚಿನ ಸಂಪನ್ಮೂಲ ದೊರೆತರೆ ಹೆಚ್ಚಿನ ಪ್ರಮಾಣದಲ್ಲಿ ಆವಶ್ಯಕತೆ ಇರುವವರಿಗೆ ಸಹಾಯ ಹಸ್ತ ಚಾಚಬಹುದಲ್ಲವೆ? ಎಂಬ ಹಂಬಲ ನನ್ನದು.



## ಕನ್ನಡ ನಾಡು ಪಾರ್ಟಿಗೆ ಏಕೆ ಬೆಂಬಲ ?

- ಮಾತಾಜಿ

ಶುದ್ಧ ದೇಶೀಯ ಸೊಗಡಿನ ಪ್ರಾದೇಶಿಕ ಪಕ್ಷ ನಾನು ಎಷ್ಟೋ ವರ್ಷಗಳಿಂದ ಅಂತರಂಗದಲ್ಲೇ ಚಿಂತಿಸುತ್ತಿದ್ದ ಆಲೋಚನೆಗಳಿಗೆ ಮೂರ್ತ ಸ್ವರೂಪ ಕೊಡುವಂತೆ ಕಂಡಿತು. ಅನೇಕ ರಾಜಕಾರಣಿಗಳು ವಿವಿಧ ಮೂಲಗಳಿಂದ ವಿಪುಲ ಹಣ ಸಂಗ್ರಹಿಸಿ ಕಟ್ಟಿರುವ ಬಲಿಷ್ಠ ಪಕ್ಷಗಳಿಗಿಂತಲೂ, ಕಾಯಕ ಯೋಗಿಗಳಾದ ಶ್ರೀ ವಿಜಯ ಸಂಕೇಶ್ವರರು ಲಾರಿ, ಬಸ್ಸು, ಪತ್ರಿಕೆ ಮುಂತಾದ ಶುದ್ಧ ಉದ್ಯೋಗಗಳಿಂದ ಇನ್ನೊಬ್ಬರನ್ನು ಬದುಕಿಸಿ, ತಾವು ಬೆಳೆದು ನಿಂತುದು ಬಸವ ಸಿದ್ಧಾಂತಕ್ಕೆ ಹತ್ತಿರವಾಗಿರುವಂತೆ ಕಂಡಿತು. ಸಾರಾಯಿ ದಂಧೆಯಿಂದ ಬೆಳೆಯಬಹುದು; ಎಷ್ಟೋ ಸಂಸಾರಗಳನ್ನು ನಾಶ ಮಾಡಿ. ಅದು ಕಾಯಕವಲ್ಲ. ಉದ್ಯೋಗಶೀಲತೆಗೆ ಪ್ರಾಧಾನ್ಯ ನೀಡಿ ಬೆಳೆದಿರುವ ಶ್ರೀ ವಿಜಯ ಸಂಕೇಶ್ವರರ ದೂರ ದೃಷ್ಟಿ ಯೋಜನಾ ಚತುರತೆ, ಶ್ರಮ ಜೀವನದ ಮೌಲ್ಯ ನಮ್ಮ ಅಂತರಾತ್ಮ, ಬುದ್ಧಿ ಚಿಂತನೆಯನ್ನು ಸಮಾಧಾನ ಪಡಿಸಿತು. ಅದಕ್ಕಾಗಿ ಮೆಚ್ಚುಗೆ ಸಲ್ಲಿಸಿ ಒಳ್ಳೆಯದಕ್ಕೆ ಬೆಂಬಲ ನೀಡಬೇಕೆಂಬ ಗುಣಗ್ರಾಹಕತನದಿಂದ ಇಟ್ಟ ಸಣ್ಣ ಹೆಜ್ಜೆ ನೇರವಾಗಿ ರಾಜಕೀಯಕ್ಕೆ ಕರೆ ತಂದುದು ನನಗೆ ಆಶ್ಚರ್ಯ ತಂದಿದೆ. ಬಾವನ್ನದ ವೃಕ್ಷ (ಶ್ರೀಗಂಧದ ಗಿಡ) ಅಡವಿಯೊಳಗಿದ್ದರೇನು ಊರೊಳಗಿದ್ದರೇನು ಪರಿಮಳ ಒಂದೇ ಎಂದು ಧರ್ಮಪಿತರು ಹೇಳುವಂತೆ ನನ್ನ ಬದುಕಿನ ಧ್ಯೇಯ ಸಮಾಜಸೇವೆ , ದೇಶ ಸೇವೆ, ಕಲ್ಯಾಣರಾಜ್ಯ ನಿರ್ಮಾಣ. ಈ ಕಾರ್ಯದಲ್ಲಿ ನೀವೂ ಕೈಜೋಡಿಸಲು ಬನ್ನಿ.

## ಚುನಾವಣಾ ಪ್ರಚಾರಕ್ಕೆ ಆಗಮಿಸಲು ಕಾರ್ಯಕರ್ತರಿಗೆ ಆಹ್ವಾನ / ಸೂಚನೆ

ಶರಣ ಬಂಧುಗಳೇ,

ಅನಿರೀಕ್ಷಿತವಾದ ಒಂದು ಅವಕಾಶ-ಚುನಾವಣೆಯಲ್ಲಿ ಸ್ಪರ್ಧಿಸಲು ಒದಗಿ ಬಂದಿದೆ. ಹಣದ ದೃಷ್ಟಿಯಿಂದ ನಾವು ಎಷ್ಟು ಅಶಕ್ತರಿದ್ದೇವೆ ಎಂಬುದು ತಮಗೆಲ್ಲ ತಿಳಿದಿದೆ. ಆದ್ದರಿಂದ ಪ್ರಚಾರ ಕಾರ್ಯದಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಂಡು, ಕನ್ನಡ ನಾಡು ಪಾರ್ಟಿಯ ಧ್ಯೇಯೋದ್ದೇಶ, ನಮ್ಮ ಆದರ್ಶ ನಿಲುವು, ಧ್ಯೇಯೋದ್ದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ನಿಷ್ಠೆಯಿಂದ ಮಾಡಬೇಕಾಗಿದೆ. ಆದ್ದರಿಂದ ನಮ್ಮಿಂದ ಒಂದು ಉತ್ತಮ ದೇಶ ಸೇವೆಯ ಕೆಲಸ ಆಗಬೇಕು, ಅಸಂಖ್ಯಾತ ದೀನದಲಿತ ದುರ್ಬಲರಿಗೆ ನೆರವಾಗಬೇಕು ಎಂಬ ಚಿಂತನೆ ಇರುವವರೆಲ್ಲರೂ ಸ್ವಯಂ ಸೇವಕರಾಗಿ ಭಾಗವಹಿಸಬೇಕು. ಹೊದೆದುಕೊಳ್ಳಲು ಒಂದು ಚಾದರ, ಉಡುವ ಬಟ್ಟೆಗಳನ್ನು ತೆಗೆದುಕೊಂಡು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠ, ಉಳವಿ ರಸ್ತೆ, ರೈಲ್ವೆ ಗೇಟ್ ಬಳಿ, ಧಾರವಾಡ-580003 ಇಲ್ಲಿಗೆ ವಿವಿಧ ಊರುಗಳ ಶರಣ-ಶರಣೆಯರು ಆಗಮಿಸಬೇಕು. ಎಷ್ಟು ಬೇಗನೆ ಸಾಧ್ಯವೋ ಸಮಯಾವಕಾಶ ಮಾಡಿಕೊಂಡು ಬರಬೇಕು. ಇಲ್ಲಿ ಊಟ-ವಸತಿಗಳ ವ್ಯವಸ್ಥೆ ಮಾಡಲಾಗುವುದು. ಗಾಡಿಗಳ ವ್ಯವಸ್ಥೆ ಮಾಡಿ ಪ್ರಚಾರ ಕಾರ್ಯಕ್ಕೆ ವಿವಿಧ ಕ್ಷೇತ್ರಗಳಿಗೆ ಕಳಿಸಿಕೊಡಲಾಗುವುದು. ಆದ್ದರಿಂದ ಎಲ್ಲ ಕಡೆಯಿಂದ ಸ್ವಯಂಸೇವಕರು ಧಾರವಾಡಕ್ಕೆ ಬರಬೇಕೆಂದು ಸೂಚಿಸುತ್ತೇವೆ.

ಶುಭಹಾರೈಕೆಗಳೊಡನೆ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666



ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ಕಾಯಕ - ದಿನದ ಅಂಗವಾಗಿ ಮೂರನೆಯ

# ಕಲ್ಯಾಣ ಪರ್ವ

**2004 ರ ಮೇ 1, 2 ಮತ್ತು 3 ರಂದು**

ವಚನ ಸಾಹಿತ್ಯ

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಸಲಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 17ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy Land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ" ವನ್ನು ನಡೆಸಲಾಗುತ್ತಿದೆ. ಮೂರನೆಯ ಕಲ್ಯಾಣ



ಪರ್ವವನ್ನು 2004ನೆಯ ಇಸವಿಯ ಮೇ 1,2 ಮತ್ತು 3 ರಂದು ಬಸವ ಮಹಾಮನೆಯ ಆವರಣದಲ್ಲಿ ಸಂಯೋಜಿಸಲಾಗಿದೆ.

## ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮಾತ್ರವಲ್ಲ; ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare State) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು." ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 30ರ ರಾತ್ರಿಯಿಂದ ಮೇ 4ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

| | | | |
|---|---|---|---|
| 1. ಮಹಾಪೋಷಕರು | : 5000 ರೂ. ಮತ್ತು ಮೇಲೆ | 4. ಹಿತೈಷಿಗಳು | : 500 ರೂ |
| 2. ಪೋಷಕರು | : 2000 ರೂ. ಮತ್ತು ಮೇಲೆ | 5. ಸ್ವಾಗತ ಸಮಿತಿ ಸದಸ್ಯತ್ವ | : 250 ರೂ |
| 3. ದಾನಿಗಳು | : 1000 ರೂ. ಮತ್ತು ಮೇಲೆ | 6. ಪ್ರತಿನಿಧಿ ಶುಲ್ಕ | : 100 ರೂ. |

**ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಮತ್ತು ದವಸ, ಧಾನ್ಯಗಳನ್ನು ತಮ್ಮ ಶಕ್ತ್ಯಾನುಸಾರ ಕೊಡಬಹುದು**

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸಿ ಕೊಡುವವರಿಗೂ ಅವಕಾಶವಿದೆ.

## ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿಮೂರುವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ

ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ.ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

**1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ. 2. ನಿತ್ಯ ಪೂಜಾ ನಿಧಿ :** ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಅಂಚೆಯಲ್ಲಿ ಕಳಿಸಲಾಗುವುದು. 600 ರೂ. **3. ದಾಸೋಹ ನಿಧಿ :** ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು ಮತ್ತು ಪ್ರಸಾದವನ್ನು ದಾನಿಗಳಿಗೆ ಅಂಚೆಯಲ್ಲಿ ಕಳಿಸುವುದು. 1200 ರೂ. **4. ಬಸವಾಲಯ ನಿರ್ಮಾಣ :** ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು. **5. ಬಸವ ಮಂಟಪ ನಿರ್ಮಾಣ :** ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ "ಬಸವ ಮಂಟಪ" ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು. **6. ಬಸವೇಶ್ವರ ಸಮುದಾಯ ಭವನ :** ಯಾತ್ರಿಕರಿಗೆ ಉಚಿತವಾಗಿ ತಂಗಲು ವಿಶಾಲವಾದ ಹಾಲ್ ಮತ್ತು ಕೋಣೆಗಳು. **7. ಶರಣ ಧಾಮ :** ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ.ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು. **8. 63 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ :** ಅಂದಾಜು ವೆಚ್ಚ 1 ಕೋಟಿ ರೂಪಾಯಿಗಳು ರೂ. 11,000 ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನಲ್ಲಿ ಬರೆಸಲಾಗುವುದು. ರೂ. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. **9.ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.**

ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಜನರ ನೆರವು ಸಿಕ್ಕಿದಂತೆ ಒಂದೊಂದಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್ ಕಟ್ಟಲು, ಕಾರ್ಯಾಲಯ ಕಟ್ಟಡ ನಿರ್ಮಾಣ ಮಾಡಲು, ಬಸವಾಲಯ ಕಟ್ಟಲು ಆರಂಭಿಸಲಾಗಿದೆ.ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

**ಸಂಪರ್ಕಿಸುವ ವಿಳಾಸಗಳು**

**ಬೆಂಗಳೂರು ವಿಳಾಸ:**
**ಬಸವ ಧರ್ಮ ಪೀಠ (ರಿ.)**
**ಬಸವ ಮಂಟಪ, 2035, 2ನೇ ಬ್ಲಾಕ್**
**ರಾಜಾಜಿನಗರ, ಬೆಂಗಳೂರು-560010**
**☎: 080-23325335/23322790**

**ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ**
**ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)**
**ಬಸವ ಮಹಾಮನೆ, ಬಸವ ಕಲ್ಯಾಣ-585 327**
**ತಾ-ಬಸವಕಲ್ಯಾಣ, ಜಿ-ಬೀದರ್**
**☎: 08481-251921/252856**



## ಚುನಾವಣಾ ಪ್ರಚಾರ ಕಾರ್ಯಕ್ಕೆ ಆಗಮಿಸಲು ಸಹೃದಯರಿಗೆ ಕರೆ

ಶರಣ ಬಂಧುಗಳೇ,

ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟುದೇಕೆ ? ಎಂಬ ಲೇಖನವನ್ನು ತಾವೆಲ್ಲರೂ ಓದಿ, ನಂತರ ಈ ಕರೆಗೆ ಸ್ಪಂದಿಸಬೇಕೆಂದು ಸೂಚಿಸುತ್ತೇನೆ. ಧಾರವಾಡ ಉತ್ತರ ಲೋಕ ಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದು ಈಗಾಗಲೇ ನನ್ನ ಹೆಸರು ದಿ. 29-2-2004ರ ವಾರ್ತಾ ಪತ್ರಿಕೆಗಳಲ್ಲಿ ಪ್ರಚುರಗೊಂಡಿದೆ. ಇದು 8 ವಿಧಾನ ಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. 1. ಧಾರವಾಡ ನಗರ, 2. ಧಾರವಾಡ ಗ್ರಾಮಾಂತರ, 3. ನರಗುಂದ, 4. ಕಲಘಟಗಿ, 5. ಹುಬ್ಬಳ್ಳಿ ನಗರ, 6. ಹುಬ್ಬಳ್ಳಿ ಗ್ರಾಮೀಣ, 7. ನವಲಗುಂದ, 8. ಗದಗ. ಬಹಳ ವಿಸ್ತಾರವಾದ ಮತ್ತು ಪ್ರಜ್ಞಾವಂತ ಮತದಾರರ ಕ್ಷೇತ್ರ. ಕೆಲವು ಧಾರ್ಮಿಕ ಜನರು ಬಹಳ ಸೀಮಿತವಾದ ವಿಚಾರಧಾರೆ ಹೊಂದಿರುತ್ತಾರೆ. ಧರ್ಮಗುರುಗಳು ರಾಜಕಾರಣ ಪ್ರವೇಶಿಸಬಾರದು; ರಾಜಕೀಯ ಕ್ಷೇತ್ರ ಬಹಳ ಕೊಳಕು ಇತ್ಯಾದಿ. ಇಂಥವರನ್ನು ಭೇಟಿಯಾಗಿ ಅವರನ್ನು ಬಹಿರಂಗದ ವಾಸ್ತವ ಜಗತ್ತಿಗೆ ಕರೆತರಬೇಕಾದರೆ ಮಾತನಾಡಿ ಮನ ಒಲಿಸಬೇಕು. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಧಾರವಾಡಕ್ಕೆ ಬಂದು ಮನೆ ಮನೆಗೆ ತಿರುಗಿ ಚುನಾವಣಾ ಪ್ರಚಾರ ಮಾಡಿರಿ.

ಕನ್ನಡ ನಾಡು ಪಕ್ಷಕ್ಕೆ ಸದಸ್ಯತ್ವ ಪಡೆಯಿರಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ಮಾಡಿರಿ. ಚುನಾವಣೆಯ ಖರ್ಚು ವೆಚ್ಚಗಳಿಗೆ, ದೇಣಿಗೆಯನ್ನು ಸಹ ಸಂಗ್ರಹಿಸಬಹುದು. ಸ್ವತಃ ಬಂದು ಕಾರ್ಯಕ್ಷೇತ್ರದಲ್ಲಿ ಅಡ್ಡಾಡಿ ಕೆಲಸ ಮಾಡಲು ವಯಸ್ಸು, ಅನಾರೋಗ್ಯ , ಸರಕಾರಿ ನೌಕರಿಯ ಕಾರಣದಿಂದ ಆಗದೆ ಇದ್ದರೆ ಪತ್ರ ಬರೆದು ನಮಗೆ ತಮ್ಮ ಮತ ನೀಡಲು ನಿಮ್ಮ ಬಂಧು, ಮಿತ್ರರು, ಪರಿಚಿತರಿಗೆ ತಿಳಿಸಿರಿ.

- ಮಾತಾಜಿ

---

## ಬಸವ ತತ್ತ್ವ ತರಬೇತಿ ಕಮ್ಮಟ

## ಅಕ್ಟೋಬರ್ 2 ರಿಂದ ಧಾರವಾಡದಲ್ಲಿ

ಶರಣ ಬಂಧುಗಳೇ,

ಚುನಾವಣೆ ನಿಮಿತ್ತ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಮುಂದೂಡಲಾಗಿರುವುದರಿಂದ ಅನೇಕ ಶರಣರಿಗೆ ನಿರಾಶೆಯಾಗುವುದು ಸ್ವಾಭಾವಿಕ. ಅದಕ್ಕಾಗಿ ಅಕ್ಟೋಬರ್ 2 ರಿಂದ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಏರ್ಪಡಿಸಲಾಗುವುದು. ಭಕ್ತಿ ಪಕ್ಷ ಸಮ್ಮೇಳನ ದಿ. 9-10-2004 ಮತ್ತು ರಂದು ಸಮಾರೋಪ ಸಮಾರಂಭವನ್ನು ದಿ. 10-10-2004 ರಂದು ಏರ್ಪಡಿಸಲಾಗುವುದು.

- ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು

## ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

| | |
|---|---|
| 1. ಪ್ರಕಟಣೆಯ ಸ್ಥಳ | ಬೆಂಗಳೂರು |
| 2. ಪ್ರಕಟಣೆಯ ನಿಯತಕಾಲಿಕತೆ | ಮಾಸಿಕ |
| 3. ಮುದ್ರಕರ ಹೆಸರು | ಸೋದರಿ ಕಸ್ತೂರಿ |
| ಭಾರತದ ಪ್ರಜೆಯೆ ? | ಹೌದು |
| ವಿಳಾಸ | ಪ್ರಭುದೇವ ಮುದ್ರಣಾಲಯ<br>ಬಸವಗಂಗೋತ್ರಿ, ಕುಂಬಳಗೋಡು |
| 4. ಪ್ರಕಾಶಕರ ಹೆಸರು | ಬಿ. ಶಂಭುಲಿಂಗಯ್ಯ |
| ಭಾರತದ ಪ್ರಜೆಯೆ ? | ಹೌದು |
| ವಿಳಾಸ | ಕಲ್ಯಾಣ ಕಿರಣ ಕಾರ್ಯಾಲಯ<br>ಬಸವ ಮಂಟಪ, ರಾಜಾಜಿನಗರ<br>ಬೆಂಗಳೂರು-560010 |
| 5. ಸಂಪಾದಕರ ಹೆಸರು | ಬಿ. ಶಂಭುಲಿಂಗಯ್ಯ |
| ಭಾರತದ ಪ್ರಜೆಯೆ ? | ಹೌದು |
| ವಿಳಾಸ | ಬಸವ ಮಂಟಪ<br>ರಾಜಾಜಿನಗರ, ಬೆಂಗಳೂರು-560010 |
| 6. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ.1. ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ | ವಿಶ್ವಕಲ್ಯಾಣ ಮಿಷನ್<br>(ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)<br>ಬಸವ ಮಂಟಪ,<br>ರಾಜಾಜಿನಗರ, ಬೆಂಗಳೂರು-560010 |

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ. 1-3-2004

ಪ್ರಕಾಶಕ
ಬಿ. ಶಂಭುಲಿಂಗಯ್ಯ
ಬೆಂಗಳೂರು-10



## ಸಂಘಟನೆ

– ಮಾತೆ ಕಸ್ತೂರಿದೇವಿ

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು
ಸಗಣಕ್ಕೆ ಸಾಸಿರಹುಳು ಹಟ್ಟವೇ ದೇವಾ ?
ಕಾಡಮೃಗವೊಂದಾಗಿರಲಾರವೇ ದೇವಾ ?
ಊರಮೃಗವೊಂದಾಗಿರಲಾರವೇ ದೇವಾ ?
ನಮ್ಮ ಲಿಂಗದೇವನ ಶರಣರಿಲ್ಲದ ಊರು ದೇಶ
ವನವಾಸ, ನರವಿಂಧ್ಯ ಕಾಣಿರಣ್ಣಾ – ಬ.ವ.ದೀ – 158

ಧರ್ಮಪಿತರ ಈ ಜನಪ್ರಿಯ ವಚನ ಏನು ಹೇಳುತ್ತಿದೆ? ಸಮಾಜ ಚಿಂತಕರು, ಸಂಘಟಕರೂ, ಸುಧಾರಕರೂ ಆದ ಬಸವಣ್ಣನವರ ಈ ವಚನ ಸಂಖ್ಯಾಬಲವನ್ನು ಅವಹೇಳನ, ತಿರಸ್ಕಾರ ಮಾಡುವ ಮೂಲಕ ಉದಾತ್ತವಾದ ತತ್ತ್ವವೊಂದನ್ನು ಪ್ರತಿಪಾದಿಸುತ್ತಿದೆ. ಈ ವಚನ ಸಂಘಜೀವನಕ್ಕೆ ಹೆಚ್ಚಿನ ಒತ್ತು ಕೊಟ್ಟರೂ, ಎಲ್ಲಾ ರೀತಿಯ ಸಂಘಟನೆಗಳನ್ನು ಒಪ್ಪುತ್ತಿಲ್ಲ. ದುರ್ಬಲ ಜನಾಂಗದ ನಿರ್ಮಾಪಕರು, ಸ್ವಾರ್ಥಿಗಳಾಗಿ ಕೀರ್ತಿಶನಿಯ ಬೆನ್ನು ಹತ್ತಿ ಜಡ ಸಮಾಜವನ್ನು ಸೃಷ್ಟಿಸುತ್ತಿರುವ ಜನನಾಯಕರನ್ನು, ಸರ್ವಶಕ್ತನಾದ ಪರಮಾತ್ಮನನ್ನು ಸಂಪೂರ್ಣವಾಗಿ ಮರೆಸಿ, ತಮ್ಮನ್ನು ಮಾತ್ರ ವೈಭವೀಕರಿಸಿ ಮೆರೆಸಿಕೊಳ್ಳುತ್ತಾ ಮೂಢ, ಮುಗ್ಧ ಜನರ ಗುಂಪುಗಳನ್ನು ಆಕರ್ಷಿಸುವತ್ತ ನಿರತರಾಗಿರುವ ಬುದ್ಧಿಜೀವಿಗಳನ್ನು ಹಿಡಿದು ಕೇಳುತ್ತಿದೆ.

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು ಸಗಣಕ್ಕೆ ಸಾಸಿರಹುಳು ಹುಟ್ಟವೆ ದೇವಾ – ಎಂದು ಜರಿಯುತ್ತಾ ಮಾನವ ಸಮಾಜದಲ್ಲಿರುವ ಒಂದು ದೊಡ್ಡ ಲೋಪವನ್ನು ಎತ್ತಿ ತೋರಿಸುತ್ತಿದೆ. "ಮಾನವ ಜನ್ಮ ದೊಡ್ಡದು; ದುರ್ಲಭ" ಎಂಬ ಲೋಕೋಕ್ತಿ ಇದ್ದರೂ, ಮಾನವನಾಗಿ ಜನ್ಮವೆತ್ತಿದ ಮಾತ್ರಕ್ಕೆ ಹೆಚ್ಚಿನ ಅಂಕಗಳನ್ನು ಕೊಡಲು ಇದಕ್ಕೆ ಇಷ್ಟವಿಲ್ಲ. ಏಕೆಂದರೆ, ಮಾನವನು ತನ್ನ ಮರೆವನ್ನು ಕಳೆಯಲು ಧರ್ಮ ಮತ್ತು ಆಧ್ಯಾತ್ಮ ಸಂಸ್ಕಾರಗಳನ್ನು ಪಡೆದು ಅರಿವಿನ ಜನ್ಮಕ್ಕೆ ಬಂದು ಶರಣನಾಗಿ ಸತ್ಸಂಗದಲ್ಲಿರಬೇಕು ಎಂದು ಬೋಧಿಸುತ್ತದೆ. ಜಗತ್ತಿನಲ್ಲಿ ಏನೆಲ್ಲಾ ಚಿಂತೆಗಳಲ್ಲಿ ಅಂದರೆ, ಹೊಟ್ಟೆ-ಬಟ್ಟೆ ಆಸ್ತಿ-ಪಾಸ್ತಿ, ಅಂತಸ್ತು-ಅಧಿಕಾರ, ನೌಕರಿ, ವಿದ್ಯೆ, ಮದುವೆ ಮುಂತಾದ ಲೌಕಿಕ ಚಿಂತೆಗಳಲ್ಲಿ ಮುಳುಗಿದ ಜನರನ್ನು ಕಾಣುತ್ತೇವೆ.

ಆದರೆ ನಿರಾಕಾರನೂ, ಮಹಾದಾತನೂ ಆದ ಪರಮಾತ್ಮನೊಬ್ಬನಿದ್ದಾನೆ ಎಂಬ ದಾರ್ಶನಿಕ ಸತ್ಯವನ್ನು ಮನಗಂಡು ದೇವಚಿಂತೆಯಲ್ಲಿರುವವರು ಸಿಗುವುದು ದುರ್ಲಭ. ಆದರಂತೆ ದೇವರ ಬಗ್ಗೆ ಅರಿವು, ಜ್ಞಾನವೊಂದನ್ನು ಬಿಟ್ಟು ಉಳಿದ ಎಲ್ಲಾ ವಿಷಯಗಳ ಬಗ್ಗೆ ಜ್ಞಾನಿಗಳಾದವರನ್ನು, ಬುದ್ಧಿಜೀವಿಗಳನ್ನು, ಪಂಡಿತರನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣಬಹುದು. ಆದರೆ ಅನುಭವ ವೇದ್ಯನಾದ, ಸರ್ವಕಾರಣಕರ್ತನಾದ ಪರಮಾತ್ಮನ ಬಗ್ಗೆ ತಿಳಿಯಬೇಕೆಂಬ ಕುತೂಹಲವಾಗಲಿ, ಹಂಬಲವಾಗಲಿ ಬಹಳಷ್ಟು ಜನರಿಗೆ ಇರುವುದಿಲ್ಲ. ಅಂಥವರನ್ನು ಶರಣರು ತಮ್ಮ ವಚನಗಳಲ್ಲಿ ಕ್ಷುಲ್ಲಕ, ಕ್ಷುದ್ರ ಪ್ರಾಣಿಗಳಿಗಿಂತಲೂ ಕಡೆ ಎಂದು ಅಲಕ್ಷಿಸಿದ್ದಾರೆ. ಅಂಥ ಕೆಲವು ಮಾತುಗಳನ್ನು ಈಗ ನೋಡೋಣ:

★ ಲಿಂಗದೇವಾ ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನ ನೋಡಾ

- ಧರ್ಮಪಿತ ಬಸವಣ್ಣನವರು.

★ ಶಿವಚಿಂತೆ ಶಿವಜ್ಞಾನಿಗಳ ಕಂಡಡೆ ಆಳವಾಡಿ ನುಡಿವರು
ನಮ್ಮ ಗುಹೇಶ್ವರನರಿಯದ ಕರ್ಮಿಗಳು

-ಅಲ್ಲಮಪ್ರಭು ದೇವರು

★ ಮಾನವನಾಗಿ ಹುಟ್ಟಿದ ಬಳಿಕ ಶಿವಜ್ಞಾನವನರಿಯದಿದ್ದಡೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕಲಿದೇವರದೇವಾ

-ಮಡಿವಾಳ ಮಾಚಿದೇವರು

★ ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ

-ಅಕ್ಕಮಹಾದೇವಿ

ಹೀಗೆ ಧರ್ಮ ಮತ್ತು ಆಧ್ಯಾತ್ಮದ ತಳಹದಿಯ ಮೇಲೆ ಒಂದು ನಿರ್ದಿಷ್ಟವಾದ ತಾತ್ವಿಕಬಲದೊಂದಿಗೆ, ಸುಸಂಸ್ಕೃತವಾಗಿ ಸಂಘಟನೆಯಾಗದ ಜನರ ಸಮೂಹವನ್ನು ಧರ್ಮಪಿತರು ಯಾವುದಕ್ಕೆ ಹೋಲಿಸಿದ್ದಾರೆ ?!

ಸಗಣಕ್ಕೆ ಸಾಸಿರ ಹುಳು ಹುಟ್ಟವೇ ದೇವಾ ?
ಕಾಡುಮೃಗವೊಂದಾಗಿರಲಾರವೇ ದೇವಾ ?
ಊರು ಮೃಗವೊಂದಾಗಿರಲಾರವೇ ದೇವಾ ?

ಇಲ್ಲಿ ಸಗಣಿಯ ಹುಳು, ಕಾಡುಮೃಗ, ಊರಮೃಗ ಎಂದೆಲ್ಲಾ ಕರೆದಿರುವುದನ್ನು ನೋಡಿದಾಗ ನಾಚಿಕೆಯೆನಿಸುತ್ತಿದೆ. ಏಕೆಂದರೆ ನಾವು ಶಾಲೆಗೆ ಹೋಗುತ್ತಿದ್ದಾಗ ವಿಶೇಷ ದಿನಗಳಾದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವಗಳಲ್ಲಿ ಮೆರವಣಿಗೆ ಹೋಗುತ್ತಿದ್ದೆವು. ಆಗ ನಮ್ಮಿಂದ "ಒಗ್ಗಟ್ಟಿನಲ್ಲಿ ಬಲವಿದೆ ; ಏನೇ ಬರಲಿ ಒಗ್ಗಟ್ಟಿರಲಿ" ಎಂದು ಘೋಷಣೆಗಳನ್ನು ಕೂಗಿಸುತ್ತಿದ್ದರು. ನಾವೂ ಅಷ್ಟೇ ಹುರುಪಿನಿಂದ ಜೋರಾಗಿ ಕೂಗುತ್ತಿದ್ದೆವು. ಆದರೆ "ಒಗ್ಗಟ್ಟು ಎಂದರೇನು ? ಎಂಥಾ ಒಗ್ಗಟ್ಟಿನಲ್ಲಿ ಬಲವಿರುತ್ತದೆ ? ಯಾವು ರೀತಿಯ ಒಗ್ಗಟ್ಟಿನಿಂದ ಕಾರ್ಯ ಸಾಧನೆಯಾಗುತ್ತದೆ ?" ಎಂಬುದನ್ನು ಇದುವರೆಗೂ ನಮಗೆ ಯಾರೂ ತಿಳಿಸಿಕೊಟ್ಟಿರಲಿಲ್ಲ. ಸಂಘಟನೆಯಲ್ಲಿಯೂ ನಿರ್ಬಲ, ದುರ್ಬಲ ಮತ್ತು ಸಬಲವಾದ ಒಗ್ಗಟ್ಟು ಇರುತ್ತವೆ ಎಂಬ ಅರಿವಾದದ್ದು, ಅನುಭವಕ್ಕೆ ಬಂದದ್ದು ಬಸವ ಧರ್ಮಕ್ಕೆ ಬಂದ ಮೇಲೆಯೆ. ಅದನ್ನೇ ಧರ್ಮಪಿತರು ಇಲ್ಲಿ ಹೇಳಿರುವುದು.

ಈಗ ಸಂಘಟನೆಯ ಬಗ್ಗೆ ಕೆಲವು ಮಹನೀಯರ ಅನುಭವಾಮೃತವನ್ನು ಸವಿದು ಮುಂದೆ ಸಾಗೋಣ. ರಾಷ್ಟ್ರೀಯ ಬಸವದಳದಂತಹ ಸತ್ವಯುತವಾದ ಯಶಸ್ವಿ ಸಂಘಟನೆಗೆ ಕಾರಣಕರ್ತರಾದ ಲಿಂಗೈಕ್ಯ ಪೂಜ್ಯ ಶ್ರೀಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರ ಕಳಕಳಿಯ ಮಾತುಗಳನ್ನು ಸ್ಮರಿಸೋಣ. "ಇಂದು ದೇಶದ ತುಂಬೆಲ್ಲ ವಿಚಿತ್ರವಾದ ವಾತಾವರಣ ಮೂಡುತ್ತಿದೆ. ತತ್ವನಿಷ್ಠೆ ಸರಳತೆ, ದೇಶಪ್ರೇಮ, ಸದಾಚಾರ ಮುಂತಾದ ಮೌಲ್ಯಗಳು ಸಮಾಜದಿಂದ ಕಣ್ಮರೆಯಾಗುತ್ತಿವೆ. ರಾಜಕಾರಣಿಗಳು ತಮ್ಮ ಪ್ರಭಾವ ಬೆಳಸಿಕೊಳ್ಳಲು ಪರಸ್ಪರರನ್ನು



ಎತ್ತಿಕಟ್ಟುತ್ತಿದ್ದಾರೆ. ಅಧಿಕಾರ ಶಾಹಿ ಸಂಪತ್ತನ್ನು ಕೂಡಿಹಾಕಿಕೊಂಡು ತಮ್ಮ ಮಡದಿ ಮಕ್ಕಳ ಹಿತಾಸಕ್ತಿ ಕಾಪಾಡಿಕೊಳ್ಳುವುದರಲ್ಲಿ ನಿರತವಾಗಿವೆ. ದಿನದಿನಕ್ಕೂ ದುರ್ಭರವಾಗುತ್ತಿರುವ ಜೀವನ ಶ್ರೀಸಾಮಾನ್ಯನಿಗೆ ದೊಡ್ಡ ಹೊರೆಯಾಗುತ್ತಿದೆ. ಬಹುಪಾಲು ಜನ ಸ್ವಸುಖಾಸಕ್ತರಾಗಿ ಸಮಷ್ಟಿಯ ಹಿತಚಿಂತನೆಯತ್ತ ಗಮನ ಹರಿಸದವರಾಗಿದ್ದಾರೆ. ಇದು ಸೃಷ್ಟಿಯ ಕೀರಿಟದಂತಿರುವ ಮಾನವನನ್ನು ವಿನಾಶದ ಅಂಚಿಗೆ ತಳ್ಳುವ ಪರಿಸ್ಥಿತಿ ತಂದೊಡ್ಡಿದೆ.

ಆದ್ದರಿಂದ ನಿಜಧರ್ಮವನ್ನು ಮನುಷ್ಯನಲ್ಲಿ ಬಿತ್ತಬೇಕಾಗಿದೆ. ಜೊತೆಗೆ ರಾಷ್ಟ್ರಪ್ರೇಮವನ್ನೂ ಬೆಳೆಸಬೇಕಾಗಿದೆ. ದಂತಗೋಪುರದ ತತ್ವಜ್ಞಾನ, ಸಾಹಿತ್ಯ ರಚಿಸುತ್ತ ಕೂರದೆ, ಸಮಸ್ಯೆಗಳಿಗೆ ಪ್ರಮಾಣಿಕ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕಾಗಿದೆ. ಇದಕ್ಕಾಗಿ ತತ್ವನಿಷ್ಠರೂ, ತ್ಯಾಗಿಗಳೂ, ಧರ್ಮವಂತರೂ ಆದ ಜನಾಂಗ ನಿರ್ಮಾಣವಾಗಬೇಕಾಗಿದೆ".

ಧರ್ಮ-ಆಧ್ಯಾತ್ಮದ ತಳಹದಿಯ ಮೇಲೆ, ಸದೃಢ ಜನಾಂಗ ನಿರ್ಮಾಣದಲ್ಲಿ ಶ್ರಮಿಸುತ್ತಾ, ಲಕ್ಷಾಂತರ ಮಂದಿಯನ್ನು ಆಕರ್ಷಿಸುವತ್ತ ಯಶಸ್ವಿಯಾದ, ಶರಣಮೇಳದಂಥ ಬೃಹತ್ ಸಮಾವೇಶದ ರೂವಾರಿಗಳಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿತಾಯಿಯವರ ಅನುಭವವನ್ನು ಅವರ ಮಾತುಗಳಲ್ಲೆ ಅರಿಯೋಣ. "ಹಿಂದು ಸಮಾಜದಲ್ಲಿ 'ಜಾತಿ' ಎಂಬ ಗುಂಪುಗಳ ವರ್ಗೀಕರಣವಿರುವುದರಿಂದ ಆಯಾ ಜಾತಿಯವರು ಒಂದುಗೂಡಲು ಒಂದು ಸಂಘವನ್ನೋ, ಮಠವನ್ನೋ, ಗುಡಿಯನ್ನೋ ಕಟ್ಟಿಕೊಳ್ಳುತ್ತಾರೆ. ಆ ಒಗ್ಗೂಡುವಿಕೆ ತತ್ವದ ತಳಹದಿಯ ಮೇಲಿರದೆ ಜಾತಿಯ ತಳಹದಿಯ ಮೇಲಿರುತ್ತದೆ. ಇಂಥಲ್ಲಿ ಮನುಷ್ಯನ ಮನ-ಬುದ್ಧಿ-ಹೃದಯಗಳನ್ನು ಸಂಸ್ಕರಿಸುವ (process) ಯಾವುದೇ ಕಾರ್ಯಕ್ರಮ ಸಿಗುವ ಸಾಧ್ಯತೆ ಇರದು. ಹೀಗಾಗಿ ಅನೇಕ ಬಾರಿ ಅಲ್ಲಿ ರೋಷ-ದ್ವೇಷ, ಕೀರ್ತಿಲಾಲಸೆ, ಸ್ವಾರ್ಥ ಇತ್ಯಾದಿ ತುಂಬಿ ತುಳುಕುತ್ತಿರುತ್ತದೆ. ಇಂಥ ದುರ್ಬಲ ಸಂಘಟನೆಗೆ ಹೊರತಾದ ಮಾನವೀಯತೆ ಮತ್ತು ನೈತಿಕತೆಯ ತಳಹದಿಯ ಮೇಲೆ, ತಾತ್ವಿಕ ಬೆಂಬಲದೊಂದಿಗೆ ಒಂದು ಸಬಲವಾದ ಸಂಘಟನೆಯನ್ನು ರೂಪಿಸುವುದೆಂದರೆ ಸಂಪ್ರದಾಯಬದ್ಧ ಸಮಾಜದಲ್ಲಿ ಕಠಿಣತಮ ಸಾಹಸ.

ಒಟ್ಟಾರೆ ಹಿಂದು ಸಮಾಜದಲ್ಲಿ, ಅದರಲ್ಲೂ ಲಿಂಗಾಯತ ಸಮಾಜದಲ್ಲಿ ಬಹು ಪಾಲು ಜನಕ್ಕೆ ಜಾತಿ ಸಂಘಟನೆಯ ಸಂಸ್ಕಾರವೇ ಬಲವಾಗಿರುವುದರಿಂದ ನೈತಿಕ-ತಾತ್ವಿಕ ಹಿನ್ನೆಲೆಯ ಸಂಸ್ಕಾರವುಳ್ಳ ಸಂಘಟನೆಯತ್ತ ಜನರನ್ನು ಆಕರ್ಷಿಸುವುದು ಕಷ್ಟ ಸಾಧ್ಯ. ಆದರೂ ನಾವು ವಿಚಲಿತರಾಗದೆ ಹತಾಶರಾಗದೆ, ಧ್ಯೇಯದೆಡೆಗೆ ಸಾಗುತ್ತಿದ್ದೇವೆ. ಎಲ್ಲ ಜಾತಿ, ಮತ, ಪಂಥಗಳಲ್ಲಿರುವ ಮುಮುಕ್ಷುಗಳು, ಸತ್ಯಾನ್ವೇಷಿಗಳನ್ನು ಮನವೊಲಿಸುವಲ್ಲಿ ಮುನ್ನಡೆದಿದ್ದೇವೆ. ಇದು ಜಾತಿ ಸಂಘಟನೆಯಷ್ಟು ತೀವ್ರ ವೇಗದಲ್ಲಿ ಬೆಳೆಯದಿದ್ದರೂ, ಅದು ಅಪಾಯಕಾರಿ ಮಾರ್ಗವೆಂದು ಅರಿತು, ತಾತ್ವಿಕ ಸಂಘಟನೆಯಲ್ಲಿ ಆಸಕ್ತರಾಗಿದ್ದೇವೆ. ಏಕೆಂದರೆ ಇದು ನಿಧಾನಗತಿಯದಾದರೂ ವಿಧಾಯಕವಾದ, ಸಾತ್ವಿಕವಾದ ಸತ್ಯನಿಷ್ಠವಾದ ಮಾರ್ಗ. ಪಾರ್ಥೇನೀಯಂನಷ್ಟು ಶೀಘ್ರವಾಗಿ ತೆಂಗಿನ ಮರ ಬೆಳೆಯದಿದ್ದರೂ, ಪಾರ್ಥೇನೀಯಂ ಅಪಾಯಕಾರಿ ಕಸ ಎನ್ನಿಸಿಕೊಳ್ಳುತ್ತದೆ. ತೆಂಗಿನ ಮರ ಕಲ್ಪವೃಕ್ಷವೆನ್ನಿಸಿಕೊಳ್ಳುತ್ತದೆ. ಅದೇ ರೀತಿ ಜಾತಿ ಸಂಘಟನೆಗಳು ಕಸವಾದರೆ ನೈತಿಕ-ತಾತ್ವಿಕ

ಸಂಘಟನೆಗಳು ಸಮಾಜಕ್ಕೆ ಅಮೃತವಾಗುತ್ತದೆ. ಆದ್ದರಿಂದ ಧರ್ಮದ ಗುರಿ ಕೇವಲ ಸಂಘಟನೆಯಷ್ಟೇ ಅಲ್ಲ, ಜತೆಗೆ ಸಂಸ್ಕಾರಗಳನ್ನು ಜನರಲ್ಲಿ ಬಿತ್ತಿ ಬೆಳೆಯುವುದು. ಆಗ ಮಾತ್ರ ಪರಿಪೂರ್ಣ ಸಮಾಜ ನಿರ್ಮಾಣವಾಗಲು ಸಾಧ್ಯ''.

ಬಹುಕಾಲ ಬ್ರಿಟಿಷರ ದಾಸ್ಯದಲ್ಲಿದ್ದ ನಮ್ಮ ದೇಶವನ್ನು ಸತ್ಯ ಅಹಿಂಸೆಗಳ ಬಲದಿಂದ ಬಿಡುಗಡೆಗೊಳಿಸಿದ ನಮ್ಮೆಲ್ಲರ ನೆಚ್ಚಿನ ಮಹಾತ್ಮಾಜಿಯವರ ನುಡಿಮುತ್ತುಗಳನ್ನು ಈಗ ಆಲಿಸೋಣ:

''ಪ್ರತಿಯೊಂದು ದೊಡ್ಡ ಧ್ಯೇಯದಲ್ಲಿಯೂ ಗಣನೆಗೆ ಬರುವುದು ಹೋರಾಟಗಾರರ ಸಂಖ್ಯೆಯಲ್ಲ. ಆದರೆ ಆ ಹೋರಾಟಗಾರರು ಯಾವ ದರ್ಜೆಯವರು ಎಂಬುದು ಇತ್ಯರ್ಥಕ ಅಂಶವಾಗಿ ಪರಿಣಮಿಸುತ್ತದೆ. ಜಗತ್ತಿನ ಅತ್ಯಂತ ಶ್ರೇಷ್ಠ ವ್ಯಕ್ತಿಗಳು, ಮಹಾಪ್ರವಾದಿಗಳನ್ನು ನೋಡಿರಿ. ಅವರೆಲ್ಲ ಏಕಾಂಗಿಗಳಾಗಿ ನಿಂತರು. ಅವರಿಗೆ ತಮ್ಮಲ್ಲಿ ಮತ್ತು ದೇವರಲ್ಲಿ ಜೀವಂತ ಶ್ರದ್ಧೆಯಿತ್ತು. ದೇವರು ತಮ್ಮ ಪಕ್ಷದಲ್ಲಿದ್ದಾನೆಂದು ನಂಬಿದ್ದ ಅವರು ಎಂದೂ ಒಂಟಿತನವನ್ನು ಅನುಭವಿಸಲಿಲ್ಲ. ಇಂಥ ಜೀವಂತ ಶ್ರದ್ಧೆಯನ್ನು ನೀವು, ನಿಮ್ಮಲ್ಲಿ ಮತ್ತು ಪರಮಾತ್ಮನಲ್ಲಿ ಇಡಬೇಕು.

ನಾವು ಸಂಖ್ಯಾಬಲವನ್ನು ನೆಚ್ಚುವುದಿಲ್ಲ. ಆದರೆ ನಮಗೆ ಬೇಕಾಗಿರುವುದು ಶೀಲದ ಬಲ. ಕರೆಗೆ ಓಗೊಟ್ಟು ಮುಂದೆ ಬರುವ ಬಹುಸಂಖ್ಯೆಯ ಜನರಿಗಿಂತ ಹೆಚ್ಚಾಗಿ ಹಿಡಿದ ಕಾರ್ಯವನ್ನು ಸಾಧಿಸುವುದಕ್ಕೆ ತಮ್ಮನ್ನು ಅರ್ಪಿಸಿಕೊಳ್ಳಬಲ್ಲ ಕೆಲವರ ಮೇಲೆ ಭರವಸೆಯಿಟ್ಟು ಮುಂದುವರಿಯುತ್ತೇನೆ. ತಾಯ್ನಾಡಿನ ಘನತೆಯನ್ನು ಕಾಪಾಡುವುದಕ್ಕಾಗಿ ನೀವು ಜೀವನವನ್ನು ಪಣವಾಗಿಡಲು ಸಿದ್ಧರಾಗಿರಬೇಕು''.

ಇಂಥ ಪ್ರಾತಃಸ್ಮರಣೀಯರ ಸಾಧನೆಗಳನ್ನು ಮುಂದಿಟ್ಟುಕೊಂಡು ನಾವೀಗ ವಚನ ವಿಶ್ಲೇಷಣೆಯನ್ನು ಮಾಡೋಣ. ಮೊದಲನೆಯದಾಗಿ ಸಗಣಕ್ಕೆ ಸಾಸಿರ ಹುಳು ಹುಟ್ಟವೆ ಎಂದು ಕೇಳುತ್ತಿದ್ದಾರೆ. ದನಗಳು ಸಗಣಿ ಇಟ್ಟಾಗ ಅದೆಲ್ಲಿರುತ್ತವೋ ಒಮ್ಮೆಗೆ ಅವಯವಗಳಿಲ್ಲದ ಸಾವಿರಾರು ಹುಳುಗಳು ಅದರಲ್ಲಿ ಉತ್ಪತ್ತಿಯಾಗುತ್ತವೆ. ಸರಿ, ಹೀಗೆ ಸಂಖ್ಯಾ ಶೂರರಾಗಿ ಹುಟ್ಟಿದ ಮೇಲೆ ಅವು ಏನು ಮಾಡುತ್ತವೆ ?! ಅದರೊಳಗೆ ಹೊರಳಾಡುತ್ತಾ ಪ್ರಾಣಬಿಡುತ್ತವೆ. ಏಕೆಂದರೆ ಸಗಣಿಯಿಂದ ಹೊರಗೆ ಬಂದು ಬಿಸಿಲು, ಗಾಳಿಯನ್ನು ಎದುರಿಸಿ ಬದುಕುವ ಚೈತನ್ಯ ಅವಕ್ಕಿರುವುದಿಲ್ಲ. ಆ ಕಾರಣಕ್ಕಾಗಿಯೇ ಬೇಗ ಸಾವನ್ನಪ್ಪುತ್ತವೆ. ಆದರೂ ಇಷ್ಟು ಅಲ್ಪಕಾಲದಲ್ಲಿ ಅವು ತಮ್ಮ ಜೀವನದಲ್ಲಿ ಸಾಧಿಸಿದ ಎರಡು ಮಹಾನ್ ಕಾರ್ಯಗಳೆಂದರೆ ಒಟ್ಟಾಗಿ ಸಾವಿರಾರು ಸಂಖ್ಯೆಯಲ್ಲಿ ಹುಟ್ಟಿದ್ದು!! ಅದೇ ಸಂಖ್ಯೆಯಲ್ಲಿ ಸತ್ತಿದ್ದು!! ಇಂಥ ಅಸಾಮಾನ್ಯವಾದ ಸಾಮೂಹಿಕ ಸಾಧನೆಯನ್ನು ನಿರ್ಬಲತ್ವದಿಂದ ಕೂಡಿದ ಒಗ್ಗಟ್ಟು ಎಂದು ಕರೆಯಬಹುದಲ್ಲವೆ? ಇಂಥ ನಿರ್ಬಲ ಐಕ್ಯತೆಗೊಂದು ಜೀವಂತ ನಿದರ್ಶನ ನಿಮಗೆ ಬೇಕೆ ?! ಹಾಗಿದ್ದರೆ ಇಲ್ಲಿ ನೋಡಿ. ಅದೊಂದು ಆಧುನಿಕತೆಗೆ ಹೆಸರಾದ, ಯಾಂತ್ರಿಕ ಬದುಕಿನಿಂದ ಕೂಡಿದ ಮಹಾನಗರ. ಲೋಕದೃಷ್ಟಿಯಲ್ಲಿ ಪ್ರಖ್ಯಾತರಾಗಿದ್ದ ಅತ್ಯುತ್ತಮ ವಾಗ್ಮಿಗಳೊಬ್ಬರ ಪ್ರವಚನವನ್ನು ಅಲ್ಲಿ ಏರ್ಪಡಿಸಿದ್ದರು. ಈಗಾಗಲೇ ಪ್ರಭಾವಶಾಲಿಗಳಿಂದ ಸಾಕಷ್ಟು ಪ್ರಚಾರ ಪಡೆದಿದ್ದರಿಂದ, ಅನುಕೂಲಗಳನ್ನು ಕಲ್ಪಿಸಿದ್ದರಿಂದ ಜನರು ತಂಡೋಪ ತಂಡವಾಗಿ ಪ್ರವಚನ ಮೈದಾನಕ್ಕೆ ಹೋಗಿ ಬರುತ್ತಿದ್ದರು. ಅವರಲ್ಲಿ ನಿವೃತ್ತರೂ, ತಲೆ ಬೆಳ್ಳಗಾದವರ ಸಂಖ್ಯೆಯೇ



ಹೆಚ್ಚಾಗಿರುತ್ತಿತ್ತು. ಹೀಗಾಗಿ ಇದರ ಯಶಸ್ಸಿನ ಬಗ್ಗೆ ದಿನಪತ್ರಿಕೆಯೊಂದು ಪ್ರಾಮಾಣಿಕವಾಗಿ ಹೀಗೆ ವರದಿ ಮಾಡಿತು ''ಅಲ್ಲಿ ಸೇರಿರುವ ಜನ ಮಹನೀಯರ ಪ್ರವಚನಕ್ಕೆ ಹೋಗುವುದು ಅಲ್ಲಿಂದ ನಿರ್ಗಮಿಸುವುದನ್ನೇ ಮಹಾಭಾಗ್ಯ ಎಂದು ಭಾವಿಸುತ್ತಾರೆ '' ಎಂದು. ಅಂದರೆ ಇಲ್ಲಿ ಪ್ರಚಾರಕ್ಕೆ, ಶಬ್ದಸುಖಕ್ಕೆ ಮರುಳಾದ ಜನರು ಒಟ್ಟಾಗಿ ಒಂದೆಡೆ ಸೇರುವುದು. ನಂತರ ಬಂದಂತೆ ಚದುರುವುದರಲ್ಲಿಯೇ ತಮ್ಮ ನಿರ್ಬಲವಾದ ಶೂರತ್ವವನ್ನು ಪ್ರದರ್ಶಿಸಿದಂತಾಗಲಿಲ್ಲವೆ?! ಇಂಥ ಕ್ಷಣಿಕ ರೋಮಾಂಚನವನ್ನು ಉಂಟು ಮಾಡುವ, ಅಶಕ್ತವಾದ, ತಾತ್ಕಾಲಿಕವಾದ ಗುಂಪುಗೂಡುವಿಕೆಯಿಂದ ಏನು ಪ್ರಯೋಜನ ಎನ್ನುತ್ತಾರೆ ಅಪ್ಪನವರು.

ಧರ್ಮಬಂಧುಗಳೇ, ಇಂಥ ಸಾಧನೆಗಳ ತಾರತಮ್ಯವನ್ನು ಸಮರ್ಥಿಸಲು ನನಗೊಂದು ಕಥೆ ನೆನಪಾಗುತ್ತಿದೆ. ಹೇಳಲೆ? ಒಂದು ಸಾರಿ ಒಬ್ಬ ಪ್ರವಾದಿ, ಒಬ್ಬ ಬಸ್ ಚಾಲಕ ಮತ್ತು ಒಬ್ಬ ಪ್ರಸಿದ್ಧ ಸಂತ - ಈ ಮೂರು ಜನ ದೇವರ ಬಳಿಗೆ ಹೋದರಂತೆ. ಇವರನ್ನು ಕಂಡು ದೇವರಿಗೆ ಬಹಳ ಸಂತೋಷವಾಯಿತು. ಏಕೆಂದರೆ ಇವರನ್ನು ಕಾಣಬೇಕೆಂದು ದೇವರು ಹಂಬಲಿಸುತ್ತಿದ್ದನಂತೆ. ಸರಿ, ಎಲ್ಲರನ್ನು ಸತ್ಕರಿಸಬೇಕೆಂಬ ಮನಸ್ಸಾಯಿತು. ಅದರಂತೆ ಮೊದಲು ಪ್ರವಾದಿಗೆ ಬೆಲೆಬಾಳುವ ರೇಷ್ಮೆ ಶಾಲು ಹೊದಿಸಿ, ಕೈಗೊಂದು ಚಿನ್ನದ ದಂಡವನ್ನು ನೀಡಿದನಂತೆ. ನಂತರ ಎರಡನೆಯದಾಗಿ ಬಸ್ಸಿನ ಚಾಲಕನಿಗೆ ಉಣ್ಣೆ ಶಾಲು ಹೊದಿಸಿ, ಕೈಗೊಂದು ಬೆಳ್ಳಿದಂಡ ಕೊಟ್ಟನಂತೆ. ಕೊನೆಯದಾಗಿ ಪ್ರಸಿದ್ಧ ಸಂತನಿಗೆ ಹತ್ತಿಯ ಶಾಲು ಹೊದಿಸಿ ಕೈಗೊಂದು ಮರದ ದಂಡ ನೀಡಿದನಂತೆ. ಈ ಪಕ್ಷಪಾತವನ್ನು ಸಹಿಸದ ಸಂತ ದೇವರನ್ನು ಹೀಗೇಕೆಂದು ಕೇಳಿದ. ಅದಕ್ಕೆ ದೇವರು ಅವನನ್ನು ಸಮಾಧಾನ ಪಡಿಸುತ್ತಾ ನುಡಿದನಂತೆ :

''ನೋಡು ಮಗು, ಇವನು ಪ್ರವಾದಿ. ನನ್ನ ಪ್ರೀತಿಪಾತ್ರ ಮಗ. ನಾನು ಸೃಷ್ಟಿಸಿದ ಈ ಜಗತ್ತಿನಲ್ಲಿ ಕೋಟಿ ಕೋಟಿ ಜೀವರಾಶಿಗಳು ಜನ್ಮಿಸಿವೆ. ಅವುಗಳಲ್ಲಿ ಮಾನವನು ಅತ್ಯಂತ ಶ್ರೇಷ್ಠವಾದ ಪ್ರಾಣಿ ಎಂದು ತಿಳಿದು ಉಳಿದ ಪ್ರಾಣಿಗಳಿಗಿಂತಲೂ ಹೆಚ್ಚಿನ ಬುದ್ಧಿಶಕ್ತಿಯನ್ನು ಕೊಟ್ಟೆ. ಈ ಋಣಕ್ಕಾಗಿ ಹುಟ್ಟಿದ ಪ್ರತಿ ಮಾನವ ಶಿಶುವು ನನ್ನ ನೆನಪನ್ನು ಇಂದಲ್ಲ ನಾಳೆ ಮಾಡಬಹುದು ಎಂದು ತಾಳ್ಮೆಯಿಂದ ಕಾಯುತ್ತಾ ಬಂದೆ. ಆದರೆ ಆದುದೇನು? ಸ್ಮರಣೆ ಮಾಡುವುದು ಅತ್ತಲಿರಲಿ; ನನ್ನ ಕಡೆ ಒಮ್ಮೆಯೂ ತಿರುಗಿಯೂ ನೋಡಲಿಲ್ಲ. ಆದರೂ ನನ್ನ ನಿರೀಕ್ಷೆ ಹುಸಿಯಾಗಲಿಲ್ಲ. ಅಪರೂಪಕ್ಕೆ ಹುಟ್ಟಿದ ಇವನು ಮಾತ್ರ ನನ್ನನ್ನು ಮರೆಯದೆ, ಸ್ಮರಿಸುತ್ತಾ ನನಗೆ ಕೀರ್ತಿ ತಂದುಕೊಟ್ಟನು. ಮಾತ್ರವಲ್ಲ ನನ್ನನ್ನು ಜಗತ್ತಿಗೆ ತೋರಿಸಿ ಪರಿಚಯಿಸಿ ತನ್ನ ಕೀರ್ತಿಯನ್ನು ಬೆಳಗಿಸಿಕೊಂಡನು. ಈ ಮಹೋನ್ನತ ಸಾಧನೆಗಾಗಿಯೇ ನಾನು ರೇಷ್ಮೆ ಶಾಲು, ಚಿನ್ನದ ದಂಡದಿಂದ ಸತ್ಕರಿಸಿದ್ದು. ಅಂದರೆ ಈತ ಆತ್ಮೋದ್ಧಾರದೊಂದಿಗೆ ಲೋಕೋದ್ಧಾರವನ್ನು ಮಾಡಿದ ಮಹಾಪುರುಷ''.

ಇನ್ನು ಬಸ್ಸು ಚಾಲಕ, ಈತನಿಗೆ ನನ್ನ ಬಗ್ಗೆ ಅರಿವು ಇಲ್ಲದಿದ್ದರೂ ಮತ್ತು ಕಡೆಗೆ ಆತ್ಮೋದ್ಧಾರದ ಹಂಬಲವಿಲ್ಲದಿದ್ದರೂ ಚಿಂತೆಯಿಲ್ಲ. ಇವನು ತನ್ನ ಕಾಯಕದ ವೇಳೆಯಲ್ಲಿ ಬಸ್ ಚಾಲನೆ ಮಾಡುವಾಗ ಕನಿಷ್ಟ ಬಸ್ಸಿನಲ್ಲಿ 50-60 ಜನರಿರುತ್ತಿದ್ದರು. ಬಸ್ಸು ಹೊರಡುವ ಮೊದಲು ಇದರಲ್ಲಿ ಕೆಲವರಾದರೂ ''ಓ! ದೇವರೆ, ನಾವು ನಿನ್ನನ್ನು ನಂಬಿ ಈ ಬಸ್ಸಿನಲ್ಲಿ ಕುಳಿತ್ತಿದ್ದೇವೆ. ಆದ್ದರಿಂದ ಸುರಕ್ಷಿತವಾಗಿ ನಮ್ಮನ್ನು

ಮನೆ ತಲುಪಿಸು'' ಎಂದು, ಮೊರೆಯಿಡುತ್ತಿದ್ದರು. ನನ್ನ ಬಗ್ಗೆ ಈ ಜನರಿಗೆ ಸ್ಪಷ್ಟವಾದ ತಿಳುವಳಿಕೆಯಿಲ್ಲದಿದ್ದರೂ ಬದುಕುವ ಆಸೆಯಿಂದ ಕ್ಷಣ ಮಾತ್ರವಾದರೂ ನನ್ನ ಸ್ಮರಣೆಗೆ ಈ ಚಾಲಕ ನಿಮಿತ್ತ ಕಾರಣನಾಗಿದ್ದಾನೆ ಎಂದು ಈತನನ್ನು ಸತ್ಕರಿಸಿದ್ದೇನೆ.

ಇನ್ನು ನಿನ್ನ ಬಗ್ಗೆ ಹೆಚ್ಚಿಗೆ ಹೇಳಲು ನಾನು ಶಕ್ತನಲ್ಲ, ಆದರೂ ನಿನ್ನ ಸಂದೇಹ ನಿವಾರಣೆಗಾಗಿ ಮಾತಾಡುತ್ತೇನೆ. ಆತ್ಮೋದ್ಧಾರದ ಹಂಬಲದೊಂದಿಗೆ ನೀನು ಸದ್ವಿಚಾರಗಳನ್ನು ಜನರಿಗೆ ತಿಳಿಸುವ ಮೂಲಕ ಕೀರ್ತಿಶಾಲಿಯಾಗಿದ್ದರೂ, ಎಂದಿಗೂ ನನ್ನ ಬಗ್ಗೆ ಪ್ರಾಮಾಣಿಕವಾಗಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಿಲ್ಲ, ಬದಲಿಗೆ ''ಮನಸ್ಸು ಸುಲಭವಾಗಿ ಮಲಗುವುದಿಲ್ಲ, ಏಕೆಂದರೆ ತಲೆಯಲ್ಲಿ, ಮೈಯಲ್ಲಿ ನೂರಾರು ಭಾವನೆಗಳು ತುಂಬಿಕೊಂಡಿರುತ್ತವೆ. ಆದ್ದರಿಂದ ನನ್ನ ಮಾತುಗಳೆಲ್ಲ ನಿಮ್ಮನ್ನು ಚಿಂತೆಗಳಿಂದ ಮುಕ್ತ ಮಾಡಿ ಮಲಗಿಸೋ ಮಾತುಗಳೇ ವಿನಾ ಎಬ್ಬಿಸುವ ಮಾತುಗಳಲ್ಲ'' ಎಂದು ಸಮರ್ಥಿಸುತ್ತಿದ್ದೆ. ಇದರಿಂದಾಗಿ ಜನ ನನ್ನ ಬಗ್ಗೆ ಅಜ್ಞಾನದಲ್ಲಿಯೇ ಉಳಿದರು. ಮಾತ್ರವಲ್ಲ ಒಂದು ರೀತಿಯ ಚೈತನ್ಯರಹಿತ ಜಡಸಮಾಜ ಸೃಷ್ಟಿಯಾಯಿತು. ಆದರೂ ಚಿಂತೆಯಿಲ್ಲ. ಬುದ್ಧಿಶಕ್ತಿಯನ್ನು ಉಪಯೋಗಿಸಿ, ದೇವರು, ಧರ್ಮದ ಬಗ್ಗೆ ಗೊಂದಲ ಮೂಡಿಸುವ ಕೆಲಸ ಮಾಡದೆ ಮತ್ತು ಈ ಸಂಬಂಧ ಸಮಾಜದಲ್ಲಿ ಯಾವುದೇ ರೀತಿಯ ಅಶಾಂತಿಗೆ ಕಾರಣನಾಗದ ನಿನ್ನನ್ನು ಅಭಿನಂದಿಸುವುದು ನನ್ನ ಕರ್ತವ್ಯ ಎಂದು ತಿಳಿದು ಸತ್ಕರಿಸಿದ್ದೇನೆ. ಆದರೂ ನೀನು ನಿರಾಶನಾಗಬೇಕಾಗಿಲ್ಲ. ಏಕೆಂದರೆ ಮುಂದೆ ನಿನಗೆ ಇನ್ನು ಸಾಕಷ್ಟು ಅವಕಾಶಗಳಿವೆ. ಆಗಲಾದರೂ ನನ್ನ ನಿಜವಾದ ಸ್ವರೂಪ ಚಿಂತನೆ ಮಾಡಿ, ಜಗತ್ತಿಗೂ ತಿಳಿಸಿ, ಇಹಪರಕ್ಕೂ ಸಲ್ಲುವಂತೆ ಬಾಳಿ ಮುಕ್ತಾತ್ಮನಾಗು ಎಂದು ಹಾರೈಸುವೆ'' ಎಂದು ಹರಸಿದನಂತೆ.

ಓಹೋ ! ಅದಕ್ಕೆ ಇರಬೇಕು, ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭುದೇವರು ತಮ್ಮ ಪ್ರಥಮಾರಾಧ್ಯ ಗುರು ಬಸವಣ್ಣನವರನ್ನು ನೋಡಿ ಹೀಗೆ ಉದ್ಗರಿಸಿದ್ದು !!

....ತನುವಿನೊಳಗಿಲ್ಲದ, ಮನದೊಳಗಿಲ್ಲದ ಘನವು<br>
ನಿನ್ನ ಮನಕ್ಕೆ ವೇದ್ಯವಾದ ಪರಿ ಎಂತಯ್ಯಾ?<br>
ಗುಹೇಶ್ವರನೆಂಬ ಲಿಂಗವು ಜಗದ ಕಣ್ಣಿಂಗೆ ಕತ್ತಲೆಯ ಕವಿಸಿ<br>
ತನ್ನ ತಪ್ಪಿಸಿಕೊಂಡಿಪ್ಪ ಭೇದ<br>
ನಿನ್ನೊಳಡಗಿದ ಪರಿ ಎಂತು, ಹೇಳಾ ಸಂಗನ ಬಸವಣ್ಣಾ? - ಅ.ಪ್ರ.ವ. 832

ಮುಂದೆ ಕಾಡುಮೃಗ, ಊರ ಮೃಗ ಒಂದಾಗಿರಲಾರವೇ ಎಂದು ಪ್ರಶ್ನಿಸುತ್ತಿದ್ದಾರೆ. ಅಷ್ಟೇ ಅಲ್ಲ ಶರಣರಿಲ್ಲದ ಊರು, ದೇಶ ವನವಾಸ, ನರವಿಂಧ್ಯ ಎಂದು ಹೇಳಿರುವುದನ್ನು ನೋಡಿದರೆ ಸಂಸ್ಕೃತಿಹೀನ ಮಾನವರನ್ನು ಮೃಗ ಎಂದೇ ಕರೆದಿರುವುದು ಇಲ್ಲಿ ಗೋಚರವಾಗುತ್ತಿದೆ. ಏಕೆಂದರೆ ಕಾಡುಗಳಲ್ಲಿ, ಊರುಗಳಲ್ಲಿ ವಾಸಿಸುವ ಕ್ರೂರ ಪ್ರಾಣಿಗಳಲ್ಲಿ (ಹುಲಿ, ಸಿಂಹ, ನಾಯಿ, ಬೆಕ್ಕು) ಸಾಮಾನ್ಯವಾಗಿ ಐಕ್ಯಮತ್ಯ ವಿರುವುದಿಲ್ಲ. ಇನ್ನು ಸಾಧು ಪ್ರಾಣಿಗಳಾದ ಕುರಿ, ದನ, ಜಿಂಕೆ, ಎಮ್ಮೆ ಆಡುಗಳಲ್ಲಿ ಒಗ್ಗಟ್ಟು ಕಂಡು ಬಂದರೂ ಅದು ಕೇವಲ ತಮ್ಮ ಸಂತತಿಯ ರಕ್ಷಣೆಗಾಗಿ ಮಾತ್ರ



ಸೀಮಿತವಾಗಿರುತ್ತದೆ ಎಂಬುದು ಗಮನಾರ್ಹ. ಆದರೂ ಕಾಡುಮೃಗಗಳಂತೆ ಪಾಶವಿಕ ಶಕ್ತಿಯಿಂದ ಪ್ರೇರಿತರಾಗಿ ಕ್ರೂರವಾಗಿ ವರ್ತಿಸುವ ಮಾನವರು ಸಾಮಾನ್ಯವಾಗಿ ಯಾವ ಸಂದರ್ಭಗಳಲ್ಲಿ ಒಂದಾಗಬಹುದು ? ಪತ್ರಿಕೆಗಳಲ್ಲಿ ವರದಿಯಾಗುವಂತೆ ಸಾಮೂಹಿಕ ಅತ್ಯಾಚಾರ, ಚಳುವಳಿ ಪ್ರತಿಭಟನೆಯ ನೆಪದಲ್ಲಿ ಲೂಟಿ, ಹಲ್ಲೆ, ಅಂಗಡಿ ಮುಂಗಟ್ಟು ನಾಶ, ಸಾಮಾಜಿಕ ಆಸ್ತಿ ಪಾಸ್ತಿ ನಷ್ಟ ಬೆಂಕಿ ಹಚ್ಚುವುದು ಮುಂತಾದ ಅಕೃತ್ಯಗಳು ಗುಂಪುಗಳಿಂದಲೇ ನಡೆಯುತ್ತವೆ. ಇನ್ನು ಕೆಲವು ಅಭಿಮಾನಿ ಸಂಘಗಳ ಹೆಸರಿನಲ್ಲಿ ವಿಧಾಯಕ ಕಾರ್ಯಗಳ ಬದಲಾಗಿ ಪೋಲಿ ಪುಂಡರ ಗುಂಪನ್ನು ಬಲಪಡಿಸುತ್ತ ಬೆಳೆಸುತ್ತಾ ಕಂಕಟ ಪ್ರಾಯವಾಗುತ್ತವೆ. ಇನ್ನು ರಾಜಕೀಯ ನೇತಾರರು ತಮ್ಮ ಸಭೆ ಸಮಾರಂಭಗಳಿಗೆ ಜನರನ್ನು ಸೇರಿಸಬೇಕೆಂಬ ಹಂಬಲದಿಂದ ಬಾಡಿಗೆ ಜನರನ್ನು ತರುವ ಪರಿಪಾಠವೂ ಉಂಟು. ಮತ್ತೊಂದು ಸೋಜಿಗವೆಂದರೆ ಯಾವ ಪ್ರಚಾರವಾಗಲಿ ಆಹ್ವಾನವಾಗಲಿ ಇಲ್ಲದಿದ್ದರೂ ಚಿಂತೆಯಿಲ್ಲ ಜನ ಸ್ವಯಂ ಸ್ಫೂರ್ತಿಯಿಂದಲೇ ಕ್ಷಣ ಮಾತ್ರದಲ್ಲಿ ಗುಂಪುಗೂಡುತ್ತಾರೆ. ಅವು ಯಾವ ಆಕರ್ಷಣೆಗಳು ಗೊತ್ತೆ ? ಕೋತಿ, ಹಾವು ಆಡಿಸುವವರು ಬಂದಾಗ, ಸಿನಿಮಾನಟ ನಟಿಯರು ಆಗಮಿಸಿದಾಗ, ರಸ್ತೆಗಳಲ್ಲಿ ಅಪಘಾತವಾದಾಗ ....ಹೀಗೆ.

ಇನ್ನು ಊರ ಮೃಗಗಳು ಅಂದರೆ ಒಂದೇ ಜಾತಿಗೆ ಸೇರಿದ ಜನ ಒಂದಾಗಿ ಸೇರುವುದು ಯಾವಾಗ ? ಮದುವೆ, ಹಬ್ಬ ಉತ್ಸವ, ನಾಮಕರಣ, ಜಾತಿ ಸಮ್ಮೇಳನ ಮುಂತಾದ ಕಡೆಯೂ ಸುಲಭವಾಗಿ ಗುಂಪುಗೂಡುತ್ತಾರೆ. ಇವುಗಳನ್ನೆಲ್ಲ ನಾವು ದುರ್ಬಲವಾದ ಸಂಘಟನೆ ಎಂದು ಕರೆಯಲು ಅಡ್ಡಿಯಿಲ್ಲ. ಏಕೆಂದರೆ ಇಲ್ಲೆಲ್ಲ ಸದಾಚಾರ, ಸದ್ಭಕ್ತಿ, ಸತ್ಕ್ರಿಯೆಗಳ ಹೆಸರಿನಲ್ಲಿ ಒಂದಾಗಬೇಕೆನ್ನುವ ಪ್ರಕ್ರಿಯೆ ಕಂಡುಬರುವುದಿಲ್ಲ. ಅದರಲ್ಲೂ ಆಧ್ಯಾತ್ಮ ಜೀವಿಗಳಾದವರಿಗೆ ಇಂಥವರೊಂದಿಗೆ ಒಡನಾಡುವುದು ಅಸಹನೀಯವಾದ ಅನುಭವ ತಂದುಕೊಡುತ್ತದೆ. ಆದ್ದರಿಂದಲೇ ಧರ್ಮಪಿತರು ''ಲಿಂಗದೇವನ ಶರಣರಿಲ್ಲದ ಊರು, ದೇಶ ವನವಾಸ, ನರವಿಂಧ್ಯ ಎಂದು ದೂರುವುದು''. ಜಗನ್ಮಾತಾ ಅಕ್ಕಮಹಾದೇವಿ ಲೌಕಿಕ ಜನರ ಸಹವಾಸವನ್ನು ಕುರಿತು ''ಭವಿ ಸಂಗವಳಿದು ಭಕ್ತನಾದ ಬಳಿಕ, ಭಕ್ತರಿಗೆ ಭವಿಸಂಗವತಿ ಘೋರ ನರಕ'' ಎಂದು ಎಚ್ಚರಿಸುತ್ತಿರುವುದು.

ಇಂಥ ಅರ್ಥರಹಿತ, ಸಂಸ್ಕಾರವಿಲ್ಲದ ದುರ್ಬಲವಾದ ಸಂಘಟನೆಗಳಿಗಿಂತಲೂ ತತ್ತ್ವ-ಆಧ್ಯಾತ್ಮಗಳಿಂದ ಕೂಡಿದ ಸಬಲವಾದ ಸಂಘಟನೆಗಳು ಹೆಚ್ಚು ಪರಿಣಾಮಕಾರಿ ಎಂದು ಈ ವಚನದಲ್ಲಿ ಪ್ರತಿಬಿಂಬಿಸಿದ್ದಾರೆ. ಈ ಕಾರಣಕ್ಕಾಗಿಯೇ ಶರಣರ ಸತ್ಸಂಗಕ್ಕೆ ಅತಿ ಹೆಚ್ಚಿನ ಮಹತ್ವ ಕೊಟ್ಟಿದ್ದು ಬಲು ಶೀಘ್ರವಾಗಿ ಸಹವಾಸ ದೋಷಕ್ಕೆ ಸುಲಭವಾಗಿ ಈಡಾಗುವ ಮಾನವನಿಗೆ ಸತ್ಸಂಗದ, ಅನುಭಾವದ ಕೋಟೆ ಕಟ್ಟಿದ್ದು; ಸಾಮಾಜಿಕವಾಗಿ ರಕ್ಷಣೆ ಒದಗಿಸಿದ್ದು. ಇಂಥ ಸತ್ಸಂಗದಿಂದ ಆಗುವ ಲಾಭವೇನು ಎಂದರೆ ಅದನ್ನು ಧರ್ಮಪಿತರ ಮಾತುಗಳಲ್ಲೆ ನೋಡೋಣ :

ಅಯ್ಯಾ, ಸಜ್ಜನ ಸದ್ಭಾವಿಗಳ ಸಂಗದಿಂದ<br>
ಮಹಾನುಭಾವರ ಕಾಣಬಹುದಯ್ಯ

ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು.
ಲಿಂಗವನರಿಯಬಹುದು, ಜಂಗಮವನರಿಯಬಹುದು
ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು
ಇದು ಕಾರಣ ಸದ್ಭಕ್ತರ ಸಂಗವನೇ ಕರುಣಿಸು
ಲಿಂಗದೇವಾ, ನಿಮ್ಮ ಧರ್ಮ. ಬ.ವ.ದೀ-877

"ಓ! ಬಸವ ತಂದೆ, ಅನುಸರಿಸಲು ಯೋಗ್ಯವಾದ, ಸದೃಢವಾದ ತತ್ತ್ವ ಸಿದ್ಧಾಂತಗಳನ್ನು ನೀವು ಕೊಟ್ಟಿದ್ದರೂ, ಲಿಂಗಾಯತರನ್ನು ನೋಡಿದಾಗ ನನಗೊಂದು ಸಂದೇಹ ಕಾಡುತ್ತಿದೆ. ಅದೇನೆಂದರೆ ಲಿಂಗಾಯತರು ಹುಲಿ, ಸಿಂಹಗಳಂತೆ ಆಕ್ರಮಣಶೀಲರಾಗುವುದು ಬೇಡ. ಆದರೆ ನಿಮ್ಮ ತತ್ತ್ವದ ಬಲದಿಂದ ಆತ್ಮರಕ್ಷಣೆಯನ್ನಾದರೂ ಮಾಡಿಕೊಳ್ಳಬಾರದೆ?!" ಎಂದು.

ಸಮಾಜ ಚಿಂತಕರಾದ ಶರಣಬಂಧುಗಳೇ ನಿಮಗೊಂದು ವಿಷಯಗೊತ್ತಿದೆಯೇ? ಗೊತ್ತಿದ್ದರೆ ಹೇಳಿ. ಗೊತ್ತಿಲ್ಲದಿದ್ದರೆ ಕೇಳಿ. ಬಸವ ತತ್ತ್ವದ ನೆಲೆಗಟ್ಟಿನ ಮೇಲೆ ನಿಂತುಕೊಂಡು ಈ ಜನಾಂಗ ದರ್ಶನ ಮಾಡಿದಾಗ ಒಂದು ಸಂಗತಿ ಮಾತ್ರ ಸ್ಪಷ್ಟವಾಗಿ ಗೋಚರವಾಗುತ್ತಿದೆ. ಇಲ್ಲಿ ಲಿಂಗಾಯತ-ವೀರಶೈವ ಎಂಬ 2 ದೊಡ್ಡ ಗುಂಪುಗಳಿವೆ. ಇವರಿಗೆ ತಮ್ಮ ದೇವರು-ಧರ್ಮದ ಬಗ್ಗೆ ತಾತ್ವಿಕ ಜ್ಞಾನವಿಲ್ಲದಿದ್ದರೂ ಚಿಂತೆಯಿಲ್ಲ. ಆದರೆ ಪಂಡಿತನಿಂದ ಪಾಮರನವರೆಗೂ ಒಂದು ಸತ್ಯಸಂಗತಿಯನ್ನು ಮಾತ್ರ ಎಲ್ಲರೂ ಚನ್ನಾಗಿ ಅರಿತುಕೊಂಡಿದ್ದಾರೆ. ಅದೇ "ನಮ್ಮಲ್ಲಿ ಒಗ್ಗಟ್ಟಿಲ್ಲ" ಎಂದು. ಆದರೆ ಅನೈಕ್ಯತೆಗೆ ಕಾರಣವನ್ನು ಚಿಂತಿಸಲು, ಪರಿಹಾರ ಕಂಡುಕೊಳ್ಳಲು ಮಾತ್ರ ಸಿದ್ಧರಿಲ್ಲ. ಬಹುಶಃ ಇಂಥ ಜನರಿಗೆ ಪಾಠ ಕಲಿಸಲು ಅಂಬಿಗರ ಚೌಡಯ್ಯನವರ ಪಾತ್ರದ ಅಗತ್ಯವಿದ್ದಂತೆ ತೋರುತ್ತಿದೆ. ಆದರೂ ಸ್ವಾನುಭಾವದ ಮಾತನ್ನು ಹೇಳುವುದಾದರೆ ವೀರಶೈವರು ಶ್ರೇಷ್ಠತೆಯ ವ್ಯಸನದೊಂದಿಗೆ ಮೋಸ, ನಯವಂಚಕತನವನ್ನು ಮೈಗೂಡಿಸಿಕೊಂಡು ನರಳುತ್ತಿದ್ದಾರೆ. ಲಿಂಗಾಯತರು ಮುಗ್ಧರೂ ಸಾತ್ವಿಕರೂ ಆಗಿದ್ದರೂ ದಾಸ್ಯ ಮನೋಭಾವದಿಂದ ಬಳಲುತ್ತಿದ್ದಾರೆ. ಇವರಿಬ್ಬರೂ ನರಿ ಬುದ್ಧಿ-ಕುರಿ ಬುದ್ಧಿಯಿಂದ ಹೊರ ಬಂದಾಗ ಮಾತ್ರ ಪ್ರಬಲವಾದ ಐಕ್ಯತೆ ಸಾಧ್ಯ. ವೀರಶೈವರಿಗೆ ತಮ್ಮ ಹುಟ್ಟುಗುಣಗಳಿಂದ ಹೊರಬರುವುದು ಅಸಾಧ್ಯವಾದರೆ ಚಿಂತಿಸಬೇಕಾಗಿಲ್ಲ. ಲಿಂಗಾಯತರಾದರೂ ಬಸವಣ್ಣನವರನ್ನು ಧರ್ಮಗುರು ಮತ್ತು ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಬಲವಾಗಿ ನಂಬಿ ಅನುಷ್ಠಾನಕ್ಕೆ ತರುವ ಮೂಲಕ ಪರಿವರ್ತನೆ ಹೊಂದಲು ಸಾಧ್ಯವಿದೆ. ಸತ್ವಬಲವಿಲ್ಲದ ಈ ಸಮಾಜದಲ್ಲಿ ಹಣಬಲ, ಜನಬಲ, ಮಠಬಲ, ಎಷ್ಟಿದ್ದರೇನು ? ಅದೆಲ್ಲ ಅಪ್ಪ ಬಸವಣ್ಣನವರು ಈ ವಚನದಲ್ಲಿ ಹೇಳಿದಂತೆ ಅಸಮರ್ಥವಾಗಿವೆ.

ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ ?
ಸೊಂಡಿಲು ಮುರಿಯಲಾ ಗಜವೇನು ಬಾತೆ ?
ಸಂಗ್ರಾಮದಲ್ಲಿ ವೀರನುಳಿಲದೇನು ಬಾತೆ ?
ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ ಲಿಂಗದೇವಾ ? ★★



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

866666

ಕರ್ನಾಟಕ ರಾಜ್ಯ, ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಮತ್ತೀಪುರ ರಾಷ್ಟ್ರೀಯ ಬಸವ ದಳ ಘಟಕದ ಕಾರ್ಯಾಧ್ಯಕ್ಷ ಸು. ಮಲ್ಲಿಕಾರ್ಜುನಪ್ಪ ಮತ್ತು ಗ್ರಾಮಸ್ಥರು ಕಾಮಗೆರೆಯ ಮಾಜಿ ಸಚಿವ ಲಿಂ॥ ಶ್ರೀ ಎಚ್.ನಾಗಪ್ಪ ಅವರ ಧರ್ಮಪತ್ನಿ ಶರಣೆ. ಪರಿಮಳ ಅವರ ಅಧ್ಯಕ್ಷತೆಯಲ್ಲಿ ಕೂಡಲಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರಾದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಶ್ರೀ ಶ್ರೀ ಮಾತೆ ಮಹಾದೇವಿ** ಅವರು ಅಮೆರಿಕದಲ್ಲಿ ಬಸವ ಧರ್ಮ ಪ್ರಚಾರ ಮಾಡಿ, ತಾಯ್ನಾಡಿಗೆ ವಾಪಸ್ಸಾಗಿರುವ ಹಿನ್ನೆಲೆಯಲ್ಲಿ ಸನ್ಮಾನ ಮತ್ತು ಬಸವ ಧರ್ಮ ಸಮ್ಮೇಳನದಲ್ಲಿ ಅವರ ಚರಣಕಮಲಗಳಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸಿದ

# ಸನ್ಮಾನ ಪತ್ರ

### 1. ಮಹಾಜಗದ್ಗುರು ಶ್ರೀ ಶ್ರೀ ಮಾತೆ ಮಹಾದೇವಿಯವರೇ,

ಕರ್ನಾಟಕದ ಐತಿಹಾಸಿಕ ಜಿಲ್ಲೆ ಚಿತ್ರದುರ್ಗ ಸಮೀಪದ ಸಾಸಲಹಟ್ಟಿಯ ಶ್ರೀಮಂತ ಮನೆತನದ ಶರಣ ಡಾ. ಬಸಪ್ಪ ಮತ್ತು ಶರಣೆ. ಗಂಗಮ್ಮ ಅವರ ಸುಪುತ್ರಿಯಾಗಿ 13-3-1946ರಂದು ಜನಿಸಿ, ವಿಜ್ಞಾನ-ತತ್ವಜ್ಞಾನ ಸ್ನಾತಕೋತ್ತರ ಪದವೀಧರರಾಗಿ, ಮಹಾಜಗದ್ಗುರು ಶ್ರೀ ಶ್ರೀ ಲಿಂಗಾನಂದ ಸ್ವಾಮಿಗಳವರಿಂದ ತಾವು 21-8-1965ರಂದು ಇಷ್ಟಲಿಂಗ ದೀಕ್ಷೆ ಪಡೆದು, **"ಮಾತೆ ಮಹಾದೇವಿ"** ಎಂಬ ಅಭಿಧಾನ ತಾಳಿ, 5-4-1966ರಂದು ಜಂಗಮ ದೀಕ್ಷೆ ಹೊಂದಿ, ಮಾನವೀಯತೆ-ಸಮಾನತೆ-ಸ್ವತಂತ್ರಗಳನ್ನು ಬೋಧಿಸುವ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ, ಉದ್ಯೋಗ-ಲಿಂಗ-ಜಾತಿ ಭೇದಗಳಿಲ್ಲದೆ ಆಸಕ್ತ ಎಲ್ಲ ಮಾನವರಿಗೆ ಲಿಂಗ-ಧರ್ಮ-ಸಂಸ್ಕಾರ ಕೊಡಬಲ್ಲ, ಕಾಲದೇಶಕ್ಕತೀತವಾದ, ಬಸವ ಪ್ರಣೀತ ಲಿಂಗಾಯತ ಧರ್ಮವು ಮಾನವ ಧರ್ಮ-ರಾಷ್ಟ್ರಧರ್ಮ-ವಿಶ್ವಧರ್ಮವೆಂದು ಸಾರುತ್ತ, ಮೂಢನಂಬಿಕೆ, ಒಳಪಂಗಡ ಭೇದಗಳಿಂದ ಮಂಕಾಗಿರುವ ಲಿಂಗಾಯತ ಧರ್ಮ ಸುಧಾರಣೆಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿರಿಸಿ, ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಎಂಬ ಮಂತ್ರವನ್ನು ಹೇಳುತ್ತ, ಭಕ್ತಿ-ಜ್ಞಾನ-ವಿರಕ್ತಿಗಳ ದಿವ್ಯ ಸಂಗಮವಾಗಿ, ಬಸವ ಧರ್ಮದ ಪರಮೋಚ್ಚ ಪೀಠಾಧ್ಯಕ್ಷರಾಗಿ ತಮ್ಮ ಶ್ರೀಪಾದಗಳಿಗೆ ಕೋಟಿ ಕೋಟಿ ನಮನಗಳು.

### 2. ಲಿಂಗಾಯತ ಸ್ವತಂತ್ರ ಧರ್ಮ ಪ್ರತಿಪಾದಕರೇ,

ಜಗತ್ತಿನ ಎಲ್ಲ ಧರ್ಮಗಳ ಬಗ್ಗೆ ತಿಳಿದು, ಸ್ವಧರ್ಮದಲ್ಲಿ ನಿಷ್ಠೆ ಅನ್ಯ ಧರ್ಮದಲ್ಲಿ ಸಹಿಷ್ಣುತೆ ಹೊಂದಿರುವ ತಾವು ಭಾರತ ಜನಗಣತಿಯ ಮತ ವಿಷಯದಲ್ಲಿ ಆಯುಕ್ತರ ಜೊತೆ ದೆಹಲಿಯಲ್ಲಿ ಚರ್ಚಿಸಿ, 2001ರ ಜನಗಣತಿಯಲ್ಲಿ ಕೇವಲ 'ಲಿಂಗಾಯತ' ಎಂದು ಬರೆಸಬೇಕೆಂದು ಪ್ರಚಾರ ಮಾಡಿ, 'ಲಿಂಗಾಯತ ನಾನು ಲಿಂಗಾಯತ' ಎಂಬ ಕವನ ರಚಿಸಿ, ಲಿಂಗಾಯತರಲ್ಲಿ ನವಚೇತನ ಮೂಡಿಸುತ್ತಿರುವ ಧೀಮಂತರು. ಲಿಂಗ ಮತ್ತು ಆಯತ ಪದಗಳಿಂದ ಲಿಂಗಾಯತ ಎಂಬ ಪದ

ಉಂಟಾಗಿದೆ ಎಂದು, ಲಿಂಗ ಎಂದರೆ ಇಷ್ಟಲಿಂಗ, ಆಯತ ಎಂದರೆ ಧರಿಸಿದವ, ಲಿಂಗಾಯತ ಎಂದರೆ ದೇವರನ್ನು ಇಷ್ಟಲಿಂಗ ರೂಪದಲ್ಲಿ ಶರೀರದ ಮೇಲೆ ಧರಿಸಿದವನು ಎಂದು ತಿಳಿಸಿ, ವಿಶ್ವಗುರು ಬಸವಣ್ಣನವರು ನಮ್ಮ ಧರ್ಮಗುರು, ಲಿಂಗಾಯತ ನಮ್ಮ ಧರ್ಮ, ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು, ವಚನ ಸಾಹಿತ್ಯ ಲಿಂಗಾಯತ ಧರ್ಮ ಸಂಹಿತೆ, ಕನ್ನಡ ಲಿಂಗಾಯತ ಧರ್ಮಭಾಷೆ, ಕೂಡಲಸಂಗಮ ಮತ್ತು ಬಸವ ಕಲ್ಯಾಣ ಲಿಂಗಾಯತ ಧರ್ಮ ಕ್ಷೇತ್ರಗಳು, ಲಿಂಗದೇವ ಲಿಂಗಾಯತ ಧರ್ಮದ ದೇವರೆಂದು ಹೇಳಿ, ಬಸವ ಧರ್ಮ ತತ್ವಗಳನ್ನು ಜಾರಿಗೊಳಿಸಲು ಬಂದ ಈ ಯುಗ ಪ್ರವಾದಿಗೆ ನಮೋನಮಃ. ಲಿಂಗಾಯತ ಒಂದು ಧರ್ಮವಾಗಲು ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿರುವ ಸ್ವತಂತ್ರ ಧರ್ಮವೆಂದು ತಾತ್ವಿಕ ಮತ್ತು ಐತಿಹಾಸಿಕವಾಗಿ ಸ್ಪಷ್ಟಪಡಿಸಿ, ಸ್ವತಂತ್ರ ಧರ್ಮದ ಮಾನ್ಯತೆಯನ್ನು ಪಡೆದು, ಲಿಂಗಾಯತ ಧರ್ಮವನ್ನು ಜಗತ್ತಿನ ಪ್ರಮುಖ ಧರ್ಮಗಳ ಅಗ್ರ ಪಂಕ್ತಿಗೆ ಸೇರಿಸಲು ಪ್ರಯತ್ನಿಸುತ್ತಿರುವ ತಾವು ಲಿಂಗಾಯತ ಸ್ವತಂತ್ರ ಧರ್ಮ ಪ್ರತಿಪಾದಕರು.

### 3. ಲಿಂಗಾಯತ ಧರ್ಮ ಕ್ರಾಂತಿಯ ಧೀರ ಯೋಗಿಣಿಯವರೇ,

ಧರ್ಮದ ಕಡೆ ಜನ ಬರದಾಗ ಧರ್ಮವನ್ನೇ ಜನರ ಮನ-ಮನೆಗೆ ಒಯ್ಯಬೇಕೆಂದು ಹೇಳಿ, ಧರ್ಮ ಪ್ರಚಾರ ಮಾಡುವುದನ್ನೇ ತಮ್ಮ ಕಾಯಕವನ್ನಾಗಿ ಮಾಡಿಕೊಂಡು, ಪೂರ್ಣ ಪ್ರಮಾಣದಲ್ಲಿ ಧರ್ಮ ಪ್ರಸಾರ ಮಾಡುತ್ತ, ಲಿಂಗಾಯತ ಧರ್ಮ ತತ್ವಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಬೋಧಿಸಿ, ಸ್ಫೂರ್ತಿಗೊಳಿಸುತ್ತಿರುವ ಪೂಜ್ಯರೇ ತಾವು ಮಹಾಶಿಕ್ಷಕರು. ಅಂಗದ ಮೇಲೆ ಲಿಂಗವಿದ್ದವರೆಲ್ಲರೂ ಲಿಂಗಾಯತರು ಎಂದು ಬೋಧಿಸಿದ ಬಸವ ವಾಣಿಯನ್ನು ಸಾಕಾರಗೊಳಿಸುತ್ತಿರುವ ಬಸವ ಧರ್ಮದ ನೈಜ ಪ್ರತಿನಿಧಿ. ತಾವು ಮಾಡುತ್ತಿರುವ ಸಮಗ್ರ ಕ್ರಾಂತಿಯು ಲಿಂಗಾಯತರನ್ನು ಎಚ್ಚರಿಸಿ, ಲಿಂಗಾಯತೇತರರನ್ನು ಸಹ ಇಷ್ಟಲಿಂಗಧಾರಿಯಾಗಲು ಪ್ರೇರೇಪಿಸುತ್ತಿದೆ. ಪ್ರತಿವರ್ಷ ಬಸವ ಧರ್ಮ ತತ್ವ ಶಿಬಿರ ಏರ್ಪಡಿಸಿ, ಗರ್ಭಲಿಂಗಧಾರಣೆ, ಲಿಂಗಧಾರಣೆ, ಲಿಂಗದೀಕ್ಷೆ, ವಿವಾಹ, ಶವ ಸಂಸ್ಕಾರ, ನಾಮಕರಣ, ಗೃಹ ಪ್ರವೇಶಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡುತ್ತ, ಆಸಕ್ತರಿಗೆ ಕ್ರಿಯಾಮೂರ್ತಿ ದೀಕ್ಷೆ ಕೊಡುತ್ತ, ಮಾನ್ಯತೆ ಪತ್ರ ಸಹ ನೀಡುತ್ತ, ದಾಖಲೆ ಸ್ಥಾಪಿಸಿರುವ ತಾವು ಲಿಂಗಾಯತ ಧರ್ಮ ಕ್ರಾಂತಿಯ ಧೀರ ಯೋಗಿಣಿಯವರು.

### 4. ಲಿಂಗಾಯತ ಧರ್ಮದ ಪುನರುದ್ಧಾರಕರೇ,

ಇಂದು ಲಿಂಗಾಯತ ಸಮಾಜದಲ್ಲಿ ಪೂಜೆ ಮಾಡುವುದಿರಲಿ, ಕೊರಳಲ್ಲಿ ಇಷ್ಟಲಿಂಗವನ್ನೇ ಧರಿಸದ ಅಸಂಖ್ಯಾತ ಲಿಂಗವಿಲ್ಲದ ಲಿಂಗಾಯತರಿದ್ದಾರೆ ! ಕ್ರಮವಾದ ಧರ್ಮ ಬೋಧನೆ, ಧರ್ಮಜಾಗೃತಿ, ಧರ್ಮ ಸಂಘಟನೆ, ಧರ್ಮ ಆಡಳಿತ, ಧರ್ಮ ತರಬೇತಿ, ಧರ್ಮ ಮಾರ್ಗದರ್ಶನ, ಅನುಸರಣೆ ವ್ಯವಸ್ಥೆಗಳಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇಂದಿನ ಆಚರಣೆಗಳು ''ದೇಹವೇ ದೇವಾಲಯ'' ಎಂದು ಹೇಳಿದ ಬಸವಣ್ಣನವರ ಸರಳ ಲಿಂಗಾಯತ ಧರ್ಮಕ್ಕೆ ವಿರುದ್ಧವಾಗಿರುವುದನ್ನು ಮನಗಂಡು, ಬಸವಣ್ಣನವರ ನೈಜ ತತ್ವಗಳನ್ನು ಚರ್ಚಿಸಲು ಕರೆಯಿತ್ತ ಎದೆಗಾರಿಕೆ ತಮ್ಮದು. ಮೋಕ್ಷ ಸಾಧನೆಗೆ ಪ್ರತಿಯೊಬ್ಬ ಲಿಂಗಾಯತ ಧರ್ಮಿಯು ವಚನಗಳನ್ನು ಅವಲಂಬಿಸಬೇಕೆಂದು ಹೇಳುತ್ತಿರುವ ತಾವು ಕೆಚ್ಚೆದೆಯ ವೀರರು. ಲಿಂಗಾಯತ ಧರ್ಮ ತತ್ವಗಳಂತೆ ಹಲವಾರು ಪ್ರತಿಭಾವಂತ ಧರ್ಮ



ಪ್ರಚಾರಕರನ್ನು ವೈಜ್ಞಾನಿಕ ಮತ್ತು ವೈಚಾರಿಕವಾಗಿ ತರಬೇತಿಗೊಳಿಸಿ, ಸಿಬ್ಬಂದಿ, ಪ್ರಚಾರ ಸಾಮಾಗ್ರಿಗಳ ಜೊತೆ, ಬಸವ ಧ್ವಜ ಹಾರಿಸಿದ ಬಸವ ವಾಹಿನಿ ಎಂದು ಹೆಸರಿಸಿದ ಗಾಡಿಗಳಲ್ಲಿ ಧರ್ಮ ಪ್ರಚಾರಕ್ಕಾಗಿ ಕರ್ನಾಟಕ ಮತ್ತು ಇತರ ರಾಜ್ಯಗಳಿಗೆ ಕಳುಹಿಸುತ್ತಿರುವ ತಾವು ಮಹಾಗುರುಗಳು. ಬಸವಣ್ಣ ಅಂದರೆ ನಾಲ್ಕು ಕಾಲು, ಎರಡು ಕೋಡು, ಒಂದು ಬಾಲ ಇರುವ ಎತ್ತಲ್ಲ, ಅವರೊಬ್ಬ ಮಾನವ ಕುಲೋದ್ಧಾರಿ, ಕೆಳಗೆ ಬಿದ್ದವರನ್ನು ಮೇಲೆ ಎತ್ತಲಿಕ್ಕೆ ಬಂದ ಪ್ರವಾದಿ, ಲಿಂಗಾಯತ ಧರ್ಮದ ಸ್ಥಾಪಕರು ಎಂಬುದನ್ನು ಸಂಶೋಧಿಸಿ, ಪ್ರಚಾರಕ್ಕೆ ತಂದಿರುವ ತಾವು ಲಿಂಗಾಯತ ಧರ್ಮದ ಪುನರುದ್ಧಾರಕರು.

### 5. ಶ್ರೇಷ್ಠ ವಿಶ್ವಧರ್ಮ ಪ್ರವಚನಕಾರರೇ,

ಕಿರಿದಾದ ವಯಸ್ಸಿನಲ್ಲಿಯೇ ಹಿರಿದಾದ ಜ್ಞಾನ ಗಳಿಸಿ, ಬಸವಾದಿ ಶರಣರ ವಚನಗಳನ್ನು ಅರಗಿಸಿಕೊಂಡು, ವಿಶ್ವಧರ್ಮ ಪ್ರವಚನ ಕಾಯಕವನ್ನು 1965ರಲ್ಲಿ ಆರಂಭಿಸಿ, ಕರ್ನಾಟಕ ರಾಜ್ಯಾದ್ಯಂತ ಮತ್ತು ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳಲ್ಲಿ ಅಭೂತಪೂರ್ವ ಪ್ರವಚನಗಳನ್ನು ನಡೆಯಿಸಿ, ತಮ್ಮ ಅಮೋಘವಾಣಿಯಿಂದ ಜನರಲ್ಲಿ ಅಪೂರ್ವ ಜಾಗೃತಿ ಉಂಟು ಮಾಡುತ್ತಿರುವ ತಾವು ಜ್ಞಾನ ದಾಸೋಹದಲ್ಲಿ ಅಗ್ರಗಣ್ಯರು. ವಿಶ್ವದ ಎಲ್ಲ ಲಿಂಗಾಯತರನ್ನು ಪ್ರತಿನಿಧಿಸುವ, ನಿಯಂತ್ರಿಸುವ, ಮಾರ್ಗದರ್ಶಿಸುವ, ಸಂಘಟಿಸುವ, ಸಂಸ್ಕರಿಸುವ ಮತ್ತು ಮುನ್ನಡೆಸುವ ದೈವೀಶಕ್ತಿ ತಮ್ಮಲಿದೆ. ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮ ಸಂಹಿತೆಯ ಪ್ರಕಾರವೇ ವಿಶ್ವದಾದ್ಯಂತ ಒಂದೇ ರೀತಿಯಲ್ಲಿ ತತ್ವಗಳನ್ನು ಪ್ರಸಾರ ಮಾಡುವ ಸಮರ್ಥ ಧಾರ್ಮಿಕ ಆಡಳಿತ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಅರಿತ ತಾವು ಪ್ರವಚನ ಕಾಯಕ ಮಾಡಿ, ಸ್ವಸಾಮರ್ಥ್ಯದಿಂದ ಮಹಾಮನೆ ಮಹಾಮಠಗಳನ್ನು ಕಟ್ಟಿ ಮಹಾಜಗದ್ಗುರುಗಳಾಗಿರುವಿರಿ. ಜನಜೀವನದ ಸುಧಾರಣೆಯನ್ನೇ ಪ್ರವಚನದ ಮುಖ್ಯ ಉದ್ದೇಶವಾಗಿಟ್ಟುಕೊಂಡ ತಾವು ಪ್ರವಚನ ಚಕ್ರವರ್ತಿನಿ. ಸಂಪ್ರದಾಯವಾದಿಗಳ ಪ್ರಶ್ನೆ-ಟೀಕೆ-ಟಿಪ್ಪಣಿಗಳಿಗೆ ಸಮರ್ಥವಾಗಿ ಸಮಾಧಾನ ನೀಡುತ್ತಿರುವ ತಾವು ಶ್ರೇಷ್ಠ ವಿಶ್ವಧರ್ಮ ಪ್ರವಚನಕಾರರು.

### 6. ಶ್ರೇಷ್ಠ ಸಾಹಿತ್ಯ ದಿಗ್ಗಜರೇ,

ಪುಸ್ತಕ ಜ್ಞಾನಕ್ಕಿಂತಲೂ ಹೆಚ್ಚು ಮಸ್ತಕ ಜ್ಞಾನ ಹೊಂದಿರುವ ತಾವು ಜೀವನದ ಕುಲುಮೆಯಲ್ಲಿ ಕಲಿತದ್ದು ಅಪಾರ. ಬಸವಾದಿ ಶರಣರ ವಚನ ಸಾಹಿತ್ಯದ ಮೌಲ್ಯವನ್ನು ಗುರುತಿಸಿ, ಅದರಲ್ಲಿ ವಿಶ್ವದ ಎಲ್ಲ ಜನತೆಗೆ ಎಲ್ಲ ಕಾಲಕ್ಕೆ ಬೇಕಾದ ಅಮೂಲ್ಯ ತತ್ವಗಳಿವೆ, ಸಮಾಜವನ್ನು ತಿದ್ದುವ ಅನುಭವ ಸತ್ಯವಿದೆ, ಒಂದು ಪರಿಪೂರ್ಣ ಧರ್ಮದ ಎಲ್ಲ ಅರ್ಹತೆಗಳಿವೆ, ಅದೊಂದು ಧರ್ಮ ಸಂಹಿತೆ ಎಂಬುದನ್ನು ಸಂಶೋಧಿಸಿ ತೋರಿಸಿದ ತಾವು ವಚನ ವಾಙ್ಮಯ ವಿಶಾರದೆ. ಬಸವಣ್ಣನವರ ಬಗೆಗೆ ಸರಿಯಾದ ತಿಳುವಳಿಕೆ ನೀಡಲು ''ವಿಶ್ವವಿಭೂತಿ ಬಸವಣ್ಣನವರು'' ಎಂಬ ಪುಸ್ತಕದಲ್ಲಿ ಬಸವಣ್ಣನವರಿಗೆ 63 ಅರ್ಹತೆಗಳು ಇರುವುದನ್ನು ಗುರುತಿಸಿ ಬರೆದಿರುವ ತಾವು ಮಹಾಸಂಶೋಧಕರು.

ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಕಾರ್ಯವು ಅಗಾಧವಾಗಿದ್ದು, ತಮ್ಮ ಪುಸ್ತಕಗಳು ಆತ್ಮ ವಿಕಾಸಕ್ಕೆ, ಜನ್ಮ ಸಾರ್ಥಕತೆಗೆ ಮಾರ್ಗದರ್ಶಿಯಾಗಿವೆ. ಬಸವಣ್ಣನವರು ಬೋಧಿಸಿದ ಲಿಂಗಾಯತ ಧರ್ಮದ ತತ್ವಗಳನ್ನು ಕಲ್ಯಾಣ ಕಿರಣ, ಸಾಹಿತ್ಯ ಕೃತಿಗಳ ಮೂಲಕವೂ ಪ್ರಸಾರ ಮಾಡಿ, ಶ್ರೇಷ್ಠ

ಸಾಹಿತಿಯಾಗಿ, ಮಹಾಜ್ಞಾನಿಯಾಗಿ, ಮಹಾಮೇಧಾವಿಯಾಗಿ, ಅಪೂರ್ವ ವಾಗ್ಮಿಯಾಗಿ, ಸಂಪಾದಕರಾಗಿ, ಸಂಶೋಧಕರಾಗಿ, ಕಾದಂಬರಿಕಾರರಾಗಿ, ಪ್ರಬಂಧಕಾರರಾಗಿ, ತಾವು ಬರೆದ ಪುಸ್ತಕಗಳು ತಮ್ಮ ವ್ಯಕ್ತಿತ್ವವನ್ನು ವಿಶ್ವಕ್ಕೆ ತೋರಿಕೊಡುವ ಕನ್ನಡಿಗಳಾಗಿವೆ. ತಮ್ಮಿಂದ ರಚಿಸಲ್ಪಟ್ಟ ಹೆಪ್ಪಿಟ್ಟ ಹಾಲು ಕಾದಂಬರಿಯು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು, ತರಂಗಿಣಿ ಅಮ್ಮಿನಾಭಾವಿ ಸ್ಮಾರಕ ಬಹುಮಾನವನ್ನು ಪಡೆದಿವೆ. ಸಚ್ಚಿದಾನಂದ ತಮ್ಮ ವಚನ ಮುದ್ರಿಕೆ, ಮಾತಾಜಿ, ಬಸವಾತ್ಮಜೆ ಎಂಬ ಕಾವ್ಯನಾಮವನ್ನು ಹೊಂದಿ ಅಸಾಧಾರಣ ವ್ಯಕ್ತಿತ್ವ ಹೊಂದಿರುವ ತಾವು ಶ್ರೇಷ್ಠ ಸಾಹಿತ್ಯ ದಿಗ್ಗಜರು.

**7. ಜಗತ್ತಿನ ಪ್ರಪ್ರಥಮ ಮಹಿಳಾ ಜಗದ್ಗುರುಗಳವರೇ,**

ಸಮತಾವಾದಿ ಬಸವಣ್ಣನವರು ಸ್ತ್ರೀ ಪುರುಷರ ಸಮಾನತೆಯನ್ನು ಬೋಧಿಸಿದರು. ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರ ಪುರುಷ ಗುರು ಪರಂಪರೆ ಸಾಗಿ ಬಂದಂತೆ, ಅಕ್ಕಮಹಾದೇವಿಯವರ ಮಹಿಳಾ ಗುರುಪರಂಪರೆ ಸಾಗಿ ಬರದ ಕಾರಣ ಸ್ತ್ರೀಕುಲೋದ್ಧಾರಕ ಬಸವಣ್ಣನವರ ಸಮಾನತೆ ತತ್ವಗಳನ್ನು ಪೂರ್ಣವಾಗಿ ಆಚರಣೆಗೆ ತರಲು ಅಕ್ಕಮಹಾದೇವಿಯವರ ಹೆಸರಿನಲ್ಲಿ ಗುರುಗಳ ಬೆಂಬಲದಿಂದ ಧಾರವಾಡದಲ್ಲಿ 'ಜಗನ್ಮಾತ ಅಕ್ಕಮಹಾದೇವಿ ಅನುಭಾವ ಪೀಠ' ಎಂಬ ಸ್ತ್ರೀ ಜಗದ್ಗುರು ಪೀಠವನ್ನು ಮೊದಲಿಗೆ ಸ್ಥಾಪಿಸಿ, 21-4-1970 ರಂದು ಅದನ್ನಲಂಕರಿಸಿ, ಪುರುಷರಂತೆ ಮಹಿಳೆಯರು ಸಹ ಗುರುವಾಗಿ ದೀಕ್ಷೆ ಕೊಡಬಹುದೆಂದು ಹೇಳಿ ಧಾರ್ಮಿಕ ಜಗತ್ತಿನ ಚರಿತ್ರೆಯಲ್ಲಿ ನೂತನ ಪಥವನ್ನು ಸೃಷ್ಟಿಸಿರುವ ತಾವು ಜಗತ್ತಿನ ಪ್ರಪ್ರಥಮ ಮಹಿಳಾ ಜಗದ್ಗುರುಗಳವರು.

**8. ಶರಣ ಮೇಳದ ರೂವಾರಿಗಳೇ,**

ಧರ್ಮಪಿತ ಬಸವಣ್ಣನವರು ತಮ್ಮ ಸಿದ್ಧಾಂತವನ್ನು ಸ್ವೀಕರಿಸಿ ಬಂದ ಲಿಂಗಾಯತರನ್ನು ವರ್ಷಕ್ಕೊಮ್ಮೆ ಒಂದು ಕಡೆ ಸೇರಿಸಿ, ಗಣಪರ್ವವನ್ನು ತಮ್ಮ ಕಾಲದಲ್ಲಿ ಮಾಡಿ ತೋರಿಸಿದರು. ಅದರಂತೆ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಿಸಿರುವುದನ್ನು ಗುರುತಿಸಿ, ಅದರ ನೆನಪಿಗಾಗಿ ಪ್ರತಿ ವರ್ಷ ಜನವರಿ 11ರಿಂದ 15ರವರೆಗೆ ಲಕ್ಷಾಂತರ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳನ್ನು ಜಾತಿಪಂಥಲಿಂಗಭೇದಗಳಿಲ್ಲದೆ ಕೂಡಲಸಂಗಮದಲ್ಲಿ ಸೇರಿಸಿ, ಅವರಿಗೆಲ್ಲ ವಸತಿ, ಜ್ಞಾನ, ಅನ್ನ ದಾಸೋಹಗಳನ್ನು ಮಾಡಿ, ಅವರಲ್ಲಿ ಸಮಾನತೆ ಉಂಟುಮಾಡಲು ಶರಣ ಮೇಳ ಎಂಬ ಧಾರ್ಮಿಕ ಉತ್ಸವವನ್ನು 1988ರಿಂದಲೂ ನಡೆಸಿಕೊಂಡು ಬರುತ್ತಿರುವ ತಾವು ಶರಣ ಮೇಳದ ರೂವಾರಿಗಳು.

**9. ಕಲ್ಯಾಣ ಪರ್ವದ ಶಿಲ್ಪಿಗಳೇ,**

'ಕಾಯಕವೇ ಕೈಲಾಸ' ಎಂಬ ದುಡಿಮೆಯ ಸೂತ್ರವನ್ನು ಸಾರಿ, ಕಲ್ಯಾಣ ರಾಜ್ಯವನ್ನು ಕಟ್ಟಿದ ಬಸವ ಕಲ್ಯಾಣದಲ್ಲಿ ಮಹಾಮಾನವತಾವಾದಿ ಬಸವಣ್ಣನವರು ತಮ್ಮ ಕಾಲದಲ್ಲಿ ಗಣಪರ್ವವನ್ನು ಮಾಡುತ್ತಿದ್ದರು. ಅದರಂತೆ ಬಸವಣ್ಣನವರು ಕೂಡಲಸಂಗಮದಲ್ಲಿ ಸ್ಥಾಪಿಸಿದ ಲಿಂಗಾಯತ ಧರ್ಮದ ರೂಪುರೇಷೆ ಬಸವ ಕಲ್ಯಾಣದಲ್ಲಿ ಕಾರ್ಯರೂಪಕ್ಕೆ ಬಂದುದನ್ನು ಗುರುತಿಸಿ, ಆದಿ ಶರಣರ ಸಂದೇಶಗಳನ್ನು ಕೊಂಡಾಡಲು, ಬಸವ ಭಕ್ತರನ್ನು ಸೇರಿಸಿ, ಕಾಯಕ ದಿನದ ಅಂಗವಾಗಿ ಧರ್ಮ ಭೂಮಿ - ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಮೇ 1 ರಿಂದ 3 ರವರೆಗೆ ಕಲ್ಯಾಣ ಪರ್ವ



ಎಂಬ ಹಬ್ಬವನ್ನು 2002 ರಿಂದಲೂ ನಡೆಸಿಕೊಂಡು ಬರುತ್ತಿರುವ ತಾವು ಕಲ್ಯಾಣ ಪರ್ವದ ಶಿಲ್ಪಿಗಳು.

**10. ಅಖಿಲ ಭಾರತ ಬಸವ ಧರ್ಮ ಸಮ್ಮೇಳನಗಳ ಮಹಾಸಂಘಟಕರೇ,**

'ಭಾರತ ದೇಶ ಜೈ ಬಸವೇಶ ' ಎಂದು ಘೋಷಿಸುತ್ತ ಎಲ್ಲ ಕಡೆ ಚದುರಿ ಹೋಗಿರುವ ಲಿಂಗಾಯತರನ್ನು ಬಸವ ತತ್ವದ ಅಡಿಯಲ್ಲಿ ಸಂಘಟಿಸಿ, ಏಕರೂಪದ ಆಚಾರ-ವಿಚಾರಗಳನ್ನು ಸಮಾಜದಲ್ಲಿ ತರಲು ಭಾರತದ ಬೇರೆ ಬೇರೆ ಸ್ಥಳಗಳಲ್ಲಿ ಅಂದರೆ ಪ್ರಥಮ ಬಸವ ಧರ್ಮ ಸಮ್ಮೇಳನವನ್ನು 1993 ರಲ್ಲಿ ತಮಿಳುನಾಡಿನ ಕಾಟೇರಿಯಲ್ಲಿ, 2ನೆಯದನ್ನು 1994ರಲ್ಲಿ ಆಂಧ್ರಪ್ರದೇಶದ ಹೈದರಾಬಾದಿನಲ್ಲಿ, 3ನೆಯದನ್ನು 1995ರಲ್ಲಿ ಕರ್ನಾಟಕದ ಬೆಂಗಳೂರಿನಲ್ಲಿ, 4ನೆಯದನ್ನು 1996ರಲ್ಲಿ ಧಾರವಾಡದಲ್ಲಿ, 5ನೆಯದನ್ನು 1997ರಲ್ಲಿ ದೆಹಲಿಯಲ್ಲಿ, 6ನೆಯದನ್ನು 1998ರಲ್ಲಿ ಗೋಕಾಕದಲ್ಲಿ, 7ನೆಯದನ್ನು ಮುಂಬಯಿಯ ಆಜಾದ ಮೈದಾನದಲ್ಲಿ ನಡೆಯಿಸಿ, ಬಸವ ಧರ್ಮದ ಸಂದೇಶಗಳನ್ನು ಭಾರತದ ಉದ್ದಗಲಕ್ಕೂ ಜಯಭೇರಿ ಹೊಡೆಸಿದ ತಾವು ಅಖಿಲ ಭಾರತ ಬಸವ ಧರ್ಮ ಸಮ್ಮೇಳನಗಳ ಮಹಾಸಂಘಟಕರು.

**11. ಬಸವ ಧರ್ಮದ ರಾಯಭಾರಿಗಳೇ,**

ವ್ಯಕ್ತಿ ಮತ್ತು ಸಮಾಜವನ್ನು ಸಂಘಟಿಸಿ, ಸಂಸ್ಕರಿಸಬಲ್ಲ ತತ್ವ ಮತ್ತು ಆಚರಣೆಗಳೇ ಧರ್ಮವೆಂದು, ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವ ಭಾವವನ್ನು ಬೆಳೆಸುವುದೇ ಮಾನವ ಧರ್ಮವೆಂದು, ಅನ್ನ, ಅರಿವೆ, ಆಶ್ರಯ, ಔಷಧ, ಅರಿವು ಎಂಬ ಜೀವನಾವಶ್ಯಕತೆಗಳನ್ನು ಭೇದಭಾವವಿಲ್ಲದೆ ಎಲ್ಲ ಪ್ರಜೆಗಳಿಗೆ ಕೊಡಬೇಕು ಎನ್ನುವುದೇ ರಾಷ್ಟ್ರಧರ್ಮವೆಂದು, ದೇವರನ್ನೇ ತಾಯಿ ತಂದೆಯೆಂದು ಭಾವಿಸಿ, ಸಕಲ ಮಾನವ ಕುಲಕೋಟಿಯನ್ನು ಸೋದರ ಭಾವನೆಯಿಂದ ಕಾಣುವುದೇ ವಿಶ್ವಧರ್ಮವೆಂದು ತಿಳಿಸಿದ ತಾವು ಜಂಗಮ ಜ್ಯೋತಿ. ವಿಶ್ವಧರ್ಮದ ಮಣಿಹ ಹೊತ್ತು ಲಿಂಗಾಯತ ಧರ್ಮದ ವೈಶಿಷ್ಟ್ಯಗಳನ್ನು, ಭಾರತದ ಆಧ್ಯಾತ್ಮಿಕ ಸಂದೇಶಗಳನ್ನು 1976ರಲ್ಲಿ ಇಂಗ್ಲೆಂಡ, 1980ರಲ್ಲಿ ಅಮೆರಿಕ, ಕೆನಡ ವಿದೇಶಗಳಿಗೆ ಮತ್ತೆ 14-6-2003 ರಿಂದ 6-11-2003ರ ವರೆಗೆ ಅಮೆರಿಕದಲ್ಲಿ ಪ್ರವಾಸ ಮಾಡಿ ಇಷ್ಟಲಿಂಗ ಪೂಜೆ ಮತ್ತು ಪ್ರಾತ್ಯಕ್ಷಿಕೆ ಮತ್ತು ವಿವಿಧ ವಿಷಯಗಳ ಬಗ್ಗೆ ಪ್ರವಚನ ನೀಡಿ ವಿಜಯ ದುಂದುಭಿ ಮೊಳಗಿಸಿದ ತಾವು ಬಸವ ಧರ್ಮದ ರಾಯಭಾರಿಗಳು.

**12. ತಾಯಿಭಾಷೆ ಕನ್ನಡಕ್ಕೆ ಮೊದಲ ಸ್ಥಾನ ನೀಡಿದ ಮಹಾಮಾತೆಯವರೇ,**

ಕನ್ನಡ ನಾಡು ನುಡಿ ಧರ್ಮ ಸಂಸ್ಕೃತಿಗೆ ಅನುಪಮ ಸೇವೆ ಮಾಡುತ್ತಿರುವ ತಮ್ಮನ್ನು ಯಾವ ಬಿರುದಿನಿಂದ ಕರೆದರೂ ಯಾವ ಪದವಿ ಕೊಟ್ಟರೂ ಸಾಲದು. ಬಸವಣ್ಣನವರು 800 ವರ್ಷಗಳ ಹಿಂದೆಯೇ ಲಿಂಗಾಯತ ಧರ್ಮ ತತ್ವಗಳನ್ನು ವಚನಗಳ ಮೂಲಕ ಕನ್ನಡದಲ್ಲಿ ಬರೆದು, ಕನ್ನಡ ಕುಲ ನಿರ್ಮಾಪಕರೆನಿಸಿ, ಲಿಂಗಾಯತ ಧರ್ಮ ಸಂಹಿತೆಯಾದ ವಚನ ಸಾಹಿತ್ಯವು ಕನ್ನಡದಲ್ಲಿ ಇರುವುದರಿಂದಲೂ, ಲಿಂಗಾಯತ ಧರ್ಮ ಭಾಷೆ ಕನ್ನಡ ಆಗಿರುವುದರಿಂದಲೂ, ಲಿಂಗಧಾರಣೆ, ಮದುವೆ, ನಾಮಕರಣ ಮುಂತಾದ ಎಲ್ಲ ವಿಧಿವಿಧಾನಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವ ಕನ್ನಡದಲ್ಲಿಯೇ ಮಂತ್ರ ಹೇಳಿ ನಡೆಸಬೇಕೆಂದು ಬೋಧಿಸಿ, ಮಂತ್ರಗಳನ್ನು ತಾವೇ ಬರೆದು, ಪ್ರಾಯೋಗಿಕವಾಗಿ ಮಾಡಿ ತೋರಿಸಿ, ಎಷ್ಟೇ ಭಾಷೆ ಕಲಿತರೂ ತಾಯಿಭಾಷೆ ಕನ್ನಡಕ್ಕೆ ಮೊದಲ ಸ್ಥಾನ

ನೀಡಬೇಕೆಂದು ಹೇಳಿ, ತಾವು ತಾಯಿಭಾಷೆ ಕನ್ನಡಕ್ಕೆ ಮೊದಲ ಸ್ಥಾನ ನೀಡುತ್ತಿರುವ ಮಹಾಮಾತೆಯವರು.

**13. ಬಸವ ಧರ್ಮದ ಹಿತಚಿಂತಕರೇ,**

ಭಾರತದ ರಾಜಧಾನಿ ದೆಹಲಿಯ ಕೆಂಪು ಕೋಟೆ ಮೈದಾನದಲ್ಲಿ 18-10-1997ರಂದು ಅಖಿಲ ಭಾರತ 5ನೆಯ ಬಸವ ಧರ್ಮ ಸಮ್ಮೇಳನ ನಡೆಸಿ, ಬಸವ ಧ್ವಜ ಏರಿಸಿ, ದೆಹಲಿಯ ಒಂದು ಮುಖ್ಯ ರಸ್ತೆಗೆ, ಒಂದು ಮುಖ್ಯ ವೃತ್ತಕ್ಕೆ, ಒಂದು ಬಡಾವಣೆಗೆ, ದೆಹಲಿ-ಬೆಂಗಳೂರಿನ ರೈಲಿಗೆ ಬಸವಣ್ಣನವರ ಹೆಸರಿಡಬೇಕೆಂದು, ಭಾರತದ ಎಲ್ಲ ಭಾಷೆಗಳಲ್ಲಿ ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ಬಸವೇಶ್ವರರ ವಚನಗಳನ್ನು ಪ್ರಸಾರ ಮಾಡಬೇಕೆಂದು, ಬಸವೇಶ್ವರರ ಜೀವನ, ಸಾಧನೆ, ಸಂದೇಶಗಳನ್ನು ಪ್ರಾಥಮಿಕ, ಪ್ರೌಢ ಮತ್ತು ಮಹಾವಿದ್ಯಾಲಯದ ಪಠ್ಯಕ್ರಮಗಳಲ್ಲಿ ಅಳವಡಿಸಬೇಕೆಂದು, ಬಸವಣ್ಣನವರ ಬಗ್ಗೆ ದೂರದರ್ಶನ ಧಾರಾವಾಹಿಯನ್ನು ಸಿದ್ಧಪಡಿಸಬೇಕೆಂದು, ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮದ ಅನುಯಾಯಿಗಳನ್ನು ಧಾರ್ಮಿಕ ಅಲ್ಪ ಸಂಖ್ಯಾತರೆಂದು ಪರಿಗಣಿಸಿ, ಅಲ್ಪ ಸಂಖ್ಯಾತರಿಗೆ ಕೊಡುವ ಎಲ್ಲ ಸೌಲಭ್ಯಗಳನ್ನು ನೀಡಬೇಕೆಂದು, ಭಾರತ ಮತ್ತು ರಾಜ್ಯ ಸರ್ಕಾರವನ್ನು ಕೋರಲು ನಿರ್ಣಯ ತೆಗೆದುಕೊಂಡಿರುವ ತಾವು ಬಸವ ಧರ್ಮದ ಹಿತ ಚಿಂತಕರು.

**14. ಉಜ್ವಲ ರಾಷ್ಟ್ರ ಪ್ರೇಮಿಗಳೇ,**

ರಾಷ್ಟ್ರದಲ್ಲಿ ಅಧರ್ಮ, ಅನೀತಿ, ಅಸತ್ಯ, ಅನ್ಯಾಯ, ಅಕ್ರಮಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸೃಷ್ಟಿಕರ್ತ ದೇವರನ್ನು ಇಷ್ಟಲಿಂಗವೆಂಬ ಕುರುಹುವಿನ ಮೂಲಕ ಧರ್ಮವನ್ನೇ ಸಾಧನವಾಗಿ ಮಾಡಿಕೊಂಡು ಲಿಂಗ-ಜಾತಿ ಭೇದಗಳಿಲ್ಲದ ಕಲ್ಯಾಣ ರಾಜ್ಯ ನಿರ್ಮಾಣಕ್ಕಾಗಿ ಶ್ರಮಿಸಿದ ಬಸವಣ್ಣನವರ ತತ್ವಗಳ ಅನುಷ್ಠಾನವೇ ಇಂದಿನ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂದು ಸಾರಿ, ಜನತೆಯಲ್ಲಿ ನೀತಿಯನ್ನು ತುಂಬುತ್ತಿರುವ ತಾವು ಕ್ರಿಯಾಶೀಲ ಮಹಂತರು. ರಾಷ್ಟ್ರ ಮತ್ತು ಧರ್ಮದ ವಿಷಯ ಬಂದಾಗ ಮೊದಲ ಆದ್ಯತೆ ರಾಷ್ಟ್ರಕ್ಕೆ ಸಲ್ಲಬೇಕೆಂದು, ಪ್ರತಿಯೊಬ್ಬ ಭಾರತೀಯನು ಯಾವುದೇ ಧರ್ಮವಿರಲಿ, ಇನ್ನೂ ಏನೇ ಇರಲಿ, ಮೊದಲು ಆತ ಭಾರತೀಕರಣ ಹೊಂದಬೇಕೆಂದು, ಧರ್ಮವು ವ್ಯಕ್ತಿಯ ಆತ್ಮಸಮಾಜ, ರಾಷ್ಟ್ರದ ಹಿತಾಸಕ್ತಿಗೆ ದಕ್ಕೆಯಾಗದಂತೆ ಆಚರಿಸಲ್ಪಡಬೇಕೆಂದು ಗುಡುಗಿದಿರಿ. ಧರ್ಮದ ನಿಜವಾದ ಅರ್ಥ ತಿಳಿದು ನಡೆದರೆ ಅದು ಒಡಕು ಹುಟ್ಟಿಸದೆಂದು, ಹಿಂದು ಒಂದು ಮಹಾಪರಂಪರೆ ಎಂದು, ವಿವಿಧ ಧರ್ಮ ಪಂಥಗಳು ಸಾಮರಸ್ಯ ಸ್ಥಾಪಿಸಿ, ದೇಶವನ್ನು ಮಾನವೀಯ-ರಾಷ್ಟ್ರೀಯ-ನೈತಿಕ ನೆಲಗಟ್ಟಿನ ಮೇಲೆ ಕಟ್ಟಬೇಕೆಂದು, ರಾಷ್ಟ್ರದ ಏಕತೆ-ಭದ್ರತೆ-ಸಮಗ್ರತೆಗಳಿಗೆ ಪ್ರಾಮುಖ್ಯತೆ ನೀಡಿ, ಎಲ್ಲರೂ ರಾಷ್ಟ್ರಪ್ರೇಮಿಗಳಾಗಬೇಕೆಂದು ತಿಳಿಸಿ, ಜನರಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸುತ್ತಿರುವ ತಾವು ಉಜ್ವಲ ರಾಷ್ಟ್ರಪ್ರೇಮಿಗಳು.

**15. ಜನತಾ ಜಗದ್ಗುರುಗಳವರೇ,**

ಬಸವಾದಿ ಶರಣರ ದಿವ್ಯ ಸಂದೇಶಗಳನ್ನು ಪರಿಚಯಿಸಲು ಬಸವ ತತ್ವ ಪರೀಕ್ಷೆಗಳು, ಕೂಡಲಸಂಗಮದ ಮಹಾಮಠದಲ್ಲಿ ಬಸವ ತತ್ವಾನುಯಾಯಿಗಳನ್ನು ಬೆಸೆಯಲು ಗಣಲಿಂಗ,



ದಿವ್ಯಜ್ಞಾನವನ್ನು ಎಲ್ಲರಿಗೂ ಹಂಚಲು ದೆಹಲಿಯಲ್ಲಿ ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ, ಯುವಶಕ್ತಿಯನ್ನು ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ರೂಪಿಸಲು ರಾಷ್ಟ್ರ ಕಲ್ಯಾಣ ವಿದ್ಯಾರ್ಥಿಗಣ, ಸಮಾಜ-ರಾಷ್ಟ್ರಗಳಲ್ಲಿ ಅನ್ಯಾಯ ಕಂಡಾಗ ಹೋರಾಡಲು ರಾಷ್ಟ್ರೀಯ ಬಸವ ದಳ, ಸ್ತ್ರೀಯರ ಅಭಿವೃದ್ಧಿಗಾಗಿ ಹೋರಾಡಲು ಕ್ರಾಂತಿ ಗಂಗೋತ್ರಿ ಮಹಿಳಾಗಣ, ಮಧೂವರರ ವಿವಾಹ ಕೇಂದ್ರ ಮುಂತಾದವುಗಳನ್ನು ಸ್ಥಾಪಿಸಿರುವಿರಿ. ಯಾವ ಸಿಂಹಾಸನ-ಕಿರೀಟ, ಛತ್ರಿ-ಚಾಮರಗಳ ಮೋಹವಿಲ್ಲದೆ ನಿಜವಾಗಿ ಜನತೆಯ ಬಳಿಗೆ ಹೋಗಿ ಜ್ಞಾನದಾಸೋಹ ಮಾಡುತ್ತ ಜನರ ಮನಸ್ಸನ್ನು ಸೂರೆಗೊಂಡಿರುವ ತಾವು ಜನತಾ ಜಗದ್ಗುರುಗಳವರು.

**16. ಸಮಾಜ ಸೇವಾಧುರಂಧರರೇ,**

ತಮ್ಮ ಕಾರ್ಯಕ್ಷೇತ್ರ ಕೇವಲ ಧರ್ಮಕ್ಕೆ ಮೀಸಲಾಗದೆ ಸಾಮಾಜಿಕ ನೆಮ್ಮದಿ, ವೈಚಾರಿಕತೆಗಳ ಕಡೆಗೂ ಪಸರಿಸಿತು. ಸತ್ಯಪ್ರಿಯತೆ, ವಿವೇಕ, ಧೈರ್ಯ, ಸದ್ಭಾವನೆ, ವೈಜ್ಞಾನಿಕ ಮನೋಭಾವ, ಸತತ ಪರಿಶ್ರಮಗಳಿಂದ ಜನರ ಮನಸ್ಸನ್ನು ಗೆದ್ದುಕೊಂಡು, ತಮ್ಮ ಸ್ವಂತ ಕರ್ತೃತ್ವ ಶಕ್ತಿಯ ಮಹಾಬಲದಿಂದ ಜೀವನವನ್ನು ಪುಟಕ್ಕಿಟ್ಟ ಚಿನ್ನದಂತೆ ಬೆಳಗಿಸುತ್ತಿದ್ದೀರಿ. ಜೀವನದುದ್ದಕ್ಕೂ ಆದರ್ಶಮಯ ವ್ಯಕ್ತಿತ್ವವುಳ್ಳ ತಮ್ಮ ಗಂಡೆದೆ ಗಟ್ಟಿತನದಿಂದ ಉತ್ತಮ ಸಮಾಜವನ್ನು ನಿರ್ಮಿಸಲು ಅಹರ್ನಿಶಿ ದುಡಿಯುತ್ತಿರುವಿರಿ. ಸದಾ ನಗು ಮುಖ, ಹಿಡಿದ ಕಾರ್ಯವನ್ನು ನಿಷ್ಠೆಯಿಂದ ಪೂರೈಸುವ ಛಲ, ತಮ್ಮ ಜನ್ಮಸ್ವಭಾವವಾಗಿರುವ ತಾವು ಸಮಾಜ ಸೇವಾಧುರಂಧರರು.

**17. ಸೌಜನ್ಯಶೀಲರೇ,**

ತಮ್ಮ ಬಸವ ಭಕ್ತಿ, ಬಸವ ಧರ್ಮ ಪ್ರಚಾರ ಶೈಲಿ ಕಂಡು ಎಂಥವರೂ ತಲೆದೂಗಬೇಕು. ಬಹುಶಃ ತಾವು ಬಸವ ತತ್ವ ಪ್ರಸಾರ ಮಾಡದಿದ್ದರೆ ಇಷ್ಟು ಹೊತ್ತಿಗೆ ಲಿಂಗಾಯತ ಧರ್ಮ ಆಚರಣೆ ಇನ್ನೂ ನಶಿಸಿ ಹೋಗುತ್ತಿತ್ತೋ ಏನೊ ! ಬಸವಣ್ಣನವರ ಆಶೀರ್ವಾದದ ಅಭಯಹಸ್ತ ತಮ್ಮ ಬೆಂಗಾವಲಿಗಿರುವುದರಿಂದ ಲಕ್ಷ ಲಕ್ಷ ಜನರನ್ನು ಸಂಘಟಿಸುತ್ತಿರುವುದು ಸಾಮಾನ್ಯವೇನಲ್ಲ. ತಾವು ಚಲಿಸುವ ಜ್ಞಾನ ದೇಗುಲವಾಗಿ ಅಸಂಖ್ಯಾತ ಜನರಿಗೆ ಜ್ಞಾನದ ಬೆಳಕನ್ನು ಕೊಟ್ಟು, ಕೈಹಿಡಿದು ಮಗುವನ್ನು ಮುನ್ನಡೆಸುವ ತಾಯಿಯಂತೆ ಭಕ್ತರನ್ನು ಮುನ್ನಡೆಸುತ್ತಿರುವ ತಾವು ಸೌಜನ್ಯಶೀಲರು.

**18. ಏಕದೇವ ಉಪಾಸನೆಯ ಪ್ರಬಲ ಪ್ರತಿಪಾದಕರೇ,**

ಮಂತ್ರ ಪುರುಷ ಬಸವಣ್ಣನವರು "ದೇವನೊಬ್ಬ" ಎಂದು ಹೇಳುವಂತೆ, ದೇವರು ಒಬ್ಬನೇ, ಅವನೇ ಸೃಷ್ಟಿಕರ್ತ ಲಿಂಗದೇವ. ನಿರಾಕಾರನಾದ ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು ಬಟ್ಟೆ ಅಥವಾ ಕರಡಿಗೆಯಲ್ಲಿ ಇಟ್ಟುಕೊಂಡು, ಅದನ್ನು ಎದೆಯ ಮೇಲೆ ಧರಿಸಿಕೊಂಡು, ಅನ್ಯ ದೈವಗಳನ್ನು ಪೂಜಿಸದೆ, ಉಪಾಸ್ಯ ಮೂರ್ತಿಗಳಾದ ಗುರುಲಿಂಗಜಂಗಮರನ್ನು ಮಾತ್ರ ಪೂಜಿಸಬೇಕೆಂಬ ಸತ್ಯವನ್ನು ಅಷ್ಟೇ ನಿಖರವಾಗಿ ಹೇಳುತ್ತಿರುವ ಅಪರೂಪ ವ್ಯಕ್ತಿತ್ವದ ತಾವು ಏಕದೇವ ಉಪಾಸನೆಯ ಪ್ರಬಲ ಪ್ರತಿಪಾದಕರು.

**19. ದಿಟ್ಟ ಹೋರಾಟಗಾರರೇ,**

ತಾವು ಬಸವಣ್ಣನವರನ್ನು ಧರ್ಮ ಗುರು, ಧರ್ಮ ಸ್ಥಾಪಕರು ಎಂದು ಕರೆಯಲಿಕ್ಕೆ,

ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂದು ಹೇಳಲಿಕ್ಕೆ, ಜಾತಿ ಭೇದವಿಲ್ಲದೆ ಎಲ್ಲ ಆಸಕ್ತರಿಗೆ ಲಿಂಗ ಸಂಸ್ಕಾರ ಕೊಡಲಿಕ್ಕೆ, ಸ್ತ್ರೀಪುರುಷರು ಸಮಾನರೆಂದು ಪ್ರತಿಪಾದಿಸಲಿಕ್ಕೆ, ಬಸವ ತತ್ವಗಳನ್ನು ಜನರಿಗೆ ತಿಳಿಸಲಿಕ್ಕೆ, ಕಲ್ಬುರ್ಗಿ ವಿಶ್ವವಿದ್ಯಾಲಯಕ್ಕೆ ಶ್ರೀ ಗುರು ಬಸವೇಶ್ವರರ ಹೆಸರಿಡಲಿಕ್ಕೆ ಮಾಡಿದ ಹೋರಾಟ ಅಷ್ಟಿಷ್ಟಲ್ಲ! ಈ ಸಂದರ್ಭದಲ್ಲಿ ತಾವು ತೋರಿದ ಸಾಹಸ ಶ್ಲಾಘನೀಯ. ರಾಶಿರಾಶಿ ವಚನ ಸಾಹಿತ್ಯದ ಮೇಲೆ ಉತ್ಕೃಷ್ಟ ಗ್ರಂಥಗಳು ಇರುವಾಗ, ಬಸವಾದಿ ಶರಣರ ಹೆಸರಿಗೆ ಕಳಂಕ ತರುವ ಪ್ರಯತ್ನಗಳ ವಿರುದ್ಧ ಪ್ರತಿಭಟಿಸುತ್ತಿರುವ ತಾವು ದಿಟ್ಟ ಹೋರಾಟಗಾರರು.

**20. ಮಾನವೀಯತೆಯನ್ನು ಮೆರೆದ ಮಾನವತಾವಾದಿಗಳೇ,**

ತಾವು ಹೆಣ್ಣು ಮಕ್ಕಳಿಗೂ ಆಶ್ರಯ ನೀಡಿ, ಉತ್ತಮ ಪ್ರವಚನಕಾರರನ್ನಾಗಿ ಮಾಡಿರುವುದು ಪ್ರಶಂಸನೀಯ. ಮಾಜಿ ಸಚಿವ ಶ್ರೀ ನಾಗಪ್ಪನವರ ಅಪಹರಣವಾದಾಗ ತಾವು ಕಾಮಗೆರೆಗೆ ಬಂದು, ಶರಣೆ ಪರಿಮಳ ಅವರಿಗೆ ಧೈರ್ಯ ತುಂಬಿ, ಅರಣ್ಯಕ್ಕೆ 2 ತಂಡಗಳನ್ನು ಕಳಿಸಿ, ಶೋಧಿಸಿ, ಧರಣಿ ಸತ್ಯಾಗ್ರಹ ನಡೆಸಿ, 5-10-2002 ರಂದು ಮೌನ ಮೆರವಣಿಗೆ ನಡೆಸಿ, ಕಾಡಿಗೆ ತೆರಳಲು ರಾಷ್ಟ್ರೀಯ ಬಸವ ದಳಕ್ಕೆ ಅಧಿಕೃತ ಅನುಮತಿ ಕೇಳಿ, ಕೊಳ್ಳೇಗಾಲ ತಾಲ್ಲೂಕು ಕಛೇರಿ ಮುಂದೆ ಭಾಷಣ ಮಾಡಿ, ಉಪ ವಿಭಾಗಾಧಿಕಾರಿಯವರ ಮೂಲಕ ಮುಖ್ಯಮಂತ್ರಿಯವರಿಗೆ ಮನವಿ ಪತ್ರ ಕಳಿಸಿ, ಶೀಘ್ರ ಬಿಡುಗಡೆಗೆ ಆಗ್ರಹಿಸಿದ ತಾವು ಮಾನವೀಯತೆಯನ್ನು ಮೆರೆದ ಮಾನವತಾವಾದಿಗಳು.

**21. ಶ್ರೇಷ್ಠ ಶಿಕ್ಷಣ ತಜ್ಞರೇ,**

ಶಿಕ್ಷಣವೆಂದರೆ ಪೋಷಿಸುವುದು, ಸಂಸ್ಕರಿಸುವುದು ಎಂದು, ಮಾನವನಲ್ಲಿರುವ ಮೂರು ಘಟಕಗಳಾದ ತನು-ಮನ-ಆತ್ಮಗಳ ವಿಕಾಸವೇ ಶಿಕ್ಷಣವೆಂದು, ತನುವಿಗೆ ಅನ್ನ, ಮನಸ್ಸಿಗೆ ಜ್ಞಾನ, ಆತ್ಮಕ್ಕೆ ಧ್ಯಾನ ಸಂಸ್ಕಾರ ದೊರೆತರೆ ಮಾನವನ ಉನ್ನತಿ ಸಾಧ್ಯವೆಂದು, ಮನುಷ್ಯನಲ್ಲಿ ಸುಪ್ತವಾಗಿರುವ ಶಕ್ತಿಯನ್ನು ಅರಳಿಸುವುದೇ ಶಿಕ್ಷಣವೆಂದು, ಪಾಶವಿಕ ಮನುಷ್ಯನನ್ನು ನಾಗರಿಕ ಮನುಷ್ಯನನ್ನಾಗಿ, ಸತ್ಪ್ರಜೆಯನ್ನಾಗಿ, ಸುಸಂಸ್ಕೃತನನ್ನಾಗಿ, ದೇವ ಮಾನವನನ್ನಾಗಿ ಮಾಡುವುದೇ ಶಿಕ್ಷಣದ ಧ್ಯೇಯವೆಂದು, ಮಾನವನ ಸರ್ವಾಂಗೀಣ ಬೆಳವಣಿಗೆಯೇ ಶಿಕ್ಷಣದ ಗುರಿಯೆಂದು ಹೇಳುತ್ತಿರುವ ತಾವು ಶ್ರೇಷ್ಠ ಶಿಕ್ಷಣ ತಜ್ಞರು.

**22. ಸಮಾಜ ಸುಧಾರಕರೇ,**

ತಮ್ಮ ಅಪಾರ ಜ್ಞಾನ ಕಂಡು 'ಮಾತೆ' ಎಂದು, ಅಸಾಧಾರಣ ವ್ಯಕ್ತಿತ್ವ ನೋಡಿ 'ಮಾನವ ಗಣಕಯಂತ್ರ' ಎಂದು ಮಹಾಜಗದ್ಗುರು ಶ್ರೀ ಶ್ರೀ ಲಿಂಗಾನಂದಸ್ವಾಮಿಗಳವರು, 'ಮಾತಾಜಿಯವರ ನಾಲಿಗೆಯಲ್ಲಿ ಕನ್ನಡ ಸಾಹಿತ್ಯ ಸರಸ್ವತಿಯು ನಾಟ್ಯವಾಡುತ್ತಾಳೆ' ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಶ್ರೀ ದೇ.ಜವರೇಗೌಡರು ಹೇಳಿರುವುದು ತಮ್ಮ ಪ್ರತಿಭೆಗೆ ತಕ್ಕ ಮನ್ನಣೆ. ತಮ್ಮ ಕಾರ್ಯಕ್ರಮಗಳು ಸಮಾಜದ ನವಜಾಗೃತಿಗೆ ಊದಿದ ರಣಕಹಳೆಗಳಾಗಿವೆ. ಸಮಾಜದಲ್ಲಿ ಶಿಸ್ತು ಶಾಂತಿ-ಸೌಹಾರ್ದತೆಗಳನ್ನು ಸ್ಥಾಪಿಸಲು ದುಡಿಯುತ್ತಿರುವ ತಾವು ಸಮಾಜ ಸುಧಾರಕರು.



**23. ಮಾತೃ ಹೃದಯಿಗಳೇ,**

ತಾವು ದೇವನೊಬ್ಬ, ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ ಮುಂತಾದ ಬಸವಣ್ಣನವರ ವಿಶ್ವ ಸಂದೇಶಗಳ ಮೂಲಕ ಮಾಡುತ್ತಿರುವ ಕಾಯಕ ಮೂಢತನ ನಿವಾರಣೆಗಾಗಿ, ಲಿಂಗಾಯತ ಧರ್ಮದ ಸ್ವತಂತ್ರ ಅಸ್ತಿತ್ವದ ಉಳಿವಿಗಾಗಿ ಮಾನವ ಜನಾಂಗದ ಶ್ರೇಯಸ್ಸಿಗಾಗಿ, ರಾಷ್ಟ್ರ ಕಲ್ಯಾಣಕ್ಕಾಗಿ, ವಿಶ್ವಶಾಂತಿಗಾಗಿಯೇ ಹೊರತು ವೈಯಕ್ತಿಕ ಸ್ವಾರ್ಥಕ್ಕಲ್ಲ ಎಂಬುದನ್ನು ಸಮಾಜ ಆದಷ್ಟು ಬೇಗ ಅರಿತುಕೊಂಡು ತಮ್ಮ ಪ್ರತಿಭೆಯನ್ನು ಉಪಯೋಗಿಸಿಕೊಳ್ಳಲಿ. ಈಗಲಾದರೂ ತಮ್ಮ ಸೇವೆಯನ್ನು ಸರ್ಕಾರ ಮತ್ತು ಸಂಘಸಂಸ್ಥೆಗಳು ಗುರುತಿಸಿ, ತಮಗೆ ಅತ್ಯಂತ ಹೆಚ್ಚಿನ ಗೌರವವನ್ನು ನೀಡುವಂತಾಗಲಿ.

**24. ಧರ್ಮಶೀಲರೇ,**

ತಾವು ಸಮಸ್ತ ಭಾರತದ ಧರ್ಮವಂತರ ಪ್ರೀತಿಗೆ ಪಾತ್ರರಾಗಿ ಧಾರ್ಮಿಕ ರಂಗದಲ್ಲಿ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿ, ಸಾರ್ವಜನಿಕ, ಸಾಮಾಜಿಕ, ಧಾರ್ಮಿಕ, ನೈತಿಕ, ಆಧ್ಯಾತ್ಮಿಕ, ಶೈಕ್ಷಣಿಕ ರಂಗಗಳಲ್ಲಿ ತುಂಬ ಪ್ರಭಾವ ಬೀರಿದ್ದೀರಿ. ಇದು ನಿಜವಾಗಿಯೂ ತಮ್ಮ ಜನಪ್ರಿಯತೆ ಮತ್ತು ಘನ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತದೆ. ತಾವು ಇಷ್ಟೆಲ್ಲ ಕೆಲಸಗಳ ಸಂಕಲ್ಪ ಮಾಡಿದ್ದನ್ನು ನೋಡಿದರೆ ಭಾರತ ತಮ್ಮಂಥ ಅನರ್ಘ್ಯ ರತ್ನವನ್ನು ಪಡೆದದ್ದು ಒಂದು ಭಾಗ್ಯವೇ ಸರಿ.

**25. ಪರಮಪೂಜ್ಯರೇ,**

ಇಂತಹ ತಾವು ಇಲ್ಲಿಗೆ ದಯಮಾಡಿಸಿ, ಈ ಸನ್ಮಾನ ಪತ್ರವನ್ನು ಸ್ವೀಕರಿಸಲು ಒಪ್ಪಿದ್ದಕ್ಕಾಗಿ ನಾವು ತಮ್ಮ ಚರಣಕಮಲಗಳಿಗೆ ಶರಣು ಶರಣಾರ್ಥಿಗಳನ್ನು ಸಲ್ಲಿಸುತ್ತೇವೆ. ಸೃಷ್ಟಿಕರ್ತ ಲಿಂಗದೇವರು ಮತ್ತು ಧರ್ಮಕರ್ತ ಬಸವಣ್ಣನವರು ತಮಗೆ ಹೆಚ್ಚಿನ ಆಯುಷ್ಯ, ಉತ್ತಮ ಆರೋಗ್ಯ, ಸಕಲ ಭಾಗ್ಯಗಳನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ. ತಮ್ಮ ಗುಣಗಾನ ನಮ್ಮ ಉದ್ದೇಶವಲ್ಲ. ತಮಗೆ ತಮ್ಮ ಪರಿವಾರಕ್ಕೆ ತಮ್ಮ ವಿಶಿಷ್ಟ ಕೆಲಸಕ್ಕೆ ನಮ್ಮ ಭಕ್ತಿಯನ್ನು ಈ ಸನ್ಮಾನ ಪತ್ರದ ಮೂಲಕ ಸಮರ್ಪಿಸುತ್ತೇವೆ.

**ಅನುಭವ ಮಂಟಪಕ್ಕೆ ಅಂದು ಅಕ್ಕಮಹಾದೇವಿ**
**ಬಸವ ಮಂಟಪಕ್ಕೆ ಇಂದು ಮಾತೆ ಮಹಾದೇವಿ**

**ಜಯಗುರು ಬಸವೇಶ ಹರಹರ ಮಹಾದೇವ**
**ವಿಶ್ವಗುರು ಬಸವೇಶ್ವರ ಮಹಾತ್ಮಕೀ ಜೈ**

ಶರಣು ಶರಣಾರ್ಥಿಗಳು,
ಸು.ಮಲ್ಲಿಕಾರ್ಜುನಪ್ಪ ಮತ್ತು ಗ್ರಾಮಸ್ಥರು,
ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ ಘಟಕ, ಮತ್ತೀಪುರ

ಲೇಖಕರು: ಸು.ಮಲ್ಲಿಕಾರ್ಜುನಪ್ಪ ಎಂ.ಎ., ಬಿ.ಇಡಿ., ನಿವೃತ್ತ ಉಪನ್ಯಾಸಕರು, ಮತ್ತೀಪುರ

# ಬಸವ ಗಂಗೋತ್ರಿ ನಗರ ಯೋಜನೆ

### ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ, ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸ-ಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:-

ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

## ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

CPMG/KA/BGW - 50/2003-2005 WPP(W) - 17 R.No. 19980/70

